# ಮಂಡ್ಯ ಜಿಲ್ಲೆಯ ಶಿಖರ ಸಾಧಕರು



ಶ್ರೀ.ಎಂ.ಎಲ್ ಶ್ರೀಕಂಠೇಶಗೌಡ ರವರು
ಹಿರಿಯ ಸಾಹಿತಿ



ಶ್ರೀ.ಹೆಚ್.ಎಲ್.ನಾಗೇಗೌಡ ರವರು
ಜಾನಪದ ಸಾಹಿತಿ



ಶ್ರೀ.ಇ.ಎಸ್.ವೆಂಕಟರಾಮಯ್ಯ ರವರು
ಸುಪ್ರಿಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ



ಶ್ರೀ.ಎಸ್.ಎನ್.ಸ್ವಾಮಿಗೌಡ ರವರು
ಕಬ್ಬು ಬೆಳೆ ತಜ್ಞರು



ಶ್ರೀ.ಎಸ್.ಎಂ.ಕೃಷ್ಣ ರವರು
ಮಾಜಿ ಮುಖ್ಯಮಂತ್ರಿ






ಶ್ರೀ.ಬಿ.ಎಸ್.ಯಡಿಯೂರಪ್ಪ ರವರು
ಮಾಜಿ ಮುಖ್ಯಮಂತ್ರಿ



ಶ್ರೀ.ರವಿ ರವರು
ಇಸ್ರೋ ನಿರ್ದೇಶಕರು



ಶ್ರೀ.ಆಕಾಶ್ ರವರು
ಇಸ್ರೋ ನಿರ್ದೇಶಕರು



ಶ್ರೀಮತಿ ಪ್ರಮೀಳ ಬಿ.ಆರ್
ನೆಟ್ಬಾಲ್ ಆಟಗಾರ್ತಿ




ಶ್ರೀ.ನವೀನ್ ರವರು
ಕರಾಟೆ ಪಟು

# ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯ, ಕೃಷ್ಣರಾಜಪೇಟೆ.

## ಪರಿವಿಡಿ


| ಕ್ರ.ಸಂ | ಪ್ರಶಿಕ್ಷಣಾರ್ಥಿಗಳ ಹೆಸರು & ಮಾರ್ಗದರ್ಶಕರು | ಶೀರ್ಷಿಕೆ | ಪುಟ ಸಂಖ್ಯೆ |
|---|---|---|---|
| 1 | **ಪಿ.ಸುರೇಶ** ಪ್ರಾಂಶುಪಾಲರು | **ಕಬ್ಬು ಹಾಗೂ ಎಸ್.ಎನ್.ಸ್ವಾಮಿಗೌಡರ ಕಬ್ಬಿನ ಸಂಶೋಧನೆ.** | 02–07 |
| 2 | **ಅನುಶ್ರೀ ಎಸ್** ಪ್ರಥಮ.ಬಿ.ಇಡಿ<br>**ಕೆ.ಎಸ್.ಶಿವಕುಮಾರ್** ಸಹ ಪ್ರಾಧ್ಯಾಪಕರು | **ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆ**<br>ಆಕಾಶ್ ಮತ್ತು ರವಿ ಟಿ ಗೌಡ | 08–10 |
| 3 | **ಸುಶ್ಮಿತಾ & ಲಾವಣ್ಯ ಬಿ.ವಿ** ದ್ವಿತೀಯ.ಬಿ.ಇಡಿ<br>**ಸತೀಶ ಎಂ.ವಿ.** ಸಹ ಪ್ರಾಧ್ಯಾಪಕರು | **ಕ್ರೀಡಾ ಕ್ಷೇತ್ರ**<br>ಕೆ.ಆರ್.ಪೇಟೆ ತಾಲ್ಲೂಕಿನ ಏಕಲವ್ಯ ಪ್ರಶಸ್ತಿ ಪುರಸ್ಕೃತರು<br>ನವೀನ್ ಎಸ್ ಮತ್ತು ಪ್ರಮೀಳ ಬಿ.ಆರ್ | 11–17 |
| 4 | **ದಿನೇಶ್ ಆರಾಧ್ಯ &**<br>**ಸಂತೋಷ್ ಎನ್.ಪಿ.** ದ್ವಿತೀಯ.ಬಿ.ಇಡಿ<br>**ಮಹಾಲಿಂಗು ಕೆ.** ಸಹ ಪ್ರಾಧ್ಯಾಪಕರು | **ರಾಜಕೀಯ ಕ್ಷೇತ್ರ**<br>ಬಿ.ಎಸ್.ಯಡಿಯೂರಪ್ಪ ಮತ್ತು ಎಸ್.ಎಂ.ಕೃಷ್ಣ | 18–27 |
| 5 | **ಮನುಲ ಪಿ. &**<br>**ಅರ್ಚನ ಎಲ್.ಎನ್** ದ್ವಿತೀಯ.ಬಿ.ಇಡಿ<br>**ಓಂಶ್ರೀ** ಪ್ರಥಮ.ಬಿ.ಇಡಿ<br>**ಮಹಾದೇವಸ್ವಾಮಿ ಎಸ್.** ಸಹ ಪ್ರಾಧ್ಯಾಪಕರು | **ಸಾಹಿತ್ಯ ಕ್ಷೇತ್ರ**<br>ಕೃತಿಗಳ ಅವಲೋಕನ<br>ಹೆಚ್.ಎಲ್.ನಾಗೇಗೌಡ ಮತ್ತು<br>ಎಂ.ಎಲ್.ಶ್ರೀಕಂಠೇಶಗೌಡ | 28–34 |
| 7 | **ಚಂದ್ರಶೇಖರ್ ಬಿ.ಕೆ** ದ್ವಿತೀಯ.ಬಿ.ಇಡಿ<br>**ಮಣಿ.ಸಿ.ಎಂ** ಗ್ರಂಥಪಾಲಕರು | **ನ್ಯಾಯಾಂಗ ಕ್ಷೇತ್ರ**<br>ಜಸ್ಟೀಸ್ ಇ.ಎಸ್ ವೆಂಕಟರಾಮಯ್ಯ | 35–50 |



# ಕಬ್ಬು ಹಾಗೂ ಎಸ್.ಎನ್.ಸ್ವಾಮಿಗೌಡರ ಕಬ್ಬಿನ ಸಂಶೋಧನೆ.

## ಹಿನ್ನೆಲೆ : ಕಬ್ಬಿನ ಮಹತ್ವ, ಸ್ವರೂಪ & ವ್ಯಾಪ್ತಿ.

ಕಬ್ಬು ಅತಿ ಉಪಯುಕ್ತ ಬಹುವಾರ್ಷಿಕ ದೈತ್ಯಾಕಾರದ ಹುಲ್ಲು. ಭೂವೈವಿಧ್ಯತೆಗೆ ಹೊಂದಿಕೊಂಡು ಬೆಳೆಯಬಲ್ಲ ಉಷ್ಣವಲಯದ ಜಾತಿ. ಸಿಹಿ ಪದಾರ್ಥಗಳು ಅನೇಕವಿದ್ದರು, ಮಾನವರಿಗೆ ಇಷ್ಟವಾದಂತಹ ಸಿಹಿ ಪದಾರ್ಥಗಳನ್ನು ತಯಾರಿಸಲು ಬೆಲ್ಲ ಮತ್ತು ಸಕ್ಕರೆಯೇ ಮುಖ್ಯ. ಕಬ್ಬಿಗೆ ಅಥರ್ವಣ ವೇದದಲ್ಲಿ ಉಲ್ಲೇಖವಿದೆ. ಆದ್ದರಿಂದ ವೇದಗಳ ಕಾಲದಿಂದಲೂ ಇದು ಭಾರತದಲ್ಲಿ ಹೆಚ್ಚಾಗಿ ಹರಡಿತ್ತೆಂದು ವ್ಯಕ್ತವಾಗುತ್ತದೆ. ಮೈಸೂರಿನ ಪರಿಸರದಲ್ಲಿ ಬೆಳೆಯುತ್ತಿರುವ ಕಬ್ಬುಗಳನ್ನು ಹಳೆತಳಿ ಮತ್ತು ಹೊಸತಳಿಗಳೆಂದು ವಿಂಗಡಿಸಬಹುದು. ಹಳೆಯ ಬಗೆಯ ಕಬ್ಬಗಳು ಹೆಚ್ಚು ರಸದಿಂದ ತುಂಬಿದವು ಮತ್ತು ಮೆದುವಾದುವು. ಇವುಗಳಲ್ಲಿ ರಸದಾಳಿ ಮತ್ತು ಪಟ್ಟಪಟ್ಟಿ ಮುಖ್ಯವಾದುವು. ಕಬ್ಬನ್ನು ಯಾವ ಕಾಲದಲ್ಲಾದರೂ ನೆಡಬಹುದು, ಆದರೆ ಚಳಿ ಹೆಚ್ಚಾಗಿದ್ದಾಗ ನೆಟ್ಟರೆ ಮೊಳಕೆ ಹೊರಡುವುದು ನಿಧಾನ. ಭೂಮಿ ಫಲವತ್ತಾಗಿರಬೇಕು, ಅಧಿಕ ನೀರು ಬೇಕು ಉಷ್ಣತೆ $80^0$ ಫ್ಯಾರಾನೇಟ್ ಗಿಂತ ಹೆಚ್ಚಾಗಿದ್ದರೆ ಒಳ್ಳೆಯದು. ಇದು ಸಾಮಾನ್ಯವಾಗಿ '10–12' ಉದ್ದ ಬೆಳೆಯುತ್ತದೆ. ಕಬ್ಬಿನಿಂದ ಬೆಲ್ಲ ಸಕ್ಕರೆ ಮಾತ್ರವಲ್ಲ ಕಾಕಂಬಿಯಿಂದ ಮದ್ಯವನ್ನು, ತರಗಿನಿಂದ ಉತ್ತಮ ಗೊಬ್ಬರವನ್ನು, ಸಿಪ್ಪೆಯಿಂದ ಕಾಗದ ಮತ್ತು ಮೇಣವನ್ನು ತಯಾರಿಸುತ್ತಾರೆ.

“ ಕಬ್ಬಿನ ಜಲ್ಲೆಯಿಂದ ಕಬ್ಬಿನ ನೆಲೆಯಾಗಿದೆ” ಹಳೇ ಮೈಸೂರು ಪ್ರಾಂತ್ಯ ಇದು ಸಕ್ಕರೆ ಸೀಮೆಯೆಂದು ಪ್ರಸಿದ್ಧಿಯಾಗಿದೆ. ಈ ಭಾಗದ ಕೃಷಿಕರನ್ನು, ಅವರ ಬದುಕನ್ನು ಹಸನಾಗಿಸುವಲ್ಲಿ, ನಾಳಿನ ದಿನಮಾನಗಳಿಗೆ ಇಂದಿನ ಯುವ ಪೀಳಿಗೆಯನ್ನು ಕೃಷಿ ತಜ್ಞರನ್ನಾಗಿ ರೂಪಿಸುವಲ್ಲಿ ಸಿಹಿ ಸಿಹಿಯಾದ ಕಬ್ಬು ಕೂಡ ಪ್ರಮುಖ ಪಾತ್ರ ವಹಿಸಿದೆ. “ರಸಕಬ್ಬು” ಎಲ್ಲರ ಬದುಕನ್ನು ಸದಾ ಆನಂದದಲ್ಲಿರಿಸಿದೆ. ನಮ್ಮ ರಾಜ್ಯದಲ್ಲಿ ಕಬ್ಬು ಬೆಳೆಗಾರರು ಕಬ್ಬಿನ ಬೆಳೆಯಿಂದಲೇ ತಮ್ಮ ಬದುಕಿನ ಸಂತೋಷವನ್ನು ಕಾಣುವಂತೆ ಮಾಡಿದೆ ಎಂಬುದರಲ್ಲಿ ಸಂದೇಹವಿಲ್ಲ. “ಕೃಷಿ ಬದುಕು ಋಷಿ ಬದುಕು” “ಕೃಷಿಕನಿಂದಲೇ ಬದುಕಿನ ಸಂಪತ್ತು”, “ಸಾಹಿತಿ ಬರೆಯುತ್ತಾನೆ ಕೃಷಿಕ ಬೆಳೆಯುತ್ತಾನೆ”. “ಸಾಹಿತಿಗಳಿಂದ ಅಕ್ಷರ ದಾಸೋಹ”. ಕೃಷಿಕರಿಂದ ಅನ್ನ ದಾಸೋಹ, “ಸಾಹಿತಿಗೆ ಕೃತಿ, ಕೃಷಿಕನಿಗೆ ಬೆಳೆ" ಇವೆಲ್ಲವೂ ಆಣಿಮುತ್ತುಗಳು. ಇದನ್ನು ಕರ್ನಾಟಕದ ರೈತರ ಆರ್ಥಿಕ ಪರಿಸ್ಥಿತಿಯನ್ನು

ಉತ್ತಮಪಡಿಸುವಲ್ಲಿ ಕಬ್ಬಿನ ಬೆಳೆಯ ಪಾತ್ರ ಹಿರಿದಾದುದು. ಕರ್ನಾಟಕದಲ್ಲಿ ಅತೀ ಹೆಚ್ಚು ಸಕ್ಕರೆಯನ್ನು ಉತ್ಪಾದಿಸುವ ಜಿಲ್ಲೆ ಬೆಳಗಾವಿ. ಇದನ್ನು ಕರ್ನಾಟಕದ "ಸಕ್ಕರೆಯ ಕಣಜ" ಎಂದು ಕರೆಯಲಾಗುತ್ತದೆ. ಬೆಳಗಾವಿ ಜಿಲ್ಲೆಯಲ್ಲಿ 1.50.000 ಹೆಕ್ಟೇರ್ ಪ್ರದೇಶದಲ್ಲಿ ಕಬ್ಬು ಬೆಳೆಯುತ್ತಾರೆ. ಭಾರತದಲ್ಲಿ ತೆಲಂಗಾಣದ ಕಾಮರೆಡ್ಡಿ ಪ್ರದೇಶ ದೇಶದಲ್ಲೆ ಅತಿ ಹೆಚ್ಚು ಕಬ್ಬನ್ನು ಬೆಳೆಯುತ್ತದೆ. ಶೇ.70ರಷ್ಟು ರೈತರು ಕಬ್ಬು ಬೇಸಾಯಗಾರರಾಗಿರುತ್ತಾರೆ. ಕಡಿಮೆ ಕಬ್ಬು ಬೆಳೆದು ಅತಿ ಹೆಚ್ಚು ಸಕ್ಕರೆ ಉತ್ಪಾದಿಸುವ ಜಿಲ್ಲೆ ಮಂಡ್ಯ. 1939ರ ಹಿಂದೆ ಕಬ್ಬು ಬೆಳೆಯುವ ಹಳೇ ಮೈಸೂರು ಭಾಗವನ್ನು "ಕಬ್ಬಾಹುನಾಡು" ಎಂದು ಕರೆಯಲಾಗುತ್ತಿತ್ತು. ಅಂದರೆ " ಕಬ್ಬಿನ ಬಲವುಳ್ಳ ನಾಡು" ಎಂದರ್ಥ ನಾಲೆಗಳನ್ನು ನಿರ್ಮಿಸುವುದಕ್ಕಿಂತ ಮುಂಚೆ ಕೆರೆಕಟ್ಟೆಗಳು ಇರುವ ಕಡೆ ಮಾತ್ರ ಕಬ್ಬನ್ನು ಬೆಳೆಯಲಾಗುತ್ತಿತ್ತು. ನಾವು ಇತಿಹಾಸದ ಪುಟಗಳನ್ನು ತೆರೆದು ನೋಡಿದಾಗ ನಾಲೆಗಳನ್ನು ನಿರ್ಮಿಸಿದ ಕೀರ್ತಿ ಮೈಸೂರಿನ ಅರಸರಾದ "ನವಕೋಟಿ ನಾರಾಯಣ" ಎಂಬ ಬಿರುದನ್ನು ಹೊಂದಿದ್ದ ಶ್ರೀ ಚಿಕ್ಕದೇವರಾಜ ಒಡೆಯರ್ ರವರಿಗೆ ಸಲ್ಲುತ್ತದೆ. ಇವರ ಆಡಳಿತದ ಅವಧಿ (ಕ್ರಿ.ಶ.1673–1704) ಯಲ್ಲಿ ಇವರು ಈಗಿನ ಶ್ರೀರಂಗಪಟ್ಟಣ ತಾಲ್ಲೂಕಿನ ಬೆಳಗೊಳ ಸಮೀಪವಿರುವ ಬಲಮುರಿಯಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಅಣೆಕಟ್ಟನ್ನು ನಿರ್ಮಿಸಿ ಅಲ್ಲಿ ನದಿಯ ಎರಡೂ ಬದಿಗೆ ಎಡದಂಡೆ ನಾಲೆ ಮತ್ತು ಬಲದಂಡೆ ನಾಲೆಗಳನ್ನು ನಿರ್ಮಿಸುವುದರ ಮೂಲಕ ಬರಡು ಭೂಮಿಯಾಗಿದ್ದ ಸಾವಿರಾರು ಎಕರೆ ಪ್ರದೇಶಕ್ಕೆ ನೀರುಣಿಸಿ ಭೂಮಿಯನ್ನು ಹಸಿರಾಗಿಸಿ ಈ ಪ್ರದೇಶದ ಜನರಿಗೆ ಅನ್ನ ನೀಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇದರಲ್ಲಿ ಬಲದಂಡೆ ನಾಲೆಯು (ಪರೊಜಾ ನಾಲೆ) ಪಂಪ್‌ಹೌಸ್ ಪಾಲಹಳ್ಳಿಯ ಮೂಲಕ ಹರಿದರೆ, ಎಡದಂಡೆ ನಾಲೆಯು (ಚಿಕ್ಕದೇವರಾಯ ನಾಲೆ)ಸಿಡಿಎಸ್ ನಾಲೆ ಕ್ಯಾತನಹಳ್ಳಿ, ದರಸಗುಪ್ಪೆ, ಕರಿಘಟ್ಟ, ಅರಕೆರೆ ಮಾರ್ಗವಾಗಿ ವಿಶಾಲವಾದ ಬನ್ನೂರು ಹೆಗ್ಗೆರೆಗೆ ತುಂಬಿಕೊಳ್ಳುತ್ತದೆ. ಅಲ್ಲಿಂದ ಎರಡು ಕಾಲುವೆಗಳು ಬನ್ನೂರು ಮುಖಾಂತರ ಹರಿದು ಸಾವಿರಾರು ಎಕರೆ ಪ್ರದೇಶದ ಭತ್ತ ಮತ್ತು ಕಬ್ಬು ಬೆಳೆಗಳಿಗೆ ನೀರುಣಿಸಿ ಮುಂದೆ ರಾಮಸ್ವಾಮಿ ನಾಲೆಗೆ ಸೇರಿಕೊಳ್ಳುತ್ತವೆ. ನಂತರ ಮತ್ತೊಂದು ಹೆಗ್ಗರೆಯಿಂದ ಚಿಕ್ಕದೇವರಾಯ ನಾಲೆಯೆಂದೇ ಬನ್ನೂರು ಸೋಸಲೆ, ತಲಕಾಡು ಪ್ರದೇಶದ ಸಾವಿರಾರು ಹೆಕ್ಟೇರ್ ಪ್ರದೇಶಕ್ಕೆ ನೀರುಣಿಸಿ ತಲಕಾಡಿನ ಕಾವೇರಿಪುರದ ಹತ್ತಿರ ಕಾವೇರಿಯನ್ನು ಸೇರಿಕೊಳ್ಳುತ್ತದೆ, ಹಿಂದೆ ಬನ್ನೂರು ಪ್ರದೇಶದಲ್ಲಿ ವರ್ಷದ 365 ದಿನಗಳಲ್ಲೂ ನೀರು ಹರಿಯುತ್ತಿದ್ದುದರಿಂದ ಅಲ್ಲಿ ಭತ್ತ ಮತ್ತು ಕಬ್ಬನ್ನು

ಹೇರಳವಾಗಿ ಬೆಳೆಯುತ್ತಿದ್ದುದರಿಂದ ಅದನ್ನು "ಹಸಿಭತ್ತ, ಬಿಸಿಬೆಲ್ಲದ ನಾಡು" ಎಂದು ಕರೆಯಲಾಗುತ್ತಿತ್ತು.

ನಂತರ ಮಂಡ್ಯ ಜಿಲ್ಲೆಗೆ ನೀರಾವರಿ ಯೋಜನೆಗಳನ್ನು ಕೈಗೊಂಡು ಕೃಷಿಕರ ಬಾಳಿಗೆ ಬೆಳಕಾದವರು ಮೈಸೂರಿನ ಅರಸರು. ಗಿಡ–ಪ್ರದೇಶಗಳನ್ನು ಗದ್ದೆಯಾಗಿಸಿದೆ ಕೀರ್ತಿ ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್.ಎಂ.ವಿಶ್ವೇಶ್ವರಯ್ಯ ಮತ್ತು ಸರ್ ಮಿರ್ಜಾ ಇಸ್ಮಾಯಿಲ್‌ರವರಿಗೆ ಸಲ್ಲುತ್ತದೆ. ಇದರಲ್ಲಿ ಬ್ರಿಟಿಷ್ ಸರ್ಕಾರದ ಸಹಕಾರವನ್ನು ಮರೆಯುವಂತಿಲ್ಲ. 1911 ರಲ್ಲಿ ಪ್ರಾರಂಭವಾದ ಕನ್ನಂಬಾಡಿ ಅಣೆಕಟ್ಟು 1931 ರಲ್ಲಿ ಮುಕ್ತಾಯಗೊಂಡಿತು. ಅಣೆಕಟ್ಟಿನ ನಿರ್ಮಾಣದ ನಂತರ 1932 ರಲ್ಲಿ ಈ ಅಣೆಕಟ್ಟೆಯಿಂದ ಮಂಡ್ಯ ಜಿಲ್ಲೆಯ ಮುಕ್ಕಾಲು ಭಾಗಕ್ಕೆ ನೀರನ್ನು ಒದಗಿಸಲು ವಿ.ಸಿ. ನಾಲೆ ಎಂದೇ ಪ್ರಖ್ಯಾತವಾಗಿರುವ ವಿಶ್ವೇಶ್ವರಯ್ಯ ನಾಲೆಯನ್ನು ನಿರ್ಮಿಸಿ ಲಕ್ಷಾಂತರ ಎಕರೆ ಪ್ರದೇಶಗಳಿಗೆ ನೀರೊದಗಿಸಲಾಯಿತು. ಅಲ್ಲಿಯವರಿಗೆ ಗಿಡ ಗಂಟಿಗಳಿಂದ ಕೂಡಿದ್ದ. ಬರಡು ಭೂಮಿಯಾಗಿದ್ದ ಮಳೆಯನ್ನೇ ಆಶ್ರಯಿಸಿ ಒಣ ಬೆಳೆಗಳನ್ನು ಬೆಳೆಯುತ್ತಿದ್ದ ನಾಡು ಭತ್ತ, ಕಬ್ಬು ಬೆಳೆಗಳನ್ನು ಬೆಳೆಯುವ ಬಂಗಾರದ ನಾಡಾಯಿತು. ಅಲ್ಲಿಂದ ಇಲ್ಲಿಯವರೆವಿಗೆ ಸುಮಾರು ಹತ್ತಿರ ಹತ್ತಿರ ಒಂದು ಶತಮಾನದಿಂದ ಕಬ್ಬನ್ನು ಬೆಳೆಯಲಾಗುತ್ತಿದೆ.

ಮಂಡ್ಯ ಜಿಲ್ಲೆಯಲ್ಲಿ ಕಬ್ಬಿನ ಹೆಸರಿಗೆ ಸಂಬಂಧಿಸಿದ ಅನೇಕ ಊರುಗಳನ್ನು ಕಾಣಬಹುದು. ಉದಾ: ಕಬ್ಬಲಗೆರೆಪುರ, ಕಬ್ಬನಹಳ್ಳಿ ಮುಂತಾದವು ಕಾವೇರಿ ನದಿಗೆ ಕೆ.ಆರ್.ನಗರ ತಾಲ್ಲೂಕಿನ ಚುಂಚನ ಕಟ್ಟೆಯಲ್ಲಿ, ಹೇಮಾವತಿ ನದಿಗೆ ಕೃಷ್ಣರಾಜಪೇಟೆ ತಾಲ್ಲೂಕಿನ ಮಂದಗೆರೆಯಲ್ಲಿ, ಹೇಮಗಿರಿ ಅಣೆಕಟ್ಟೆಗಳನ್ನು ಕಟ್ಟಿ ನೀರೊದಗಿಸಲಾಯಿತು. ಇವುಗಳನ್ನು ನಿರ್ಮಿಸುವಲ್ಲಿ ಎಂ.ಬಿ ರಾಮಚಂದ್ರರಾಯರ ಪಾತ್ರ ಅನನ್ಯವಾದದು.

ಶ್ರೀರಂಗಪಟ್ಟಣದ ಪಕ್ಕದಲ್ಲೆ ಬಂಗಾರದೊಡ್ಡಿ ಅಣೆಕಟ್ಟು, ಅದೇ ತಾಲ್ಲೂಕಿನ ಮಹದೇವಪುರದ ಹತ್ತಿರ ಅಣೆಕಟ್ಟನ್ನು ಕಟ್ಟಿ ರಾಮಸ್ವಾಮಿನಾಲೆ ಮತ್ತು ರಾಜಪರಮೇಶ್ವರಿ ನಾಲೆಗಳನ್ನು ನಿರ್ಮಿಸಲಾಯಿತು, ಇವೆಲ್ಲವೂ ಕಬ್ಬು ಬೆಳೆಯಲು ಸಹಾಯಕವಾದವು. ಇದರ ಜೊತೆಗೆ ಕಬ್ಬು ಬೆಳೆಯಲು ಉತ್ತಮವಾದ ಕೆಂಪು ಮರಳು ಮಿಶ್ರಿತ, ಕೆಂಪು ಜೇಡಿ ಮಣ್ಣು ಉಪಯುಕ್ತವಾಗಿದೆ. ಈ ಬೆಳೆಯು ಕರ್ನಾಟಕದ ಮೈಸೂರು ಮಂಡ್ಯ ಚಾಮರಾಜನಗರ, ಹಾಸನ, ದಾವಣಗೆರೆ, ಶಿವಮೊಗ್ಗ, ಬಾಗಲಕೋಟೆ, ಬೀದರ್, ಬೆಳಗಾವಿ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತದೆ.

ಮೈಸೂರು ಪ್ರದೇಶದ ಜನರು ಅತಿಯಾದ ಸಕ್ಕರೆಯ ಅವಲಂಬನೆಗೆ ಮೊದಲು ಎಲ್ಲಾ ತಿನಿಸುಗಳ ತಯಾರಿಕೆಗೆ ಮತ್ತು ಪಾನೀಯಗಳಿಗೆ ಬೆಲ್ಲವನ್ನೆ ಬಳಸುತ್ತಿದ್ದುದು ಸಾಮಾನ್ಯವಾಗಿತ್ತು. ಆದ್ದರಿಂದ ಬೆಲ್ಲದ ತಯಾರಿಕೆಗೆ ನಮ್ಮ ಕಾವೇರಿ ಜಲಾನಯನ ಪ್ರದೇಶದಲ್ಲಿ ಕಬ್ಬಿನ ಗಾಣದ ಆಲೆಮನೆಗಳಿದ್ದವು. ಅಂದರೆ ಗಾಣಗಳು ತಿರುಗಲು ಎತ್ತುಗಳನ್ನು ನೊಗಕ್ಕೆ ಕಟ್ಟಲಾಗುತ್ತಿತ್ತು. ಈ ರೀತಿಯ ಆಲೆಮನೆಗಳು ಹೇರಳವಾಗಿದ್ದವು. ಇಲ್ಲಿ ತಯಾರಿಸುತಿದ್ದ ಬೆಲ್ಲ ಯಾವುದೇ ರಾಸಾಯನಿಕಗಳನ್ನು ಬಳಸದೆ ಸ್ವಾಭಾವಿಕವಾಗಿ ಅತಿ ಸಿಹಿಯಾಗಿರುತ್ತಿತ್ತು ಕಾಲಕ್ರಮೇಣ ತಂತ್ರಜ್ಞಾನ ಮುಂದುವರಿದಂತೆ ವಿದ್ಯುತ್ ಚಾಲಿತ ಯಂತ್ರಗಳ ಆವಿಷ್ಕಾರಗಳಿಂದಾಗಿ ಆಲೆಮನೆಗಳು/ಎತ್ತಿನ ಗಾಣಗಳು ಕಣ್ಮರೆಯಾಗಿ ಕಬ್ಬಿನ ಕ್ರಷರ್ ಮಿಲ್‌ಗಳು ಬಳಕೆಗೆ ಬಂದವು. ಇದರಿಂದ ಕಬ್ಬನ್ನು ಅರೆಯುವ ಸಾಮರ್ಥ್ಯವು ಹೆಚ್ಚಾಗಿ ಬೆಲ್ಲದ ಉತ್ಪಾದನೆಯು ಅಧಿಕವಾಯಿತು ಕ್ರಮೇಣ ಜನರಲ್ಲಿ ನಾಗರೀಕತೆ (ಆಧುನಿಕತೆ)ಹೆಚ್ಚಾದಂತೆ ಬೆಲ್ಲವನ್ನು ತಿನಿಸುಗಳಿಗೆ ಮತ್ತು ಪಾನೀಯಗಳಿಗೆ ಬಳಸುವುದು ಕಡಿಮೆಯಾಗಿ ಸಕ್ಕರೆಯ ಬಳಕೆ ಹೆಚ್ಚಾಯಿತು ಇದರ ಪರಿಣಾಮವಾಗಿ ಮಂಡ್ಯಜಿಲ್ಲೆಯ ಮೊದಲ ಸಕ್ಕರೆ ಕಾರ್ಖಾನೆ 1847ರಲ್ಲಿ ಶ್ರೀರಂಗಪಟ್ಟಣದ ಬಳಿಯಿರುವ ಪಾಲಹಳ್ಳಿಯಲ್ಲಿ ಆಗಿನ ಮೈಸೂರಿನ ಕಮಿಷನರ್ ಸರ್ ಮಾರ್ಕ್‌ಕಬ್ಬನ್ ರಿಂದ ಸ್ಥಾಪನೆ ಗೊಂಡಿತು ಹಾಗೂ 1894ರಲ್ಲಿ ಮುಚ್ಚಲ್ಪಟ್ಟಿತು. ನಂತರ ಸಕ್ಕರೆ ಉತ್ಪಾದನೆಗೆ  ಗಮನ ಕೊಟ್ಟ ಮೈಸೂರಿನ ಅರಸರಾದ ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲ್ ರವರು 1933 ರಲ್ಲಿ ಮಂಡ್ಯನಗರದಲ್ಲಿ ಮೈಷುಗರ್ ಕಾರ್ಖಾನೆಯನ್ನು ಪ್ರಾರಂಭಿಸಿದರು. ನಂತರ 1974 ರಲ್ಲಿ ಕೆ.ಎಂ ದೊಡ್ಡಿಯಲ್ಲಿ ಚಾಂಷುಗರ್ ,ತರುವಾಯ ಪಾಂಡವಪುರದಲ್ಲಿ ಪಿ.ಎಸ್.ಎಸ್.ಕೆ ಸಕ್ಕರೆ ಕಾರ್ಖಾನೆ, ಮದ್ದೂರಿನಲ್ಲಿ ಎನ್.ಎಸ್.ಎಲ್.ಷುಗರ್ ಲಿಮಿಟೆಡ್, ಕೊಳ್ಳೆಗಾಲದಲ್ಲಿ ಮಹದೇಶ್ವರ ಸಕ್ಕರೆ ಕಾರ್ಖಾನೆ, ಕೆ.ಆರ್ ಪೇಟೆಯಲ್ಲಿ ಕೋರಮಂಡಲ್ ಷುಗರ್ಸ್ ಲಿಮಿಟೆಡ್ ನಂಜನಗೂಡಿನ ಬಣ್ಣಾರಿ ಅಮ್ಮನ ಸಕ್ಕರೆ ಕಾರ್ಖಾನೆ, ಕೆ.ಆರ್. ನಗರದ ಚುಂಚನಕಟ್ಟೆಯಲ್ಲಿ ಶ್ರೀರಾಮ ಸಕ್ಕರೆ ಕಾರ್ಖಾನೆ, ಚನ್ನರಾಯಪಟ್ಟಣದಲ್ಲಿ ಶ್ರೀನಿವಾಸ ಸಕ್ಕರೆ ಕಾರ್ಖಾನೆ, ಬನ್ನೂರಿನಲ್ಲಿ ಖಂಡಸಾರಿ ಸಕ್ಕರೆ ಕಾರ್ಖಾನೆ,  ತಮಿಳನಾಡಿನ ಸತ್ತಿಯಲ್ಲಿ ಸಕ್ಕರೆ ಕಾರ್ಖಾನೆ ಮುಂತಾದ ಅನೇಕ ಸಕ್ಕರೆ ಕಾರ್ಖಾನೆಗಳು ಪ್ರಾರಂಭವಾದವು. ದಾವಣಗೆರೆ ಷುಗರ್ ಕಂಪನಿ ಲಿಮಿಟೆಡ್ ಅತಿದೊಡ್ಡ ಸಕ್ಕರೆ ಕಾರ್ಖಾನೆಯಾಗಿದೆ (6000TCD Capacity: tones of crushed per day) ಈ ಎಲ್ಲಾ ಕಾರ್ಖಾನೆಗಳಿಗೂ ಮೈಸೂರು ಪ್ರದೇಶದಲ್ಲಿ ಅತಿ ಹೆಚ್ಚು

ಬೆಳೆಯುವ ಕಬ್ಬನ್ನು ಸರಬರಾಜು ಮಾಡಿ ಸಕ್ಕರೆಯನ್ನು ಉತ್ಪಾದಿಸಲಾಗುತ್ತಿದೆ ಸಕ್ಕರೆ, ಬೆಲ್ಲ ಉತ್ಪಾದನೆಯ ಜೊತೆಗೆ ಉಪ ಉತ್ಪನ್ನಗಳಾದ ಮೊಲಾಸೆಸ್ ನಿಂದ (ಕಾಕಂಬಿ) ಮದ್ಯವನ್ನು ಬಗಾಸೆಯನ್ನು (ಶಾಖ,ಶಕ್ತಿ ಮತ್ತು ವಿದ್ಯುತ್ ಉತ್ಪಾದನೆಗೆ ಜೈವಿಕ ಇಂಧನವಾಗಿ ಬಳಸಲು ಉತ್ಪಾದಿಸಲಾಗುತ್ತಿದೆ. ತರಗಿನಿಂದ ಉತ್ತಮ ಗೊಬ್ಬರವನ್ನು, ಸಿಪ್ಪೆಯಿಂದ ಕಾಗದ ಮತ್ತು ಮೇಣವನ್ನು ತಯಾರಿಸಲಾಗುತ್ತದೆ.

ಹೀಗೆ ರೈತರ ಆರ್ಥಿಕಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸಿದ ಕಬ್ಬಿನ ಬೆಳೆಗಳಿಗೆ ಮತ್ತು ಇದರ ಅಧಿಕ ಇಳುವರಿಗೆ ಹೆಚ್ಚು ಆದ್ಯತೆ ನೀಡಲಾಯಿತು ಇಲ್ಲಿಯವರೆಗೆ ರಸಕಬ್ಬು, ಪಟ್ಟೆಕಬ್ಬು ಮುಂತಾದ ಕೆಲವೇ ತಳಿಯ ಕಬ್ಬುಗಳಿದ್ದವು. ಆದರೆ ಹೆಚ್ಚಿನ ಸಕ್ಕರೆ ಉತ್ಪಾದನೆಗೆ ಅನುಕೂಲವಾಗುವಂತೆ ವಿವಿಧ ರೀತಿಯ ತಳಿಗಳ ಅನ್ವೇಷಣೆಗೆ ಸರ್ಕಾರವು ಒತ್ತನ್ನು ನೀಡಿದ್ದು, ಇದರ ಪರಿಣಾಮವಾಗಿ ಮಂಡ್ಯದಲ್ಲಿ ಸ್ಥಾಪನೆಯಾಗಿದ್ದ ವಿ.ಸಿ.ಪಾರಂನಲ್ಲಿ “ ಕಬ್ಬು ಸಂಶೋಧನಾ ತಳಿ” ಶಾಖೆಯನ್ನು ತೆರೆಯಲಾಯಿತು.

ಕಬ್ಬಿನ ಮೂಲಕ ಮಂಡ್ಯದ ಕೃಷಿಕರ ಬದುಕನ್ನು ಉತ್ತಮೀಕರಿಸಿಕೊಳ್ಳುವಲ್ಲಿ ನಾಳಿನ ದಿನಮಾನಗಳಿಗೆ ಇಂದಿನ ಯುವ ಜನತೆಯನ್ನು ಕೃಷಿ ಮತ್ತು ಕಬ್ಬಿನ ತಜ್ಞರನ್ನಾಗಿ ರೂಪಿಸುವಲ್ಲಿ ಕಳೆದ ಮೂವತ್ತೈದು ವರ್ಷಗಳಿಂದ ಮಂಡ್ಯದ ವಿ.ಸಿ.ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿ ಕಬ್ಬಿನ ತಳಿ ವಿಜ್ಞಾನಿಯಾಗಿ ಕೆಲಸ ಮಾಡುತ್ತಾ ಬಂದಿರುವ “ಕಬ್ಬಿನ ಕಬ್ಬಿಗ” ಎಂದೇ ಪ್ರಸಿದ್ಧರಾಗಿರುವ ಡಾ.ಎಸ್.ಎನ್ ಸ್ವಾಮಿಗೌಡರು ಸಿಹಿಸಿಹಿಯಾದ ಕಬ್ಬಿನ ಹಿರಿಮೆಯನ್ನು ಮೆರೆಸಿ ಅಧಿಕ ಕಬ್ಬಿನ ಇಳುವರಿ ಕೊಡುವ ವಿವಿದ ಕಬ್ಬಿನ ತಳಿಗಳನ್ನು ಸಂಶೋಧಿಸಿರುತ್ತಾರೆ. ಅಧಿಕ ಇಳುವರಿ ಕೊಡುವ ಕಬ್ಬಿನ ತಳಿಗಳ ಸಂಶೋಧನೆಗೆ ಇವರು ನೀಡಿದ ಕೊಡುಗೆಯನ್ನು ಮರೆಯಲು ಸಾಧ್ಯವಿಲ್ಲ.

- ಒಂದು ಮಾಹಿತಿ : ಕೆ.ಸಿ.ಎಸ್ ಅಧಿಕಾರಿ ಎಂ ವೆಂಕಟೇಶಗೌಡರು ಮೈಸೂರಿನಲ್ಲಿ 31 ಅಡಿ ; ಬೆಂಗಳೂರಿನಲ್ಲಿ 42 ಅಡಿ ಉದ್ದದ ಕಬ್ಬನ್ನು ತಮ್ಮ ಮನೆಯ ಮುಂದೆ ಬೆಳೆದಿದ್ದರು. (ಪ್ರಜಾವಾಣಿ 17.05.2004)
- ಎರಡನೆ ಮಾಹಿತಿ : ಮಂಡ್ಯದ ಕಬ್ಬು–ಬೆಲ್ಲಕ್ಕೆ ಪ್ರಧಾನಿ ಮೋದಿ ಅವರ ಆತ್ಮ ನಿರ್ಭರ ಯೋಜನೆಯಲ್ಲಿ ಸ್ಥಾನ ನೀಡಲಾಗಿದೆ. ಒಂದು ಜಿಲ್ಲೆ ಒಂದು ಉತ್ಪನ್ನದಡಿ ಮಂಡ್ಯದ ಬೆಲ್ಲಕ್ಕೆ ಮಾನ್ಯತೆ ನೀಡಿದೆ. ಇದರಿಂದ ಕಬ್ಬು ಬೆಳೆದು

ಆಲೆಮನೆಯಲ್ಲಿ ಬೆಲ್ಲ ತಯಾರಿಸುವ ರೈತರಲ್ಲಿ ಭರವಸೆಯ ಬೆಳಕುಮೂಡುತ್ತಿದೆ.

- ಮಂಡ್ಯಜಿಲ್ಲೆಯ ಮೊದಲ ಸಕ್ಕರೆ ಕಾರ್ಖಾನೆ 1847ರಲ್ಲಿ ಶ್ರೀರಂಗಪಟ್ಟಣದ ಬಳಿಯಿರುವ ಪಾಲಹಳ್ಳಿಯಲ್ಲಿ ಆಗಿನ ಮೈಸೂರಿನ ಕಮಿಷನರ್ ಸರ್ ಮಾರ್ಕ್‌ಕಬ್ಬನ್ ರಿಂದ ಸ್ಥಾಪನೆ ಗೊಂಡಿತು ಹಾಗೂ 1894ರಲ್ಲಿ ಮುಚ್ಚಲ್ಪಟ್ಟಿತು.

## ಡಾ. ಸ್ವಾಮಿಗೌಡರವರ ವ್ಯಕ್ತಿ ಪರಿಚಯ

## ವಿಷಯ : ಕಬ್ಬಿನ ತಳಿವಿಜ್ಞಾನಿ: ಎಸ್.ಎನ್.ಸ್ವಾಮಿಗೌಡರು.

"ಕಬ್ಬಿನ ಕಬ್ಬಿಗರಾದ" ಡಾ. ಸ್ವಾಮಿಗೌಡರು ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕು, ಕಿಕ್ಕೇರಿ ಹೋಬಳಿಯ ಸೊಳ್ಳೇಪುರ ಎಂಬ ಗ್ರಾಮದಲ್ಲಿ 18–07–1960 ರಲ್ಲಿ ಜನಿಸಿದರು. ಇವರ ತಂದೆ ಪಟೇಲ್ ನಂಜೇಗೌಡ, ತಾಯಿ ಲಕ್ಷ್ಮಮ್ಮ. ಇವರು ಪ್ರಾಥಮಿಕ ಶಿಕ್ಷಣವನ್ನು ಸ್ವಂತ ಊರಿನಲ್ಲಿ ಮುಗಿಸಿ, ಪ್ರೌಡಶಿಕ್ಷಣವನ್ನು ಪಾಂಡುವಪುರ ತಾಲ್ಲೂಕಿನ ಕ್ಯಾತನಹಳ್ಳಿಯ ವಿಶ್ವೇಶ್ವರಯ್ಯ ಪ್ರೌಢಶಾಲೆಯಲ್ಲಿ ಮತ್ತು ಪದವಿಪೂರ್ವ ಶಿಕ್ಷಣವನ್ನು ಮೈಸೂರಿನ ಮರಿಮಲ್ಲಪ್ಪ ಪದವಿ ಪೂರ್ವ ಕಾಲೇಜಿನಲ್ಲಿ ಪೂರೈಸಿದರು.

ನಂತರ ಇವರು ಬಿ.ಎಸ್ಸಿ (ಕೃಷಿ) ಮತ್ತು ಎಂ.ಎಸ್ಸಿ (ಕೃಷಿ) ಯನ್ನು ಬೆಂಗಳೂರಿನ (University of Agricultural sciences Bangalore) ಕೃಷಿ ವಿಶ್ವವಿದ್ಯಾನಿಲಯದಲ್ಲಿ ಮುಗಿಸಿ, ಪಿಹೆಚ್.ಡಿ ಪದವಿಯನ್ನು ತಮಿಳುನಾಡಿನ ಅಣ್ಣಾಮಲೈ ವಿಶ್ವವಿದ್ಯಾನಿಲಯದಲ್ಲಿ ಪಡೆದಿರುತ್ತಾರೆ ಇವರು ಎಂ.ಎಸ್ ಸಿ ಯಲ್ಲಿ (ಕೃಷಿ) ಪಿಹೆಚ್.ಡಿ ಪದವಿಯನ್ನು ಅನುವಂಶಿಯಂತೆ ಮತ್ತು ತಳಿಶಾಸ್ತ್ರದಲ್ಲಿ ಪಡೆದಿರುತ್ತಾರೆ. (Genetics and plant breeding ) ಇವರು ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನಾ ಸಹಾಯಕರಾಗಿ, (Research Assistant ) ಕೆಲಸ ಪ್ರಾರಂಭಮಾಡಿ ಮುಂದೆ ಸಹಾಯಕ ಪ್ರಾಧ್ಯಾಪಕರು, ಸಹಪ್ರಾಧ್ಯಾಪಕರು ಹಾಗೂ ಪ್ರಾಧ್ಯಾಪಕರಾಗಿ ಪದೋನ್ನತಿ ಹೊಂದಿ ಕೆಲಸ ನಿರ್ವಹಿಸಿರುತ್ತಾರೆ. ಶ್ರೀಯುತರು ಕೃಷಿ ವಿಶ್ವವಿದ್ಯಾನಿಲಯದ ವಿವಿಧ ಹುದ್ದೆಗಳಾದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಅಖಿಲಭಾರತ ಸಹಯೋಜಿತ ಸಂಶೋಧನಾ ಯೋಜನೆ, (ಕಬ್ಬು) (AICRP) (All India co-coordinative research plan ) ಬೆಲ್ಲದ ಪಾರ್ಕಿನ (jagger park ) ಯೋಜನಾ ಮುಖ್ಯಸ್ಥರು ಹಾಗೂ ವಿ.ಸಿ.ಫಾರಂ ಕೆಂದ್ರದ ಹಿರಿಯ ಕ್ಷೇತ್ರಾಧೀಕ್ಷರಾಗಿ ಕೆಲಸ ನಿರ್ವಹಿಸಿರುತ್ತಾರೆ.

## ಸಂಶೋಧನೆಗಳು

ಕಬ್ಬಿನ ತಳಿ ಸಂಶೋಧನೆಯಲ್ಲಿ 27 ವರ್ಷದ ಅನುಭವವನ್ನು ಹೊಂದಿದ್ದು, ಕಬ್ಬಿನಲ್ಲಿ ಹಲವಾರು ಸುಧಾರಿತ ತಳಿಗಳ ಬಿಡುಗಡೆಗೆ ಭಾಜನರಾಗಿರುತ್ತಾರೆ. ತಮ್ಮ ಸೇವಾವಧಿಯಲ್ಲಿ ಕಬ್ಬಿನ ಬೆಳೆಯಲ್ಲಿ ಒಟ್ಟು 8 ಸುಧಾರಿತ ತಳಿಗಳನ್ನು ರಾಜ್ಯದ ದಕ್ಷಿಣ ಕರ್ನಾಟಕಕ್ಕೆ ಸಾಗುವಳಿಗೆ ಬಿಡುಗಡೆ ಮಾಡಲು ಪ್ರಮುಖ ಪಾತ್ರ ವಹಿಸಿರುತ್ತಾರೆ. ಮುಖ್ಯವಾದ ತಳಿಗಳೆಂದರೆ – CO8371, CO86032, COVC2003-165, COVC 99463, VCF0517, COVE16061, COVE16062 ಮತ್ತು 18061. ಬಿಡುಗಡೆಯಾದ ತಳಿಗಳಲ್ಲಿ VCF0517 ತಳಿಯು ರೈತರಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿದ್ದು, ಉತ್ತಮ ಕಬ್ಬಿನ ಇಳುವರಿ (ಎಕರೆಗೆ 80–90ಟನ್) ಹಾಗೂ ಸಕ್ಕರೆ ಮತ್ತು ಬೆಲ್ಲದ ಇಳುವರಿಯನ್ನು ಹೊಂದಿರುತ್ತದೆ. ಈ ತಳಿಯನ್ನು ದಕ್ಷಿಣ ಕರ್ನಾಟಕದಲ್ಲಿ ಶೇ. 80ಕ್ಕಿಂತಹೆಚ್ಚಿನ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಈ ತಳಿಯು ಬೇರೆ ಕಬ್ಬಿನ ತಳಿಗಳಿಗಿಂತ ಶೇ 25ಕ್ಕಿಂತ ಹೆಚ್ಚಿನ ಕಬ್ಬಿನ ಇಳುವರಿಯನ್ನು ಕೊಡುವ ತಳಿಯಾಗಿದೆ. ಇತ್ತೀಚೆಗೆ ಇವರು

ಬಿಡುಗಡೆ ಮಾಡಿರುವ ಬಹಳ ಕಡಿಮೆ ಪ್ರಮಾಣದ ಸೂಲಂಗಿ ಬರುವ COVC 18061 ತಳಿಯನ್ನು ವರ್ಷದ ಎಲ್ಲಾ ಕಾಲದಲ್ಲಿ ಬೆಳೆಯಲು ಶಿಫಾರಸ್ಸು ಮಾಡಲಾಗಿದೆ. ಡಾ.ಎಸ್.ಎನ್ ಸ್ವಾಮಿಗೌಡರು ಪ್ರತಿ ವರ್ಷವೂ ಕಬ್ಬು ಬೆಳೆಗಾರರು ಮತ್ತು ಸಕ್ಕರೆ ಕಾರ್ಖಾನೆಯವರಿಗೆ ರೋಗರಹಿತ ಉತ್ತಮ ಕಬ್ಬಿನ ಬೀಜೋತ್ಪಾದನೆ (Diseasable free quality sugarcane seed material ) ಹಾಗೂ ಕೃಷಿ ಸಸಿಗಳ ಉತ್ಪಾದನೆ ಮತ್ತು ಸರಬರಾಜಿನ ವ್ಯವಸ್ಥೆಗೆ ಸಹಕಾರಿಯಾಗಿರುತ್ತಾರೆ. ಇವರ ಸೇವಾಧಿಯಲ್ಲಿ ರಾಸಾಯನಿಕ ಮುಕ್ತ/ಸಾವಯುವ ಬೆಲ್ಲದ ಉತ್ಪಾದನೆಗೆ ಕಾರಣರಾಗಿರುತ್ತಾರೆ. ಇವರಿಂದ ಮಂಡ್ಯ ಕೃಷಿ ಕೇಂದ್ರವು ಅತ್ಯುತ್ತಮ ಕೃಷಿ ಕೇಂದ್ರ ಎಂದು ಪ್ರಶಸ್ತಿಗೆ ಪಾತ್ರವಾಯಿತು. ಇವರು 24 ಸಂಶೋಧನಾ ಲೇಖನಗಳನ್ನೂ ರಾಷ್ಟ್ರೀಯ / ಅಂತರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಪ್ರಕಟಿಸಿರುತ್ತಾರೆ. ಇದರ ಜೊತೆಗೆ 35 ಜನಪ್ರಿಯ ಲೇಖನ ಮತ್ತು ವಿಸ್ತರಣಾ ಪ್ರತಿಗಳನ್ನು ಪ್ರಕಟಿಸಿರುತ್ತಾರೆ. ನಂತರ 2022 ಜುಲೈ ತಿಂಗಳಿನಲ್ಲಿ ಕೃಷಿ ವಿಶ್ವವಿದ್ಯಾನಿಲಯ ಸೇವೆಯಿಂದ ನಿವೃತ್ತಿ ಹೊಂದಿರುತ್ತಾರೆ.

## ಸಂದ ಗೌರವಗಳು

ಕೃಷಿ ವಿಜ್ಞಾನಿ ಡಾ.ಎಸ್.ಎನ್ ಸ್ವಾಮಿಗೌಡರು ಕಬ್ಬು ಬೆಳೆಗೆ ನೀಡಿರುವ ಕೊಡುಗೆ ಮತ್ತು ಸಮಾಜಕ್ಕೆ ಸಲ್ಲಿಸಿರುವ ಸೇವೆಯನ್ನು ಗುರುತಿಸಿ ಅನೇಕ ಸಂಘಸಂಸ್ಥೆಗಳು ಇವರಿಗೆ ಆತ್ಮೀಯವಾಗಿ ಸನ್ಮಾನಿಸಿವೆ.

- ❖ ರಾಗಿ ಲಕ್ಷ್ಮಣಯ್ಯ ಸ್ಮಾರಕ ಸಮಿತಿ ಮಂಡ್ಯ ವತಿಯಿಂದ 2019ರಲ್ಲಿ ಸನ್ಮಾನಿಸಲಾಯಿತು.
- ❖ ಕಬ್ಬಿನ ಗಾಣದ ಮಾಲೀಕರ ಅಸೋಷಿಯೇಷನ್ ಮಂಡ್ಯ ಇವರಿಂದ ಸನ್ಮಾನ ಸಮಾರಂಭ ಏರ್ಪಡಿಸಲಾಗಿತ್ತು.
- ❖ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ(ರಿ) ಹಲ್ಲೆಗೆರೆ ಇವರ ವತಿಯಿಂದ ಪ್ರೀತಿಪೂರ್ವಕವಾಗಿ ಸನ್ಮಾನಿಸಿ ನೆನಪಿನ ಕಾಣಿಕೆ ನೀಡಲಾಯಿತು.
- ❖ ಕೃಷ್ಣರಾಜಪೇಟೆ ತಾಲ್ಲೂಕು ಕಬ್ಬು ಬೆಳೆಗಾರರ ಸಂಘದಿಂದ ಗೌರವಿಸಲಾಯಿತು.
- ❖ ದಿನಾಂಕ 6 ಮತ್ತು 7 ಮಾರ್ಚ್ 2023ರಲ್ಲಿ ಶ್ರೀರಂಗಪಟ್ಟಣದಲ್ಲಿ ಜರುಗಿದ ಮಂಡ್ಯ ಜಿಲ್ಲಾ 19ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು.

# ಉಪಸಂಹಾರ: ಇಂದು ಕಬ್ಬು ಬೇಸಾಯದ ಸ್ಥಿತಿಗತಿಗಳು.

ಕರ್ನಾಟಕ ಸಕ್ಕರೆ ಸೀಮೆ. ಆದರೆ ಇಂದು ಸಕ್ಕರೆ ಕಹಿಯಾಗುತ್ತಿದೆ ಇದಕ್ಕೆ ಸಮಕಾಲೀನದ ಭೌಗೋಳಿಕ, ಆರ್ಥಿಕ, ಸಾಮಾಜಿಕ, ರಾಜಕೀಯ, ಅಸಡ್ಡೆ, ನಿರ್ಲಕ್ಷ್ಯ, ಹಣದಾಸೆ ಹೀಗೆ ಅನೇಕ ಕಾರಣಗಳಿರಬಹುದು, ಆದರೆ ಇವೆಲ್ಲವುಗಳಿಂದ ನಾವು ಮಧುರತೆಯಿಂದ ದೂರವಾಗುತ್ತಿದ್ದೇವೇನೋ ಎಂಬ ಆತಂಕ ಎಲ್ಲರನ್ನು ಕಾಡುತ್ತಿದೆ. ಅತಿ ಹೆಚ್ಚು ರಸ ಸಿಹಿ ತುಂಬಿದ, ಮೆದುವಾಗಿದ್ದ ಕಬ್ಬು ಬೆಳೆ ಇಂದು ತನ್ನ ಮೂಲರುಚಿಯನ್ನು ಕಳೆದುಕೊಂಡಿದೆ  ಸಾವಯವ ಕೃಷಿ ನಿಂತು ಹೋಗಿದೆ. ಹಣದ ಅತಿಯಾಸೆಯಿಂದ ಕಬ್ಬಿನ ಬೆಳೆ ಪಕ್ಕ ನೀಲಗಿರಿ ಬೆಳೆಸುವುದು, ಎಲೆಕೋಸು, ಹೂಕೋಸು, ಶುಂಠಿ, ಬಿಳಿದ್ರಾಕ್ಷಿ ಬೆಳೆಯಲಾಗುತ್ತಿದೆ. ಈ ಬೆಳೆಗಳಿಗೆ ಹರಡುವ ಕೀಟಗಳನ್ನು ನಾಶಮಾಡಲು ರಾಸಾಯನಿಕ  ಔಷಧಿಗಳನ್ನು ಸಿಂಪಡಿಸುವುದು ಕಬ್ಬಿನ ಬೆಳೆಯ ಬೆಳವಣಿಗೆಗೆ ಮಾರಕವಾಗಿವೆ. ಅದರಲ್ಲೂ ಶುಂಠಿ ಬೆಳೆದ ಭೂಮಿಯಲ್ಲಿ ಕಬ್ಬಿನ ಬೆಳವಣಿಗೆ ಕುಂಠಿತವಾಗುತ್ತದೆ. ಮತ್ತೊಂದು ಗಮನಿಸಬೇಕಾದ ಅಂಶವೆಂದರೆ ಕಬ್ಬು ಬೆಳೆಯುವ ಶೇ.82% ರಷ್ಟು ರೈತರು ಇನ್ನೂ ಸಾಲದ ಬಾಧೆಯಲ್ಲಿ ನರಳುತ್ತಿದ್ದಾರೆ. ಕಾರಣ ದಲ್ಲಾಳಿಗಳು. (ಮಧ್ಯವರ್ತಿಗಳು) ರೈತರು ಇವರಿಗೆ ವರ್ಷಕ್ಕೆ ಇಂತಿಷ್ಟು ಹಣ ಪಡೆದು ಹಲವಾರು ವರ್ಷ ಅವರಿಗೆ ಬೆಳೆ ಬೆಳೆಯಲು ಗುತ್ತಿಗೆ ಆಧಾರದಲ್ಲಿ ಭೂಮಿ ನೀಡಿರುತ್ತಾರೆ. ಆದ್ದರಿಂದ ಸರ್ಕಾರ ಇಂತವುಗಳನ್ನು ದೂರವಿಡಬೇಕು. ಇದರ ಜೊತೆಗೆ ರೈತರು ತಮ್ಮ ಆರ್ಥಿಕ ಶಕ್ತಿಗೆ ಮೀರಿ ಅದ್ದೂರಿ ಕಾರ್ಯಕ್ರಮಗಳನ್ನು ಮಾಡುವುದು ಕೂಡ ಅವರು ಸಾಲಗಾರರಾಗಲು ಒಂದು ಪ್ರಮುಖ ಕಾರಣವಾಗಿದೆ. ಸಕ್ಕರೆ ಉತ್ಪಾದನೆ ಹೆಚ್ಚಾಗಬೇಕಾದರೆ ಮೊದಲು ಕಾರ್ಖಾನೆಗಳಲ್ಲಿ ತಯಾರಾಗುವ ಉಪ ಉತ್ಪನ್ನಗಳ ತಯಾರಿಕೆ ನಿಲ್ಲಬೇಕು, ಬಂಡವಾಳಶಾಹಿಗಳ ಪ್ರಾಬಲ್ಯವಿರಬಾರದು ಹಾಗಾದರೆ ಮಾತ್ರ ರೈತರ ಬದುಕನ್ನು ಹಸನಾಗಿಸಲು ಸಾದ್ಯ ಎಂಬುದು ನನ್ನ ಅಭಿಪ್ರಾಯ.  ಇದಕ್ಕೆ ಸಾವಯವಕೃಷಿಯೊಂದೆ ಪರಿಹಾರವೆನಿಸುತ್ತಿದೆ.

ಕಾವೇರಿ ನೀರಿನ ಸಮಸ್ಯೆಯಿಂದ ಅನ್ನ ಬೆಳೆಯುವ ರೈತ ಆತ್ಮಹತ್ಯೆಗೆ ಮನಸ್ಸು ಮಾಡುತ್ತಿರುವುದು ಕರ್ನಾಟಕದ ಇತಿಹಾಸಕ್ಕೆ ಕಪ್ಪುಚುಕ್ಕೆ ಬರೆದಂತೆ. ಕೃಷಿಯನ್ನು ನಂಬಿರುವ ಗ್ರಾಮೀಣ ಯುವಕರಿಗೆ ಹೆಣ್ಣು ಕೊಡಲು ಯಾರು ಮುಂದೆ ಬರುತ್ತಿಲ್ಲ. ಕೃಷಿ ಭೂಮಿ ನಿವೇಶನಗಳಾಗಿ ವಾಣಿಜ್ಯವಸಾಹತುಗಳಾಗಿ ಮಾರ್ಪಡುತ್ತಿದೆ. ಹೆದ್ದಾರಿ

ನಿರ್ಮಾಣ ಮತ್ತು ಕೈಗಾರಿಕೆಗಳು ಸಾವಿರಾರು ಎಕರೆ ಭೂಮಿಯನ್ನು ನುಂಗಿಹಾಕುತ್ತಿವೆ. ಯುವಕರು ನಗರಗಳಿಗೆ ವಲಸೆ ಹೊಗುತ್ತಿದ್ದಾರೆ. ಬದಲಾವಣೆಯ ಬಿರುಗಾಳಿ ನಮ್ಮ ರಾಜ್ಯದಲ್ಲಿ ಬೀಸುತ್ತಿದೆ. ಮಧುರ ಸಂಬಂಧಗಳಿಗೆ ಒಂದಷ್ಟು ಚ್ಯುತಿ ಬರುತ್ತಿದೆ ಎಂದು ಗೋಚರಿಸುತ್ತಿದೆ. ಬೆಳವಣಿಗೆ, ಶಿಕ್ಷಣ, ಕಲೆ, ಸಂಘಟನೆ, ಹೋರಾಟ, ರಾಜಕಾರಣ ಮೊದಲಾದವು ಪ್ರಗತಿಗೆ ಪೂರಕವಾದಷ್ಟು ಶಾಂತಿ, ಸಮಾಧಾನ, ಸುಖ ನಮ್ಮ ಸಂಸ್ಕೃತಿ ಎಂದೂ ಬದಲಾಗಬಾರದೆಂಬುದೇ ನಮ್ಮೆಲ್ಲರ ಆಶಯ. ಎಲ್ಲರೂ ಎಲ್ಲರೊಂದಿಗೆ ಒಂದಾಗಿ ರಾಜ್ಯವನ್ನು ಮಾದರಿಯಾಗಿಸುವಲ್ಲಿ ನಮ್ಮಿಂದಾದ ಸಾತ್ವಿಕ ಕೆಲಸಗಳನ್ನು ಮಾಡೋಣ, ಸ್ವಾವಲಂಬಿಗಳಾಗಿ ಬದುಕೋಣ, ಸಮಾಜಕ್ಕೆ ಉತ್ತಮ ಕೊಡುಗೆ ನೀಡೋಣ.

ಬದುಕಲಿ ಏನೇ ಬರಲಿ
ಒಗ್ಗಟ್ಟಲಿ ನಂಬಿಕೆ ಇರಲಿ
ಕನ್ನಡತನವಿರಲೆಂಬ ಛಲವಿರಲಿ ಮನದಲ್ಲಿ
ಧನ್ಯವಾದಗಳು

ಜೈ ಜವಾನ್
ಜೈ ಕಿಸಾನ್
ಸಿರಿಗನ್ನಡಂ ಗೆಲ್ಗೆ
ಸಿರಿಗನ್ನಡಂ ಬಾಳ್ಗೆ

**ಪಿ.ಸುರೇಶ** ಪ್ರಾಂಶುಪಾಲರು
ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯ
ಕೃಷ್ಣರಾಜಪೇಟೆ, ಮಂಡ್ಯ ಜಿಲ್ಲೆ, ಮೊ.ಸಂ : 996434576

THE END-


Akash

# ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆ

# Indian Space Research Organization

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಇದನ್ನು ಇಸ್ರೋ ಎಂದು ಕರೆಯಲಾಗುತ್ತದೆ. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಸ್ವತಂತ್ರ ಭಾರತೀಯ ಬಾಹ್ಯಕಾಶ ಕಾರ್ಯಕ್ರಮವನ್ನು ಅಭಿವೃದ್ಧಿಪಡಿಸಲು 1969 ಆಗಸ್ಟ್ 15 ಅಲ್ಲಿ ಡಾ ವಿಕ್ರಮ ಸಾರಾಭಾಯ್ ಅವರ ಕಲ್ಪನೆಯಂತೆ ಇಸ್ರೋವನ್ನು ರಚಿಸಲಾಯಿತು ಇದರ ಪ್ರದಾನ ಕಛೇರಿ ಬೆಂಗಳೂರಿನಲ್ಲಿದೆ ಇಸ್ರೋದ ಮುಖ್ಯ ಕಾರ್ಯ ನಿರ್ವಾಹಕರು ಅಧ್ಯಕ್ಷರಾಗಿದ್ದಾರೆ ಅವರು ಭಾರತೀಯ ಸರ್ಕಾರದ ಬಾಹ್ಯಾಕಾಶ ಆಯೋಗದ ಅಧ್ಯಕ್ಷರು ಮತ್ತು ಬಾಹ್ಯಾಕಾಶ ಇಲಾಖೆಯ ಕಾರ್ಯದರ್ಶಿಯೂ ಆಗಿದ್ದಾರೆ.

ಈ ಸಂಸ್ಥೆಯು ದೇಶಾದ್ಯಂತ ಕೇಂದ್ರಗಳ ಜಾಲದ ಮೂಲಕ ಕಾರ್ಯನಿರ್ವಹಿಸುತ್ತದೆ. ಉಡಾವಣಾ ವಾಹನಗಳನ್ನು ವಿಕ್ರಮ್ ಸಾರಾಭಾಯ್ ಬಾಹ್ಯಾಕಾಶ ಕೇಂದ್ರದಲ್ಲಿ ಅಬಿವೃದ್ಧಿಪಡಿಸಲಾಗುತ್ತದೆ. ಹಾಗೂ ಬಾಹ್ಯಕಾಶದ ಪ್ರಯೋಜನಗಳನ್ನು ಕೊಯ್ಲು ಮಾಡಲು ಸಂಸ್ಥೆಯು ವಿಜ್ಞಾನ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನವನ್ನು ತೊಡಗಿಸಿಕೊಂಡಿದೆ. ಇಸ್ರೋ ಭಾರತ ಸರ್ಕಾರದ ಬಾಹ್ಯಕಾಶ ಇಲಾಖೆಯ (DOS) ಪ್ರಮುಖ ಘಟಕವಾಗಿದೆ. ಹಾಗೂ ಇಸ್ರೋವು ಹಲವಾರು ರಾಕೆಟ್‌ಗಳನ್ನು ಅಭಿವೃದ್ಧಿಪಡಿಸಿತು. ಭೂಸ್ಥಿರ ಕಕ್ಷೆಯಲ್ಲಿ ಉಪಗ್ರಹಗಳನ್ನು ಇರಿಸಲು ಆ ರಾಕೆಟ್‌ಗಳು ಉಪಗ್ರಹವನ್ನು ಉಡಾವಣೆ ಮಾಡುತ್ತವೆ. ಚಂದ್ರಯಾನ –1 (2008), ಚಂದ್ರಯಾನ–2 (2019), ಚಂದ್ರಯಾನ–3 (2023) ಹಾಗೆಯೇ ಮಾರ್ಸ್ ಆರ್ಬಿಡರ್ ಮಿಷನ್ (2013) ರಲ್ಲಿ ಮಂಗಳ ಗ್ರಹಕ್ಕೆ ಭಾರತದ ಮೊದಲು ಮಿಷನ್, ಹೀಗೆ ಇಸ್ರೋ ಹಲವಾರು ಕಾರ್ಯಾಚರಣೆಗಳನ್ನು ನಡೆಸಿದೆ. 2024ರಲ್ಲಿ ಗಗನ್ಯಾನ್ ಬಾಹ್ಯಾಕಾಶ ನೌಕೆಯೊಂದಿಗೆ ಗಗನಯಾತ್ರಿಗಳನ್ನು ಕಕ್ಷೆಗೆ ಸೇರಿಸಲು ಯೋಜಿಸಿದೆ.

ಭಾರತ ನಿರ್ಮಿಸಿದ ಮೊದಲು ಮಾನವರಹಿತ ಭೂ ಉಪಗ್ರಹ ಆರ್ಯಭಟ. ಇದನ್ನು 5ನೇ ಶತಮಾನದ ಪ್ರಮುಖ ಭಾರತೀಯ ಖಗೋಳಶಾಸ್ತ್ರಜ್ಞರ ಮತ್ತು ಗಣಿತಶಾಸ್ತ್ರಜ್ಞರ ಹೆಸರನ್ನು ಇಡಲಾಗಿದೆ. ಏಪ್ರಿಲ್ 19, 1975 ರಲ್ಲಿ ರಷ್ಯಾ ನಿರ್ಮಿತ ರಾಕೆಟ್ ಮೂಲಕ ಹಾಗೂ 794 ಪೌಂಡ್ (360kg) ತೂಕವನ್ನು ಹೊತ್ತ ಆರ್ಯಭಟವನ್ನು ಸೋವಿಯತ್ ಒಕ್ಕೂಟದ ಒಳಗಿನಿಂದ ಉಡಾವಣೆ ಮಾಡಲಾಯಿತು.

ಚಂದ್ರಯಾನ–3 ಚಂದ್ರಯಾನ ಕಾರ್ಯಕ್ರಮದ ಮೂರನೇ ಮಿಷನ್ ಆಗಿದೆ. ಚಂದ್ರಯಾನ –3 ನ್ನು ಸತೀಶ್ ಧವನ್ ಬಾಹ್ಯಕಾಶ ಕೇಂದ್ರದಿಂದ 14 ಜುಲೈ 2023ರಂದು ಉಡಾವಣೆ ಮಾಡಲಾಯಿತು. ಬಾಹ್ಯಾಕಾಶ ನೌಕೆಯು ಆಗಸ್ಟ್ 5ರಂದು ಚಂದ್ರನ ಕಕ್ಷೆಯನ್ನು ಪ್ರವೇಶಿಸಿತು. ಆಗಸ್ಟ್ 23ರಂದು ಚಂದ್ರನ ದಕ್ಷಿಣ ಧ್ರುವದ ಬಳಿ ಸ್ಪರ್ಶಿಸಿದ ಮೊದಲ ಲ್ಯಾಂಡರ್ ಆಯಿತು. ಲ್ಯಾಂಡರ್‌ನ್ನು ಯಶಸ್ವಿಯಾಗಿ ಚಂದ್ರನ ಮೇಲೆ ಇಳಿಸಿದ ನಾಲ್ಕನೇ ದೇಶವಾಗಿ ಭಾರತವು ಹೊರಹೊಮ್ಮುತ್ತದೆ.

## ಆಕಾಶ್(ಯುವ ವಿಜ್ಞಾನಿ)

ಕೃಷ್ಣರಾಜಪೇಟೆ ಪಟ್ಟಣದ ಜಯನಗರ ಬಡಾವಣೆಯ ನಿವಾಸಿ ದಿ.ಬಾಲಾಜಿ (ಟೈಲರ್) ಮತ್ತು ಭಾಗ್ಯಮ್ಮ ದಂಪತಿಯ ಮೂರನೇ ಮಗನಾದ ಆಕಾಶ್ ತಮ್ಮ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಹೊಸಹೊಳಲುವಿನ ಸರ್ಕಾರಿ ಶಾಲೆಯಲ್ಲಿ ಮಾಡಿದ್ದಾರೆ. ಪ್ರೌಢ ಶಿಕ್ಷಣವನ್ನು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಮಾಡಿ ನಂತರ ಕೆ.ಆರ್.ಪೇಟೆ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದಲ್ಲಿ ಶಿಕ್ಷಣವನ್ನು ಮುಗಿಸಿ ನಂತರ ಮೈಸೂರಿನ ಜಯಚಾಮರಾಜೇಂದ್ರ ಎಂಜಿನಿಯರಿಂಗ್ ಕಾಲೇಜಿನಲ್ಲಿ ಡಿಪ್ಲೋಮಾ ಪದವಿ ಶಿಕ್ಷಣ (ಬಿ.ಇ) ಮುಗಿಸಿದರು. 2008 ಎಪ್ರಿಲ್ ತಿಂಗಳಿನಲ್ಲಿ ಇಸ್ರೋ ಅಂಗಸಂಸ್ಥೆ ಇಸ್ಟ್ರಾಕ್ ಇಲ್ಲಿ ತಾಂತ್ರಿಕ ವಿಭಾಗಕ್ಕೆ ಆಯ್ಕೆಯಾಗಿ ಮಾರ್ಗದರ್ಶಕರ ಸೂಚನೆಯಂತೆ ಕರ್ತವ್ಯ ನಿರ್ವಹಿಸುತ್ತಾ ಬಂದಿದ್ದಾರೆ.

ಚಂದ್ರಯಾನ–3 ಕಾರ್ಯಚರಣೆಯಲ್ಲಿಯೂ ತಾಂತ್ರಿಕ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಇಸ್ರೋ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಅನುಶ್ರೀ ಎಸ್** ಪ್ರಥಮ.ಬಿ.ಇಡಿ.

**ಮಾರ್ಗದರ್ಶಕರು : ಕೆ.ಎಸ್.ಶಿವಕುಮಾರ್**

ಪ್ರಾಧ್ಯಾಪಕರು, ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯ

-THE END-



# ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಯುವ ವಿಜ್ಞಾನಿ

ರವಿ.ಟಿ.ಗೌಡ

ಚಂದಿರನ ಅಂಗಳದಲ್ಲಿ ಕಾಲಿಟ್ಟ ಚಂದ್ರಯಾನ–3ರ ಕಾರ್ಯಚರಣೆಯಲ್ಲಿ ನಾಗಮಂಗಲ ತಾಲ್ಲೂಕಿನ ಯುವ ವಿಜ್ಞಾನಿ ರವಿ.ಟಿ.ಗೌಡ ಕರ್ತವ್ಯ ನಿರ್ವಹಿಸಿದ್ದು ಮಂಡ್ಯ ಜಿಲ್ಲೆಗೆ ಕೀರ್ತಿಯಾಗಿ ಹೊರಹೊಮ್ಮಿದ್ದಾರೆ. ಇವರು ನವೆಂಬರ್1,1989 ರಲ್ಲಿ ಜನಿಸಿದ್ದು, ನಾಗಮಂಗಲ ತಾಲೂಕಿನ ಅಂಚೆಚಿಟ್ಟನ ಹಳ್ಳಿಯಲ್ಲಿ ಪ್ರಾಥಮಿಕ ಶಿಕ್ಷಣ ಹುಲಿಕೆರೆ ಗ್ರಾಮದ ಆಧಿಶಕ್ತಿ ಪ್ರೌಢಶಾಲೆಯಲ್ಲಿ ಪ್ರೌಢಶಿಕ್ಷಣ ಹಾಗೂ ಕೆ.ಆರ್.ಪೇಟೆ ಪಾಲಿಟೆಕ್ನಿಕ್‌ನಲ್ಲಿ ಡಿಪ್ಲಮೋ, ಮಂಡ್ಯದ ಪಿಇಎಸ್ ಕಾಲೇಜಿನಲ್ಲಿ ಇಂಜಿನಿಯರಿಂಗ್ ಪದವಿ ಹಾಗೂ ಬೆಂಗಳೂರು ವಿವಿಯಲ್ಲಿ ಎಂ.ಟೆಕ್ ಶಿಕ್ಷಣ ಪೂರೈಸಿದ್ದಾರೆ ಇವರು ಇಸ್ರೋದಲ್ಲಿ 2011ರಿಂದ ಕೆಲಸ ಮಾಡುತ್ತಿದ್ದು ಚಂದ್ರಯಾನ ಲ್ಯಾಂಡರ್‌ನ ವಿಶೇಷ ಪರೀಕ್ಷಾ ಕಾರ್ಯದಲ್ಲಿ ಪ್ರಾಜೆಕ್ಟ್ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸಿದ್ದಾರೆ. ಹಾಗೂ ಚಂದ್ರಯಾನ–3 ಲ್ಯಾಂಡ್ ಆಗುವ ಲ್ಯಾಂಡರ್ ಫರ್ಫಾಮೆನ್ಸ್ ಗ್ರೌಂಡ್‌ನಲ್ಲಿ ಪರೀಕ್ಷೆ ಮಾಡಿ ಕ್ವಾಲಿಫೈಡ್ ಮಾಡುವ ಮೂಲಕ ರವಿ.ಟಿ.ಗೌಡ ಸರ್ ಅವರು ತಮ್ಮ ಕರ್ತವ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

**ಅನುಶ್ರೀ ಎಸ್** ಪ್ರಥಮ.ಬಿ.ಇಡಿ.

**ಮಾರ್ಗದರ್ಶಕರು : ಕೆ.ಎಸ್.ಶಿವಕುಮಾರ್** ಪ್ರಾಧ್ಯಾಪಕರು

ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯ, ಕೃಷ್ಣರಾಜಪೇಟೆ.

-THE END-



# ಕೆ.ಆರ್.ಪೇಟೆ ತಾಲೂಕಿನ ಏಕಲವ್ಯ ಪ್ರಶಸ್ತಿ ಪುರಸ್ಕೃತರು

–ನವೀನ್ ಎಸ್

## ಏಕಲವ್ಯ ಪ್ರಶಸ್ತಿ ಪ್ರಾರಂಭ ಮತ್ತು ಉದ್ದೇಶ

ಏಕಲವ್ಯ ಪ್ರಶಸ್ತಿಯು ಭಾರತದಲ್ಲಿ ಕ್ರೀಡಾ ಪ್ರಶಸ್ತಿಯಾಗಿದ್ದು, ಪೌರಾಣಿಕ ಮಹಾಭಾರತ ಪಾತ್ರದ ಏಕಲವ್ಯನ ಹೆಸರನ್ನು ಇಡಲಾಗಿದೆ. ಕ್ರೀಡೆಯಲ್ಲಿ ಅತ್ಯುತ್ತಮ ಕೊಡುಗೆಗಳನ್ನು ಗುರತಿಸಲು ಭಾರತದ ದಕ್ಷಿಣ ರಾಜ್ಯಗಳಲ್ಲಿ ಒಂದಾದ ಕರ್ನಾಟಕ ಸರ್ಕಾರವು ಈ ಪ್ರಶಸ್ತಿಯನ್ನು ನೀಡುತ್ತದೆ.

ಏಕಲವ್ಯ ಪ್ರಶಸ್ತಿಯನ್ನು 1993ರಲ್ಲಿ ಪ್ರಾರಂಭಿಸಲಾಗಿದ್ದು, ಇದನ್ನು ವಾರ್ಷಿಕವಾಗಿ ನೀಡಲಾಗುತ್ತದೆ. ಈ ಪ್ರಶಸ್ತಿಯನ್ನು ಕರ್ನಾಟಕದ ನಿವಾಸಿಗಳು, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಕ್ರೀಡಾಕೂಟಗಳಲ್ಲಿ ರಾಜ್ಯವನ್ನು ಪ್ರತಿನಿಧಿಸಿರುವ ಕ್ರೀಡಾಪಟುಗಳ ಅತ್ಯುತ್ತಮ ಕ್ರೀಡಾ ಪ್ರದರ್ಶನಗಳನ್ನು ಗುರುತಿಸಿ ನೀಡಲಾಗಿದೆ.

ಏಕಲವ್ಯ ಪ್ರಶಸ್ತಿಗೆ ಅರ್ಹರಾಗಲು ಒಬ್ಬ ವ್ಯಕ್ತಿಯು ಕನಿಷ್ಟ ಮೂರು ವರ್ಷಗಳ ಅವಧಿಯಲ್ಲಿ ಕ್ರೀಡೆಗೆ ಅತ್ಯುತ್ತಮ ಕೊಡುಗೆಯನ್ನು ನೀಡಿರಬೇಕು. ಕೊಡುಗೆಗಳು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಗೆಲ್ಲುವ ಮತ್ತು ದಾಖಲೆಗಳನ್ನು ಸ್ಥಾಪಿಸುವ ರೂಪದಲ್ಲಿರಬಹುದು. ಏಕಲವ್ಯ ಪ್ರಶಸ್ತಿಯು ರೂ 1ಲಕ್ಷ ಸ್ಮರಣಿಕೆ ಮತ್ತು ಪ್ರಮಾಣ ಪತ್ರವನ್ನು. ಒಳಗೊಂಡಿದ್ದು ಪ್ರಶಸ್ತಿ ಪ್ರಧಾನ ಸಮಾರಂಭವನ್ನು ವಾರ್ಷಿಕವಾಗಿ ಕರ್ನಾಟಕ ರಾಜಧಾನಿ ಬೆಂಗಳೂರಿನಲ್ಲಿ ನಡೆಸಲಾಗುತ್ತದೆ.

ಏಕಲವ್ಯ ಪ್ರಶಸ್ತಿಗೆ ಆಯ್ಕೆಯ ಪ್ರಕ್ರಿಯೆಯು ಕರ್ನಾಟಕ ಸರ್ಕಾರವು ನೇಮಿಸಿದ ಸಮಿತಿಯನ್ನು ಒಳಗೊಂಡಿರುತ್ತದೆ. ಸಮಿತಿಯು ವಿವಿಧ ಮೂಲಗಳಿಂದ ಸ್ವೀಕರಿಸಿದ ಮಾಹಿತಿಯು ಸ್ವಯಂ ನಾಮನಿರ್ದೇಶನ ಮಾಡುತ್ತದೆ. ಮತ್ತು ಅವರ ಸಾಧನೆಗಳು & ಕೊಡುಗೆಗಳ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತದೆ.

1993ರಿಂದ ಇಲ್ಲಿಯವರೆಗೆ ಕರ್ನಾಟಕದ ಅನೇಕ ಪ್ರಮುಖ ಕ್ರೀಡಾ ಪಟುಗಳು ಕ್ರೀಡೆಗೆ ನೀಡಿದ ತಮ್ಮ ಅಸಾಧಾರಣ ಕೊಡುಗೆಗಳಿಗಾಗಿ ಏಕಲವ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಪ್ರಶಸ್ತಿಗೆ ಭಾಜನರಾದ ಕೆಲವು ಪ್ರಮುಖರೆಂದರೆ ರಾಹುಲ್ ದ್ರಾವಿಡ್ (ಕ್ರಿಕೆಟ್) ಅಶ್ವಿನಿ ಪೊನ್ನಪ್ಪ (ಬ್ಯಾಡ್ಮಿಂಟನ್) & ಕೆ.ಶ್ರೀಕಾಂತ್ (ಬ್ಯಾಡ್ಮಿಂಟನ್).

# ಏಕಲವ್ಯ ಪ್ರಶಸ್ತಿಯನ್ನು ಪಡೆದ ಪರಸ್ಕೃತರು

| ಕ್ರಮ ಸಂ | ಏಕಲವ್ಯ ಪ್ರಶಸ್ತಿ ಪುರಸ್ಕೃತರ ಹೆಸರು | ಪ್ರಶಸ್ತಿ ನೀಡಿದ ವರ್ಷ |
|---|---|---|
| 1. | ನಜೀಬ್ ಆಗಾ | 1994 |
| 2. | ಯುಸುಂದರಿ | 1994 (ಪವರ್ ಲಿಫ್ಟಿಂಗ್) |
| 3. | ಪ್ರಮೀಳಾ ಬಿ.ಆರ್ | 2010 (ನೆಟ್ ಬಾಲ್) |
| 4. | ಜ್ಯೋತಿ ಹೆಚ್.ಎಂ | 2010 ಅಥ್ಲೆಟಿಕ್ಸ್ |
| 5. | ರಾಬಿನ್ ಉತ್ತಪ್ಪ | 2010 (ಕ್ರಿಕೆಟ್) |
| 6. | ಅಮೂಲ್ಯ ಕಮಲ್ | 2010 |
| 7. | ಜೀವ ಕುಮಾರ್ ಎಸ್ | 2010 |
| 8. | ಪೂಜಾಶ್ರೀ ವೆಂಕಟ್ | 2010 |
| 9. | ನವೀನ್ ಎಸ್ | 2012 (ಕರಾಟೆ) |
| 10. | ಗಣಪತಿ ಮನೋಹರ್ | 2014 (ಬಾಕ್ಸಿಂಗ್) |
| 11. | ಶೋಧನ್ ರೈ | 2014 (ನೈಸರ್ಗಿಕ ಬಾಡಿ ಬಿಲ್ಡರ್) |
| 12. | ವಿಡಾಲ್ ಕುಮಾರ್ | 2014 (ಪಟ್ ಬಾಲ್) |
| 13. | ನಿಶ್ಯಾ ಜೋಸೆಫ್ | 2014 (ವಾಲಿಬಾಲ್) |
| 14. | ಎಸ್.ಕೆ. ಉತ್ತಪ್ಪ | 2016 (ಹಾಕಿ) |
| 15. | ಮು ಪ್ರಭಾ ಜಾಧವ್ | 2016 (ಜೂಡೊ) |
| 16. | ಬಿ. ಸುಶ್ಮಿತಾ ಚವಾರ್ | 2016 (ಕಬಡ್ಡಿ) |
| 17. | ಎಂ. ನಿರಂಜನ್ | 2016 (ಪ್ಯಾರಾ ಈಜು) |
| 18. | ಮಮತಾ ಪೂಜಾ | 2020 (ಕಬಡ್ಡಿ) |
| 19. | ಕೆ.ಎಲ್. ರಾಹುಲ್ | 2020 (ಕ್ರಿಕೆಟ್) |
| 20. | ಮಯಾಂಕ ಅಗರ್ವಾಲ್ | 2020 (ಕ್ರಿಕೆಟ್) |
| 21. | ವಿ. ಹರಿಪ್ರಸಾದ್ | 2022 (ವಾಲಿಬಾಲ್) |
| 22. | ಜೀವನ್ ಕೆ.ಎಸ್ | 2023 (ಅಥ್ಲೆಟಿಕ್ಸ್) |
| 23. | ನಿತಿನ್ | 2023 (ಅಥ್ಲೆಟಿಕ್ಸ್)(ಒಟ್ಟು 15 ಜನಕ್ಕೆ) |

# ಏಕಲವ್ಯ ಪ್ರಶಸ್ತಿ ಪುರಸ್ಕೃತರಾದ ನವೀನ ಎಸ್ ರವರ ಕಿರು ಪರಿಚಯ



ನವೀನ್ ಎಸ್ ರವರು 26 ಅಕ್ಟೋಬರ್ 1976 ರಂದು ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾ॥ ಚಟ್ಟಂಗೆರೆಯಲ್ಲಿ ಜನಿಸಿದರು. ಇವರ ತಂದೆ ಶ್ರೀ ಶೇಷಾದ್ರಿ ಸಿ.ಎನ್ ತಾಯಿ ಶಶಿಕಲಾ. ಇವರು ತಮ್ಮ ಕಿರಿಯ ಪ್ರಾಥಮಿಕ ಶಿಕ್ಷಣವನ್ನು ಚಟ್ಟಂಗೆರೆಯಲ್ಲಿ ಮುಗಿಸಿ ನಂತರ ತಮ್ಮ ಹಿರಿಯ ಪ್ರಾಥಮಿಕ ಶಿಕ್ಷಣ ಮತ್ತು ತಮ್ಮ ಸಂಪೂರ್ಣ ವಿದ್ಯಾಭ್ಯಾಸವನ್ನು ಮೈಸೂರಿನಲ್ಲಿ ಮುಗಿಸಿರುತ್ತಾರೆ. (ಬಿ.ಎಸ್‌ಸಿ, ಎಂ.ಎಸ್‌ಸಿ, ಎಂಎ [ಸಮಾಜಶಾಸ್ತ್ರ, ಪತ್ರಿಕೋದ್ಯಮ])

ಇವರು ಸುಮಾರು 6ತಿಂಗಳ ಕಾಲ ಕರಾಟೆ ಶಾಲೆಯ ಹುಡಕಾಟ ನಡೆಸಿ ನಂತರ ಶ್ರೀಯುತ ಸತೀಶ್ ರಾಜು ಮತ್ತು ಶ್ರೀಯುತ ಸುರೇಶ್ ಉಪಾದ್ಯಾಯ ಎಂಬುವರ ಹತ್ತಿರ 1987 ರಲ್ಲಿ ಕರಾಟೆ ತರಬೇತಿ ಶಾಲೆಗೆ ಸೇರಿದರು.

ಇವರು ದಿನಾಂಕ 29–11–2022 ರಿಂದ 02–12–2002ರವರೆಗೆ ಚಂಡೀಘಡದಲ್ಲಿ ನಡೆದ ಇಂಟರ್ ನ್ಯಾಷನಲ್ ಕರಾಟೆ ಚಾಂಪಿಯನ್ ಶಿಪ್‌ನಲ್ಲಿ ಎರಡು Gold Medal ಗಳನ್ನು ದಿನಾಂಕ 20/06/2007 ರಿಂದ 17–06–2007ರವರೆಗೆ ಚೆನ್ನೈಯಲ್ಲಿ ನಡೆದ World Cup ಕರಾಟೆ ಸ್ಪರ್ಧೆಯಲ್ಲಿ ರಾಷ್ಟ್ರ ಪ್ರತಿನಿಧಿಯಾಗಿ ಭಾಗವಹಿಸಿ ಎರಡು ಪ್ರಥಮ ಬಹುಮಾಮನಗಳನ್ನು, ದಿನಾಂಕ 26–11–2010 ರಿಂಧ 28–11–2010ರವರೆಗೆ ಚಂಡೀಗಡದಲ್ಲಿ ನಡೆದ ಇಂಟರ್ ನ್ಯಾಷನಲ್ ಕರಾಟೆ ಚಾಂಪಿಯನ್ ಶಿಪ್‌ನಲ್ಲಿ ಮೂರು Gold Medal ಗಳನ್ನು ಪಡೆದಿರುತ್ತಾರೆ ದಿನಾಂಕ 14–01–2012 ರಿಂದ 15–01–2012ರವರೆಗೆ ನಡೆದ Asian Sports Karate Games ಕರಾಟೆ ಚಾಂಪಿಯನ್‌ನಲ್ಲಿ

ಒಂದು ಚಿನ್ನ ಮತ್ತು ಒಂದು ಬೆಳ್ಳಿ ಪದಕ ಪಡೆದು ರಾಷ್ಟ್ರಕ್ಕೆ ಕೀರ್ತಿ ತಂದಿರುತ್ತಾರೆ ಹಾಗೂ ಇವರು ಒಂದು Gold Medal ಮತ್ತು Silver Medal ಗಳು ಒಟ್ಟು ಅಂತರಾಷ್ಟ್ರೀಯ ಮಟ್ಟದ ಸ್ಪರ್ಧೆಯಲ್ಲಿ ಎಂಟು Gold Medal ಮತ್ತು ಒಂದು Silver Medal ಗಳು ಮತ್ತು 24ರಾಜ್ಯ ಮಟ್ಟದ ಮತ್ತು ಒಂದು Silver Medal ಗಳು ಮತ್ತು 14 ರಾಷ್ಟ್ರ ಮಟ್ಟದ ಸ್ಪರ್ಧೆಗಳಲ್ಲಿ ಸ್ಪರ್ಧಿಸಿ ಬಹುಮಾನ ಪಡೆದಿದ್ದಾರೆ ಮತ್ತು ಪೋಲೀಸ್ ಇಲಾಖೆಯಲ್ಲಿ DySp, Sub Inspector ಮತ್ತು ಪೋಲಿಸ್ ಸಿಬ್ಬಂದಿಗೆ ಕರಾಟೆ ತರಬೇತಿಯನ್ನು 1996ರಿಂದ 2010ರವರೆವಿಗೂ ನೀಡುತ್ತಾ ಬಂದಿರುತ್ತಾರೆ 1997 ಮತ್ತು 1998 ರಲ್ಲಿ ಸ್ವ–ಇಚ್ಚೆಯಿಂದ ಸಾರ್ವಜನಿಕ ಸೇವೆಗಾಗಿ ಟ್ರಾಫಿಕ್ ವಾರ್ಡನ್ ಆಗಿಯೂ ಕರ್ತವ್ಯವನ್ನು ಮತ್ತು ಆಗಿನ ಮೈಸೂರಿನ ಪೋಲಿಸ್ ಆಯುಕ್ತರಾಗಿದ್ದ ಶ್ರೀಯುತ ಕಸ್ತೂರಿ ರಂಗನ್ ರವರ ಸಹಕಾರದ ಮೇರೆಗೆ 15ಜನ ಕರಾಟೆ ಪಟುಗಳೊಂದಿಗೆ ಮೈಸೂರು ನಗರದಲ್ಲಿ ವಿಶೇಷ ರಾತ್ರಿ ಗಸ್ತು ಕರ್ತವ್ಯವನ್ನು ಸಹ ನಿರ್ವಹಿಸಿದ್ದಾರೆ ಇದಲ್ಲದೆ ನವೀನ್ ಸರ್ ರವರು ರೈತ ಕುಟುಂಬದಿಂದ ಬಂದವರು ಇವರು ಪೋಲಿಸ್ ಆಗಬೇಕೆಂದು ಕನಸು ಕಟ್ಟಿಕೊಂಡಿದ್ದರು, ಆದರೆ ಅವರಲ್ಲಿದ್ದ ಭಯದ ಸ್ವಭಾವ ಅವರನ್ನು ಪೋಲಿಸ್ ಆಗದಂತೆ ತಡೆಯಿತು ಅವರು ಆಸೆಪಟ್ಟ ವೃತ್ತಿಯವರಿಗೆ ತರಬೇತಿ ನೀಡುವಂತೆ ಅವರನ್ನು ಬೆಳೆಸಿತು.

## ಇವರು ಪಡೆದ ಪ್ರಶಸ್ತಿಗಳು National awards

- National Vocational Excellence Award - 2010
- Sir M.Vishwesharaiah Award - 2010
- Rahul Gandhi Young Achiever Award - 2011
- Master of Master Award - 2015
- Basava Rathna National Award - 2016

## State awards:

- EKALAVYA AWARD Govt of Karanataka - 2010(Recived2012)
- Basava Jyothi State Award - 2009

- Sadbhavana State Award - 2011
- Shree Jaga Jyothi Basaveshwara Kayaka Shree Award - 2012
- Prerana Pratibha Puraskar - 2012
- Excellence effort of in the field of Martical Art Award - 2012

  ಇದರಿಂದ ನಾವು ಅನೇಕ ವಿಷಯವನ್ನು ಕಲಿಯಬಹುದು. ನಮ್ಮಲ್ಲಿರುವ ದೌರ್ಬಲ್ಯಗಳನ್ನು ಮೆಟ್ಟಿನಿಂತಾಗ ಸಾಧನೆಯ ಹಾದಿಯು ಕಷ್ಟವಾಗುವುದಿಲ್ಲ ಎನ್ನುವುದಕ್ಕೆ ಇವರು ನಮಗೆ ಸ್ಫೂರ್ತಿಯಾಗುತ್ತಾರೆ. ಇವರನ್ನು ಸ್ಫೂರ್ತಿಯಾಗಿ ತೆಗೆದುಕೊಂಡು ನಾವು ನಮ್ಮ ರಕ್ಷಣೆಗೆ ಕರಾಟೆಯನ್ನು ಕಲಿಯುವ ಮನಸ್ಸನ್ನು ಮಾಡಬೇಕು

ಇದು ಈಗಿನ ಕಾಲಕ್ಕೆ ಬಹಳ ಮುಖ್ಯ ಏಕಂದರೆ ಎಲ್ಲೆಲ್ಲೂ ಹೆಣ್ಣುಮಕ್ಕಳ. ಮೇಲೆ ದೌರ್ಜನ್ಯ ನಡೆಯುತ್ತಿದೆ.  ರಕ್ಷಣೆ ನಾವೇ ಮಾಡಿಕೊಳ್ಳಬಹುದು. ಆದ್ದರಿಂದ ನಾವು ಕರಾಟೆಯನ್ನು ಕಲಿಯುವುದರಿಂದ ಬರೀ ಹೆಣ್ಣು ಮಕ್ಕಳಿಗೆ ಅಲ್ಲದೆ ಎಲ್ಲರಿಗೂ ಹಲವಾರು ಉಪಯೋಗಗಳಾಗುತ್ತವೆ ಅವುಗಳೆಂದರೆ,

- ಆತ್ಮರಕ್ಷಣೆಯನ್ನು ಮಾಡಿಕೊಳ್ಳುವುದು.
- ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಲು ಸಹಕಾರಿ.
- ನಾಯಕತ್ವ ಕೌಶಲ್ಯವನ್ನು ಬೆಳೆಸುತ್ತದೆ.
- ಸ್ವಯಂ ಶಿಸ್ತನ್ನು ಬೆಳೆಸುವುದರ. ಜೊತೆಗೆ ಆರೋಗ್ಯಕರ ದೇಹ ಮತ್ತು ತೂಕವನ್ನು ಉತ್ತೇಜಿಸುತ್ತದೆ. ಆದ್ದರಿಂದ ಮಕ್ಕಳಿಗೆ ಕರಾಟೆಯ ಬಗ್ಗೆ ಆಸಕ್ತಿಯನ್ನು ಬೆಳೆಸಬೇಕು ಹಾಗೂ ನಾವು ಬೆಳೆಸಿಕೊಳ್ಳಬೇಕು.ಎನ್ನವುದೇ ನಮ್ಮೆಲ್ಲರ ಆಶಯ.

**ಸುಶ್ಮಿತ ಎಸ್** ದ್ವಿತೀಯ.ಬಿ.ಇಡಿ.
**ಮಾರ್ಗದರ್ಶಕರು : ಸತೀಶ ಎಂ.ವಿ.** ಸಹ ಪ್ರಾಧ್ಯಾಪಕರು
ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯ

-THE END-



Prameela.B.R Kempe Gowda Award-2015International Netball Player

# ಏಕಲವ್ಯ ಪ್ರಶಸ್ತಿ ಪುರಸ್ಕೃತರು – ಪ್ರಮಿಳಾ ಬಿ.ಆರ್

ಕ್ರೀಡೆಗಳಿಂದ ನಮ್ಮ ಬೌದ್ಧಿಕ ಕೌಶಲ್ಯಗಳು ಹೆಚ್ಚುತ್ತವೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳಲ್ಲಿ ಕ್ರೀಡೆಗಳಿಂದ ಸ್ಪರ್ಧಾ ಮನೋಭಾವ ಮೂಡಿಸುವುದು ಸಾಧ್ಯವಾಗಿದೆ. ಕ್ರೀಡಾ ಸಾಧಕರಿಗೆ ಜಿಲ್ಲಾಮಟ್ಟವಲ್ಲದೆ ರಾಜ್ಯ, ರಾಷ್ಟ್ರಮಟ್ಟದಲ್ಲಿ ಅನೇಕ ಪ್ರಶಸ್ತಿಗಳನ್ನು ನೀಡುತ್ತಾ ಬಂದಿದ್ದು, ಅದರಲ್ಲಿ ಏಕಲವ್ಯ ಪ್ರಶಸ್ತಿಯು ಒಂದು.

ಏಕಲವ್ಯ ಪ್ರಶಸ್ತಿಯನ್ನು 1993ರಲ್ಲಿ ಪ್ರಾರಂಬಿಸಲಾಗಿದ್ದು, ಈ ಪ್ರಶಸ್ತಿಯನ್ನು ಕರ್ನಾಟಕದ ನಿವಾಸಿಗಳು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಕ್ರೀಡಾಕೂಟಗಳಲ್ಲಿ ರಾಜ್ಯವನ್ನು ಪ್ರತಿನಿಧಿಸಿರುವ ಕ್ರೀಡಾಪಟುಗಳ ಅತ್ಯುತ್ತಮ ಕ್ರೀಡಾ ಪ್ರದರ್ಶನಗಳನ್ನು ಗುರುತಿಸುತ್ತದೆ.

ಕರ್ನಾಟಕ ಸರ್ಕಾರ 2008ರಲ್ಲಿ ಅತ್ಯುತ್ತಮ ಕ್ರೀಡಾ ಸಾಧನೆಗಳನ್ನು ಗುರುತಿಸಿ, ಕ್ರೀಡಾಪಟುಗಳಿಗೆ ಏಕಲವ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ, ಅದರಲ್ಲಿ ನಮ್ಮ ಕರ್ನಾಟಕದ ಕೆ.ಆರ್.ಪೇಟೆ ತಾಲ್ಲೂಕಿನ ಪ್ರಮಿಳಾರವರು ಕೂಡ ಒಬ್ಬರು.

ಇವರು ಅಂತರಾಷ್ಟ್ರೀಯ ನೆಟ್‌ಬಾಲ್ ಆಟಗಾರ್ತಿ. ಮಂಡ್ಯಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನ ಬಂಡಿಹೊಳೆ ಗ್ರಾಮದವರು. ಇವರು 20–06–1983ರಲ್ಲಿ ಬಂಡಿಹೊಳೆಯಲ್ಲಿ ಜನಿಸಿದರು.ತಂದೆ ರಂಗಸ್ವಾಮಿಗೌಡ. ಹಾಗೂ ತಾಯಿ ಪಂಕಜಮ್ಮ. ಇವರ ತಂದೆ ರಂಗಸ್ವಾಮಿಗೌಡರಿಗೆ ಆರು ಜನ ಮಕ್ಕಳಲ್ಲಿ ಪ್ರಮಿಳಾರವರು ಆರನೆಯವರು. ಪ್ರಮಿಳಾರವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಬಂಡಿಹೊಳೆ ಗ್ರಾಮದಲ್ಲಿ ಪಡೆದು ಪ್ರೌಢ ಶಿಕ್ಷಣ ಹಾಗೂ ಪದವಿ ಪೂರ್ವಶಿಕ್ಷಣವನ್ನು ಹೇಮಗಿರಿಯಲ್ಲಿ ಮುಗಿಸಿ ನಂತರ ಉನ್ನತ ಶಿಕ್ಷಣವನ್ನು ಬೆಂಗಳೂರಿನಲ್ಲಿ ಪಡೆದಿರುತ್ತಾರೆ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಬಿ.ಎ ಮತ್ತು ಬಿ.ಪಿ.ಎಡ್ ಹಾಗೂ ಎಂ.ಪಿ.ಎಡ್ ಪದವಿಯನ್ನು ಚಿನ್ನದ ಪದಕದೊಂದಿಗೆ ಗಳಿಸಿರುತ್ತಾರೆ. ಪಿ.ಎಚ್.ಡಿಯನ್ನು ದ್ರಾವಿಡಿಯನ್ ವಿಶ್ವವಿದ್ಯಾಲಯದಲ್ಲಿ ಪಡೆದಿರುತ್ತಾರೆ, ಪ್ರಮಿಳಾರವರು ಪ್ರಾಥಮಿಕ ಹಂತದಿಂದಲೂ ಕ್ರೀಡೆಯಲ್ಲಿ ಆಸಕ್ತಿಯನ್ನು ಹೊಂದಿದ್ದು, ಎಲ್ಲಾ ಹಂತದಲ್ಲಿ ದೈಹಿಕ ಶಿಕ್ಷಕರು ಮತ್ತು ಕುಟುಂಬದವರು ಕ್ರೀಡೆಯಲ್ಲಿ ವೃತ್ತಿ ಜೀವನವನ್ನು ಪ್ರೇರೇಪಿಸಿರುವುದು ಇವರ ಸೌಭಾಗ್ಯವೇ ಸರಿ.

ಪ್ರಮಿಳಾ ಅವರಿಗೆ ನೆಟ್‌ಬಾಲ್ ತರಬೇತಿಯ ಅಗತ್ಯವಿತ್ತು, ಆದ್ದರಿಂದ ಅವರು ಬೆಂಗಳೂರಿನಲ್ಲಿ ಅವರು ತರಬೇತಿಯನ್ನು ಪಡೆದುಕೊಂಡು ಅಲ್ಲಿ ರಾಧಾ ಎಂಬುವವರಿಂದ ಮಾರ್ಗದರ್ಶನ ಪಡೆದರು. ಪ್ರಮಿಳಾರವರು 2013ರಲ್ಲಿ ಪ್ರದೀಪ್ ಕುಮಾರ್ ಎಂಬುವರು ಜೊತೆ ವಿವಾಹವಾಗಿದ್ದು, ಈ ದಂಪತಿಗಳಿಗೆ ಎರಡು ಗಂಡು ಮಕ್ಕಳಿದ್ದಾರೆ. ಪ್ರಮಿಳಾರವರು ಪ್ರಸ್ತುತ ಬೆಂಗಳೂರಿನ ಸಿಂಧಿ ಕಾಲೇಜಿನಲ್ಲಿ ದೈಹಿಕ ಶಿಕ್ಷಣದ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಪ್ರಮೀಳಾರವರಿಗೆ ದೊರಕಿರುವ ಪ್ರಶಸ್ತಿಗಳು :

- 2008ರಲ್ಲಿ ಅವರು ಕ್ರೀಡೆಗೆ ನೀಡಿದ ಕೊಡುಗೆಗಳಿಗಾಗಿ ಏಕಲವ್ಯ ಪ್ರಶಸ್ತಿಯನ್ನು ನೀಡಲಾಯಿತು.
- 2005ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಚಿನ್ನದ ಪದಕ.
- 2005ರಲ್ಲಿ ಪಾರ್ವತಮ್ಮ ಮಲರಾಧ್ಯಾ ಚಿನ್ನದ ಪದಕ.
- 2015ರಲ್ಲಿ ಕೆಂಪೇಗೌಡ ಪ್ರಶಸ್ತಿ.
- 2022ರಲ್ಲಿ ಅಫ್ರಾಜಿನ್ ಪ್ರಶಸ್ತಿ.

ಪ್ರಮೀಳಾರವರ : ಕ್ರೀಡಾ ಸಾಧನೆಗಳು :–

- 2022ರಂದು ದೆಹಲಿಯಲ್ಲಿ ನಡೆದ 2ನೇ ಖೇಲೋ ಮಾಸ್ಟರ್ ಗೇಮ್ಸ್‌ನಲ್ಲಿ ಚಿನ್ನದ ಪದಕವನ್ನು ಗೆದ್ದಿದ್ದಾರೆ.
- 2009ರಲ್ಲಿ ಸೀನಿಯರ್ ಸ್ಟೇಟ್ – ಲೆವೆಲ್ ನೆಟ್ಬಾಲ್ ಚಾಂಪಿಯನ್‌ಶಿಪ್‌ನಲ್ಲಿ – ಪ್ರಥಮ ಸ್ಥಾನ.
- 2004ರಲ್ಲಿ ಶ್ರೀಲಂಕಾದಲ್ಲಿ ನಡೆದ 4ನೇ ಏಷ್ಯನ್ ಯುವ ಬಾಲಕಿಯರ ನೆಟ್ಟ್‌ಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಿದರು.
- 2006ರಲ್ಲಿ ವಿಜಯವಾಡದಲ್ಲಿ ನಡೆದ 25ನೇ ಸೀನಿಯರ್ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಭಾಗವಹಿಸಿದರು.
- 2008ರಂದು ಮಂಡ್ಯದಲ್ಲಿ ನಡೆದ ರಾಜ್ಯ ಒಲಿಂಪಿಕ್ ಚಾಂಪಿಯನ್‌ಶಿಪ್‌ನಲ್ಲಿ – ಪ್ರಥಮಸ್ಥಾನ.

- ಕೊರಟಗೆರೆಯಲ್ಲಿ ನಡೆದ ರಾಜ್ಯ ರಾಷ್ಟ್ರೀಯ ನೆಟ್‌ಬಾಲ್ ಚಾಂಪಿಯನ್‌ಶಿಪ್ – ಪ್ರಥಮಸ್ಥಾನ.
- 2003ರಂದು ದೆಹಲಿಯಲ್ಲಿ ನಡೆದ 23ನೇ ಸೀನಿಯರ್ ರಾಷ್ಟ್ರೀಯ ನೆಟ್‌ಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಿದರು.
- 9ನೇ ಸೀನಿಯರ್ ರಾಜ್ಯಮಟ್ಟದ ನೆಟ್‌ಬಾಲ್ ಚಾಂಪಿಯನ್‌ಶಿಪ್‌ನಲ್ಲಿ – ದ್ವಿತೀಯ ಸ್ಥಾನ.
- 2003ರಲ್ಲಿ ನಡೆದ 3ನೇ ಯುವ ರಾಜ್ಯ ಮಟ್ಟದ ನೆಟ್‌ಬಾಲ್ ಚಾಂಪಿಯನ್ ಶಿಪ್‌ನಲ್ಲಿ – ಪ್ರಥಮ ಸ್ಥಾನ.
- 2003– ಅಂತರ್ ವಿಶ್ವವಿದ್ಯಾಲಯ ನೆಟ್‌ಬಾಲ್ ಚಾಂಪಿಯನ್‌ಶಿಪ್‌ನಲ್ಲಿ – ದ್ವಿತೀಯ ಸ್ಥಾನ.
- 2004ರಲ್ಲಿ ಕಡಲೂರಿನಲ್ಲಿ ನಡೆದ 5ನೇ ದಕ್ಷಿಣ ವಲಯದ ರಾಷ್ಟ್ರೀಯ ನೆಟ್‌ಬಾಲ್ ಚಾಂಪಿಯನ್ ಶಿಪ್‌ನಲ್ಲಿ – ಪ್ರಥಮಸ್ಥಾನ.

2001–ರಂದು 7ನೇ ರಾಜ್ಯ ಮಟ್ಟದ ಅಂತರ್ ಕಾಲೇಜು ಕ್ರೀಡೆಗಳು (ಲಾಂಗ್ ಜಂಪ್)ನಲ್ಲಿ ಪ್ರಥಮಸ್ಥಾನ.

- ❖ 2001 ರಂದು 7ನೇ ರಾಜ್ಯ ಮಟ್ಟದ ಅಂತರಕಾಲೇಜು ಕ್ರೀಡೆಗಳು (4*100ಮೀ) ರಿಲೇನಲ್ಲಿ –ಪ್ರಥಮ ಸ್ಥಾನ.
- ❖ 2001 ರಂದು 7ನೇ ರಾಜ್ಯ ಮಟ್ಟದ ಅಂತರಕಾಲೇಜು ಕ್ರೀಡೆಗಳು (200ಮೀ) – ಪ್ರಥಮ ಸ್ಥಾನ.
- ❖ 2001ರಂದು ಪೂರ್ವ – ವಿಶ್ವವಿದ್ಯಾಲಯ ಅಥ್ಲೆಟಿಕ್ ಸ್ಪರ್ಧೆಯಲ್ಲಿ (200ಮೀ ಮತ್ತು ಎತ್ತರ ಜಿಗಿತ)ದಲ್ಲಿ–ಪ್ರಥಮ ಸ್ಥಾನ.
- ❖ 2002 ರಂದು 8ನೇ ರಾಜ್ಯ ಮಟ್ಟದ ಇಂಟರ್ ಕಾಲೇಜು ಕ್ರೀಡೆಗಳು (ಲಾಂಗ್ ಜಂಪ್ ಮತ್ತು 4*100ಮೀ ರಿಲೇ) ನಲ್ಲಿ –ಪ್ರಥಮ ಸ್ಥಾನ.
- ❖ 2002 ರಂದು ಪೂರ್ವ– ವಿಶ್ವವಿದ್ಯಾಲಯ ಅಥ್ಲೆಟಿಕ್ ಸ್ಪರ್ದೆಯಲ್ಲಿ (200ಮೀಮತ್ತು ಎತ್ತರ ಜಿಗಿತ)ದಲ್ಲಿ –ದ್ವಿತೀಯ ಸ್ಥಾನ.

ಪ್ರಮಿಳಾರವರು ಕ್ರೀಡೆಗೆ ನೀಡಿದ ಕೊಡುಗೆಗಾಗಿ ಕರ್ನಾಟಕ ಸರ್ಕಾರ 2008ರಲ್ಲಿ ಕ್ರೀಡಾ ಕ್ಷೇತ್ರದ ಸರ್ವೋತ್ತಮ ಕ್ರೀಡಾಪಟುವೆಂದು ಘೋಷಿಸಿ ಅವರಿಗೆ 2010ನೇ ಸಾಲಿನಲ್ಲಿ ಏಕಲವ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ನಮ್ಮ ಊರಿನವರಾದ ಪ್ರಮೀಳಾ ಮೇಡಂರವರು ಕ್ರೀಡಾ ಸಾಧನೆಯ ಬಗ್ಗೆ ತಮ್ಮ ಮುಂದೆ ಪರಿಚಯಿಸುತ್ತಿರುವುದು ನನ್ನ ಜೀವನದ ಸೌಭಾಗ್ಯ ಎಂದುಕೊಳ್ಳುತ್ತೇನೆ.

ಕ್ರೀಡಾಕ್ಷೇತ್ರದಲ್ಲಿ ನಮ್ಮ ಭಾರತದಲ್ಲಿ ಹಲವಾರು ಮಂದಿ ಸಾಧನೆಯನ್ನು ಮಾಡಿದ್ದಾರೆ ಕ್ರೀಡಾರಂಗದಲ್ಲಿ ಇನ್ನಷ್ಟು ಸಾಧಿಸಲು ಸ್ಪೂರ್ತಿಯನ್ನು ಕೊಡುತ್ತಿರುವುದು ನಿಜಕ್ಕೂ ಹೆಮ್ಮಯ ಸಂಗತಿ ಏಕಲವ್ಯ ಪ್ರಶಸ್ತಿಯನ್ನು ಪಡೆದಿರುವಂತಹ ಪ್ರಮೀಳಾ ಮೇಡಂರವರು ಬಂಡಿಹೊಳೆ ಗ್ರಾಮದಲ್ಲಿ ಸಾಧಾರಣಾ ರೈತ ಕುಟುಂಬದಲ್ಲಿ ಜನಿಸಿ, ಕ್ರೀಡಾಕ್ಷೇತ್ರದಲ್ಲಿ ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದವರೆಗೆ ಕ್ರೀಡೆಯಲ್ಲಿ ಸಾಧನೆಯನ್ನು ಮಾಡಿದ್ದಾರೆ, ಆ ಸಾಧನೆಗೆ ಕ್ರೀಡೆ ಎಂಬುದು ಪುರುಷರಿಗೆ ಮಾತ್ರ ಸೀಮಿತವಲ್ಲ, ಪುರುಷರಷ್ಟೇ ಮಹಿಳೆಯರು ಉತ್ತಮ ಸಾಧನೆ ಮಾಡಿದ್ದಾರೆ, ಮಾಡಬಲ್ಲರು ಎಂಬುದನ್ನು ತೋರಿಸಿ, ಮುಂದಿನ ಪೀಳಿಗೆಗೆ ಇವರು ಸ್ಫೂರ್ತಿದಾಯಕವಾಗಿದ್ದಾರೆ.

**ಲಾವಣ್ಯ ಬಿ.ವಿ** ದ್ವಿತೀಯ .ಬಿ.ಇಡಿ.
**ಮಾರ್ಗದರ್ಶಕರು : ಸತೀಶ ಎಂ.ವಿ.** ಸಹ ಪ್ರಾಧ್ಯಾಪಕರು
ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯ

-THE END-



# ಬಿ.ಎಸ್.ಯಡಿಯೂರಪ್ಪ

## ಜೀವನ

ಕರ್ನಾಟಕ ರಾಜ್ಯ ರಾಜಕಾರಣದ ಜನಪ್ರಿಯ ನಾಯಕರಲ್ಲಿ ಬಿ.ಎಸ್ ಯಡಿಯೂರಪ್ಪನವರು ಅಗ್ರಗಣ್ಯರು.

ಬಿ.ಎಸ್. ಯಡಿಯೂರಪ್ಪನವರು ಪೆಬ್ರವರಿ 27, 1943ರಂದು ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಬೂಕನಕೆರೆಯಲ್ಲಿ ಜನಿಸಿದರು. ಇವರ ತಂದೆ ಸಿದ್ದಲಿಂಗಪ್ಪ ಹಾಗೂ ತಾಯಿ ಪುಟ್ಟತಾಯಮ್ಮ ಬಿ.ಎಸ್.ಯಡಿಯೂರಪ್ಪನವರು ವೀರಶೈವ ಲಿಂಗಾಯತ ಜಾತಿಯ 'ಬಣಜಿಗ' ಪಂಗಡಕ್ಕೆ ಸೇರಿದವರು. ಬಿ.ಎಸ್.ಯಡಿಯೂಪ್ಪನವರು ಬಾಲ್ಯದಲ್ಲಿಯೇ ಅಂದರೆ ತಮ್ಮ 4ನೇ ವಯಸ್ಸಿನಲ್ಲಿಯೇ ತಮ್ಮ ತಾಯಿಯನ್ನು ಕಳೆದುಕೊಂಡರು. ಇವರು ಮಂಡ್ಯದ ಪಿ.ಇ.ಎಸ್. ಕಾಲೇಜಿನಲ್ಲಿ ಪದವಿ ಪೂರ್ವ ಶಿಕ್ಷಣವನ್ನು ಪೂರೈಸಿದರು.

1965ರಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಪ್ರಥಮ ದರ್ಜೆಯ ಗುಮಾಸ್ತರಾಗಿ ವೃತ್ತಿ ಜೀವನವನ್ನು ಆರಂಭಿಸಿದರು. ನಂತರ ಕೆಲಸಕ್ಕೆ ರಾಜೀನಾಮೆ ನೀಡಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರಕ್ಕೆ ತೆರಳಿ 1965, ವೀರಭದ್ರ ಶಾಸ್ತ್ರಿಯವರ ಶಂಕರ ಅಕ್ಕಿ ಗಿರಣಿಯಲ್ಲಿ ಗುಮಾಸ್ತರಾಗಿ ಕೆಲಸಕ್ಕೆ ಸೇರಿದರು. ತಾವು ಗುಮಾಸ್ತರಾಗಿ ಕೆಲಸ ಮಾಡುತ್ತಿದ್ದ ಅಕ್ಕಿ ಗಿರಣಿಯ ಮಾಲೀಕರಾದ ಶಂಕರರವರ ಮಗಳು ಮೈತ್ರಾದೇವಿಯನ್ನು ಪ್ರೀತಿಸಿದ ಯಡಿಯೂರಪ್ಪನವರು 1967ರಲ್ಲಿ ಅವರನ್ನು ವಿವಾಹವಾದರು. ಇವರಿಗೆ ರಾಘವೇಂದ್ರ,ವಿಜೇಂದ್ರ,ಅರುಣಾದೇವಿ,ಪದ್ಮಾವತಿ ಮತ್ತು ಉಮಾದೇವಿ ಮಕ್ಕಳಿದ್ದರು.

## ರಾಜಕೀಯ ಪ್ರವೇಶ

ಬಿ.ಎಸ್.ಯಡಿಯೂರಪ್ಪನವರು ಕಾಲೇಜು ದಿನಗಳಲ್ಲೇ ರಾಷ್ಟ್ರೀಯ ಸ್ವಯಂ–ಸೇವಕ ಸಂಘದ ಸದಸ್ಯರಾಗಿದ್ದರು. 1970ರಲ್ಲಿ ಆರ್.ಎಸ್.ಎಸ್ ನ ಶಿಕಾರಿಪುರ ಘಟಕದ ಕಾರ್ಯನಿರ್ವಾಹಕರಾಗಿ ನೇಮಕಗೊಳ್ಳುವ ಮೂಲಕ ಮೊದಲ ಬಾರಿಗೆ ಸಾರ್ವಜನಿಕ ಜೀವನದಲ್ಲಿ ಗುರುತಿಸಿಕೊಂಡರು. ನಂತರ 1972ರಲ್ಲಿ ಶಿಕಾರಿಪುರದ ಜನಸಂಘದ ಅಧ್ಯಕ್ಷರಾಗಿ ಆಯ್ಕೆಯಾದರು. 1980ರಲ್ಲಿ ಶಿಕಾರಿಪುರ ಬಿಜೆಪಿ ತಾಲೂಕು ಘಟಕದ ಅಧ್ಯಕ್ಷರಾದರು. 1983 ರಲ್ಲಿ ಮೊದಲ ಬಾರಿಗೆ ಶಿಕಾರಿಪುರದ ವಿಧಾನಸಭಾ ಕ್ಷೇತ್ರದ

ಶಾಸಕರಾದರು ಇದಾದ 2 ವರ್ಷದ ಬಳಿಕ 1985ರಲ್ಲಿ ಬಿಜೆಪಿಯ ಶಿವಮೊಗ್ಗ ಜಿಲ್ಲಾ ಅಧ್ಯಕ್ಷರಾಗಿ ನೇಮಕಗೊಂಡರು. 1988ರಲ್ಲಿ ಕರ್ನಾಟಕದ ಬಿಜೆಪಿ ರಾಜ್ಯಾಧ್ಯಕ್ಷರಾಗಿ ನೇಮಕಗೊಂಡರು. 1992ರಲ್ಲಿ ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿಯಾದರು. 1994ರಲ್ಲಿ ವಿಧಾನಸಭೆ ಚುನಾವಣೆ ನಂತರ ವಿಧಾನಸಭೆಯ ಪ್ರತಿಪಕ್ಷ ನಾಯಕರಾದರು. 1999ರ ವಿಧಾನ ಸಭೆ ಚುನಾವಣೆಯಲ್ಲಿ ಸೋಲನ್ನು ಅನುಭವಿಸಿದ ಇವರು ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾದರು. 2004ರ ಚುನಾವಣೆಯಲ್ಲಿ ಪುನಃ ವಿಧಾನ ಸಭೆಗೆ ಆಯ್ಕೆಯಾಗಿ ಪ್ರತಿಪಕ್ಷ ನಾಯಕರಾದರು.

2006ರಲ್ಲಿ ಬಿಜೆಪಿ–ಜೆಡಿಎಸ್ ನೇತೃತ್ವದ ಸಮ್ಮಿಶ್ರ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿ ಬಿ.ಎಸ್.ಯಡಿಯೂರಪ್ಪ ಅಧಿಕಾರ ವಹಿಸಿಕೊಂಡರು. ಆಗ ಹೆಚ್.ಡಿ.ಕುಮಾರಸ್ವಾಮಿರವರು 20 ತಿಂಗಳ ಕಾಲ ಮುಖ್ಯಮಂತ್ರಿಯಾಗಿದ್ದರು. 20 ತಿಂಗಳು ಕುಮಾರಸ್ವಾಮಿ ರವರು ಮತ್ತು ಉಳಿದ 20 ತಿಂಗಳು ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿರುತ್ತಾರೆ. ಎಂಬುದು ಈ ಮೊದಲೇ ಮಾಡಿಕೊಂಡ ಒಪ್ಪಂದವಾಗಿತ್ತು. ಆದರೆ ಯಡಿಯೂರಪ್ಪನವರಿಗೆ ಅಧಿಕಾರ ಬಿಟ್ಟುಕೊಡಲು ಕುಮಾರಸ್ವಾಮಿರವರು ಒಪ್ಪದ ಕಾರಣ ಜೆಡಿಎಸ್‌ಗೆ ನೀಡಿದ ಬೆಂಬಲವನ್ನು ಬಿಜೆಪಿ ವಾಪಸ್ಸು ಪಡೆಯಿತು. ಇದರಿಂದ ಸರ್ಕಾರ ಪತನಗೊಂಡು ರಾಷ್ಟ್ರಪತಿ ಆಡಳಿತ ಶುರುವಾಯಿತು. ನಂತರ ಜೆಡಿಎಸ್ ಮತ್ತು ಬಿಜೆಪಿ ನಡುವಿನ ಭಿನ್ನಾಭಿಪ್ರಾಯ ಶಮನಗೊಂಡ ಪರಿಣಾಮ 2007ರ ನೆವೆಂಬರ್ 12 ರಂದು ಬಿ.ಎಸ್. ಯಡಿಯೂರಪ್ಪನವರು ಮೊದಲ ಬಾರಿಗೆ ಕರ್ನಾಟಕದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುವ ಮೂಲಕ ಇಡೀ ದಕ್ಷಿಣ ಬಾರತದಲ್ಲೇ ಮೊದಲ ಬಾರಿಗೆ ಬಿಜೆಪಿ ಸರ್ಕಾರವನ್ನು ಅಸ್ತಿತ್ವಕ್ಕೆ ತಂದ ಕೀರ್ತಿ ಯಡಿಯೂರಪ್ಪನವರಿಗೆ ಸಲ್ಲುತ್ತದೆ.

ಆದರೆ ಸರ್ಕಾರದೊಳಗಿನ ಅಸಮಾಧಾನದಿಂದ ಒಂದೇ ವಾರಕ್ಕೆ ಯಡಿಯೂರಪ್ಪರವರು ಸಿಎಂ ಸ್ಥಾನದಿಂದ ಕೆಳಗಿಳಿಯಬೇಕಾಯಿತು. ಆದರೂ ದೃತಿಗೆಡದೆ ಪಕ್ಷದ ಎಲ್ಲಾ ಸಧ್ಯಸರನ್ನು ಒಗ್ಗೂಡಿಸಿ 2008ರ ಮೇ 30ರಂದು ಮತ್ತೆ 2ನೇ ಬಾರಿಗೆ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಆದರೆ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಕರ್ನಾಟಕ ಲೋಕಯುಕ್ತ ನೀಡಿದ ತನಿಖಾ ವರದಿಯಲ್ಲಿ ಯಡಿಯೂರಪ್ಪನವರ ಹೆಸರು ಇದ್ದುದರಿಂದ ಹೈಕಮಾಂಡ್ ಸೂಚನೆ ಮೇರೆಗೆ ಅಧಿಕಾರ ಸ್ವೀಕರಿಸಿ 3 ವರ್ಷಕ್ಕೆ ಅಂದರೆ 2011ರ ಜುಲೈ 31 ರಂದು ಯಡಿಯೂರಪ್ಪನವರು ಸಿಎಂ

ಸ್ಥಾನಕ್ಕೆ ರಾಜೀನಾಮೆ ನೀಡಿದರು. ಇದಾದ ಬಳಿಕ ಪಕ್ಷದ ಕಾರ್ಯಕರ್ತರುಗಳು ಯಡಿಯೂರಪ್ಪನವರ ವಿರುದ್ಧವಾಗಿ ಹಗುರವಾಗಿ ಮಾತನಾಡಲುಪ್ರಾರಂಭಿಸಿ ಟೀಕೆ ಟಿಪ್ಪಣಿಗಳನ್ನು ಮಾಡತೊಡಗಿದರು. ಇದು ದಿನದಿಂದ ದಿನಕ್ಕೆ ಹೆಚ್ಚಾಗತೊಡಗಿತು. ಇಂತಹ ಸಂದರ್ಭದಲ್ಲಿ ಹಿಂದೆ ಸರಿಯದ ಯಡಿಯೂರಪ್ಪನವರು ಟೀಕೆ ಟಿಪ್ಪಣಿಗಳಿಗೆ ಪ್ರತೀ ಉತ್ತರ ನೀಡಬೇಕೆಂದು ನಿರ್ಧರಿಸಿ, ನಾಡಿನ ಜನತೆಯನ್ನು ಬಲವಾಗಿ ನಂಬಿ ಕರ್ನಾಟಕ ಜನತಾ ಪಕ್ಷ ಎಂಬ ನೂತನ ಪ್ರಾದೇಶಿಕ ಪಕ್ಷವನ್ನು 2012 ಡಿಸೆಂಬರ್ 9ರಂದು ಅಧಿಕೃತವಾಗಿ ಸ್ಥಾಪಿಸಿದರು, ಯಡಿಯೂರಪ್ಪನವರೊಂದಿಗೆ ಬಿಜೆಪಿಯ ಮಾಜಿ ಮತ್ತು ಹಾಲಿ ಶಾಸಕರು, ಸಚಿವರು ಮತ್ತು ಹಿರಿಯ ಪದಾಧಿಕಾರಿಗಳು ಪಕ್ಷಕ್ಕೆ ಸೇರ್ಪಡೆಗೊಂಡರು.

2013ರ ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಯಡಿಯೂರಪ್ಪನವರ ನಾಯಕತ್ವದಲ್ಲಿ ಪಕ್ಷವು ಸ್ಪರ್ಧಿಸಿದ್ಧ 23 ಸ್ಥಾನಗಳಲ್ಲಿ 6 ಸ್ಥಾನಗಳನ್ನು ಗೆದ್ದುಕೊಂಡಿದ್ದು ಮತ್ತು ಶೇಕಡ 10ರಷ್ಟು ಮತಗಳನ್ನು ಗಳಿಸಿತು. ಚುನಾವಣೆಯಲ್ಲಿ ಪಕ್ಷವು ಯಾವುದೇ ಗಮನಾರ್ಹ ಲಾಭವನ್ನು ಗಳಿಸದಿದ್ದರೂ, ಹೊರಹೋಗುವ ವಿಧಾನಸಭೆಯಲ್ಲಿ ಅದು ಹೊಂದಿದ್ದ 110 ಸ್ಥಾನಗಳಿಗೆ ಹೋಲಿಸಿದರೆ ಅದು ಬಿಜೆಪಿಯನ್ನು ಕೇವಲ 40ಸ್ಥಾನಗಳಿಗೆ ಸೀಮಿತಗೊಳಿಸಿತ್ತು. ಕೆಜಿಪಿ ಪಕ್ಷವು ಬಿಜೆಪಿ ಪಕ್ಷದಲ್ಲಿ ಛಿದ್ರವಾಗಿ ರೂಪಗೊಂಡಿದ್ದರೂ, ಅದು ಹಿಂದುತ್ವವನ್ನು ತನ್ನ ಸಿದ್ಧಾಂತವೆಂದು ಪ್ರತಿಪಾದಿಸಲಿಲ್ಲ ಮತ್ತು ಬದಲಿಗೆ ಜಾತ್ಯಾತೀತ ದೃಷ್ಟಿಕೋನದೊಂದಿಗೆ ಕೇಂದ್ರೀಕೃತ ಸಾಮಾಜಿಕ ಪ್ರಜಾಪ್ರಭುತ್ವದ ನಿಲುವನ್ನು ಅಳವಡಿಸಿಕೊಂಡಿತು.

2012ರಲ್ಲಿ ಸ್ಥಾಪನೆಗೊಂಡಿದ್ದ ಕೆಜಿಪಿ ಪಕ್ಷವು 2014ರಲ್ಲಿ ಮರಳಿ ಬಿಜೆಪಿ ಪಕ್ಷದೊಂದಿಗೆ ವಿಲೀನಗೊಂಡಿತು. ಇದರ ನೇತೃತ್ವವನ್ನು ಯಡಿಯೂರಪ್ಪನವರೇ ವಹಿಸಿದ್ದು ಮತ್ತೆ ಬಿಜೆಪಿಗೆ ಸೇರ್ಪಡೆಯಾದರು. 2018ರ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಸ್ಪಷ್ಟ ಬಹುಮತ ಬಾರದ ಕಾರಣದಿಂದ 104 ಸ್ಥಾನಗಳನ್ನು ಪಡೆದು ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದ ಬಿಜೆಪಿ ಪಕ್ಷಕ್ಕೆ ಸರ್ಕಾರ ರಚಿಸಲು ರಾಜ್ಯಪಾಲರಾಗಿದ್ದ ವಜುಭಾಯ್ ವಾಲಾರವರು ಆಹ್ವಾನ ನೀಡಿದ್ದರು.

ಅದರಂತೆ 2018ರ ಮೇ 17 ರಂದು ಬಿ.ಎಸ್.ಯಡಿಯೂರಪ್ಪನವರು 3ನೇ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಆದರೆ ಕಾಂಗ್ರೆಸ್–ಜೆಡಿಎಸ್ ಮೈತ್ರಿಯಾಗಿದ್ದರಿಂದ ವಿಧಾನಸಭೆಯಲ್ಲಿ ಬಹುಮತ ಸಾಬಿತುಪಡಿಸಲಾರದೆ ಮೇ

23ರಂದು ಯಡಿಯೂರಪ್ಪನವರು ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಬಳಿಕ 2019ರಲ್ಲಿ ಆಪರೇಷನ್ ಕಮಲ ನಡೆಸಿ, ಮೈತ್ರಿ ಸರ್ಕಾರವನ್ನು ಪತನಗೊಳಿಸಿದರು.

2019 ರ ಜುಲೈ 26ರಂದು 4ನೇ ಬಾರಿಗೆ ಬಿ.ಎಸ್.ಯಡಿಯೂರಪ್ಪನವರು ಮುಖ್ಯ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಆಪರೇಷನ್ ಕಮಲದ ಮೂಲಕ ಕಾಂಗ್ರೆಸ್ ಜೆಡಿಎಸ್ ಶಾಸಕರನ್ನು ತೆಕ್ಕೆಗೆ ಹಾಕಿಕೊಂಡು ಬಹುಮತ ಸಾಬೀತುಪಡಿಸಿದರು ಆದರೆ ಪಕ್ಷದೊಳಗೆ ಎದ್ದ ಭಿನ್ನಾಭಿಪ್ರಾಯಗಳು, ಕುಟುಂಬ ರಾಜಕಾರಣದ ಆರೋಪ ಮುಂತಾದವುಗಳನ್ನು ಬಗೆಹರಿಸಲು ಸಾಧ್ಯವಾಗದ ಕಾರಣ ಯಡಿಯೂರಪ್ಪನವರು ಸಿ.ಎಂ ಸ್ಥಾನಕ್ಕೆ ರಾಜೀನಾಮೆ ನೀಡುತ್ತಾರೆ ಎಂಬ ವದಂತಿಗಳು ಹರಿದಾಡುತ್ತಿದ್ದವು. ಆದರೆ ಯಡಿಯೂರಪ್ಪನವರು ಮಾತ್ರ ತಾವು ಮುಖ್ಯಮಂತ್ರಿಯಾಗಿ ಪೂರ್ಣಾವಧಿ ಮುಗಿಸುವುದಾಗಿ ಘೋಷಿಸುತ್ತಲೇ ಇದ್ದರು. ಕೊನೆಗೆ ಸಿ.ಎಂ ಸ್ಥಾನಕ್ಕೆ ರಾಜೀನಾಮೆ ನೀಡಿದರು. 4 ಬಾರಿ ಕರ್ನಾಟಕದ ಮುಖ್ಯಮಂತ್ರಿಯಾದರೂ ಅವರು ಅದೃಷ್ಟವಂತ ರಾಜಕಾರಣಿಯೇ ಅಂತೆಯೇ ದುರಾದೃಷ್ಟವಂತರೂ ಹೌದು. 4 ಬಾರಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಿ.ಎಸ್. ಯಡಿಯೂರಪ್ಪನವರು ಒಂದು ಬಾರಿಯೂ ತಮ್ಮ ಅಧಿಕಾರಾವಧಿಯನ್ನು ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ.

ಕರ್ನಾಟಕ ಮಾತ್ರವಲ್ಲದೇ ದಕ್ಷಿಣ ಭಾರತದಲ್ಲಿ ಬಿಜೆಪಿ ಪಕ್ಷವನ್ನು ಕಟ್ಟಿ ಬೆಳೆಸಿದ ಯಡಿಯೂರಪ್ಪನವರು ಕ್ರಮೇಣ ತಮ್ಮದೇ ಪಕ್ಷದಲ್ಲಿ ಮೂಲೆಗುಂಪಾಗತೊಡಗಿದರು. ವಿರೋಧಪಕ್ಷದವರ ಆರೋಪಗಳ ಜೊತೆಗೆ ಸ್ವ–ಪಕ್ಷೀಯರ ಅಸಮಾಧಾನದ ಆರೋಪ ಆಕ್ರೋಶವನ್ನು ಶಮನ ಮಾಡುವುದು ಸವಾಲಿನ ಕೆಲಸವಾಗಿತ್ತು. ಕಾಂಗ್ರೆಸ್ಸನ ಭದ್ರಕೋಟೆಯನ್ನು ಭೇದಿಸಿ ಪ್ರಪ್ರಥಮ ಬಾರಿಗೆ ದಕ್ಷಿಣ ಭಾರತದಲ್ಲಿ ಬಿಜೆಪಿ ಅಧಿಪತ್ಯವನ್ನು ಸ್ಥಾಪಿಸಲು ಬಿ.ಎಸ್.ಯಡಿಯೂರಪ್ಪನವರು ಯಶಸ್ವಿಯಾಗಿದ್ದು ಸಣ್ಣ ಮಾತೇನಲ್ಲ, ಇದೇ ಕಾರಣಕ್ಕೆ ಬಿಜೆಪಿ ಹೈಕಮಾಂಡ್ ವಲಯದಲ್ಲೂ ಇವರು ತಮ್ಮದೇ ಆದ ವರ್ಚಸ್ಸನ್ನು ಹೊಂದಿದ್ದಾರೆ.

ಕರ್ನಾಟಕದ ಮೊದಲ ಬಿಜೆಪಿ ಮೊದಲ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆ ಮಾತ್ರವಲ್ಲದೆ ಕರ್ನಾಟಕದಲ್ಲಿ ಪ್ರಬಲವಾಗಿರುವ ಲಿಂಗಾಯುತ ಸಮುದಾಯದ ಮೊದಲ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಯೂ ಇವರದ್ದಾಗಿದೆ. ಈಗಾಗಲೇ 81ವರ್ಷವಾಗಿರುವ ಯಡಿಯೂರಪ್ಪನವರಿಗೆ ಇನ್ನೊಮ್ಮೆ ಮುಖ್ಯ ಮಂತ್ರಿಯಾಗುವ ಅವಕಾಶ ಇಲ್ಲದ ಕಾರಣ

ಕರ್ನಾಟಕದಲ್ಲಿ ಬಿ.ಎಸ್.ಯಡಿಯೂರಪ್ಪನವರ ಯುಗ ಮುಗಿದಂತಾಗಿದೆ. ಪ್ರಸ್ತುತ ಬಿ.ಎಸ್.ಯಟೀಯೂರಪ್ಪನವರ ಕಿರಿಯ ಮಗ ವಿಜೇಂದ್ರ ರವರು ರಾಜ್ಯ ಬಿಜೇಪಿಯ ರಾಜ್ಯಧ್ಯಕ್ಷರಾಗಿ ಬಿಜೇಪಿ ಪಕ್ಷವನ್ನು ಸಂಘಟಿಸುವಲ್ಲಿ ಪ್ರಮುಖರಾಗಿದ್ದಾರೆ.

## ಹುಟ್ಟೂರು ಬೂಕನಕೆರೆಗೆ ಬಿ.ಎಸ್.ವೈ ಅವರ ಕೊಡುಗೆಗಳು

- ಗ್ರಾಮದ ಜೋಡಿ ರಸ್ತೆ;
- ಚಿನಕುರಳಿ– ಬೂಕನಕೆರೆ– ಹರಿಹರಪುರ ಸಂಪರ್ಕ (ರಸ್ತೆ) ಕಟ್ಟಹಳ್ಳಿ– ಸೋಮನಹಳ್ಳಿ
- ಪ್ರಾಥಮಿಕ ಆರೋಗ್ಯಕೇಂದ್ರದ ಉನ್ನತೀಕರಣ.
- ಸರ್ಕಾರಿ ಪದವಿಪೂರ್ವ ಕಾಲೇಜಿಗೆ ನೂತನ ಕಟ್ಟಡ.
- ಸಮುದಾಯ ಭವನ.
- ಗೋಗಲಮ್ಮ ದೇವಿಗೆ ವಿಶಾಲ ಪ್ರಾಕಾರ.
- ಗವಿಮಠದಲ್ಲಿನ ಸಿದ್ದಲಿಂಗೇಶ್ವರ ದೇವಾಲಯದ ಜಿರ್ಣೋದ್ದಾರ ಮತ್ತು ಸಮುದಾಯ ಭವನದ ನಿರ್ಮಾಣ.

**ದಿನೇಶ್ ಆರಾಧ್ಯ** ದ್ವಿತೀಯ .ಬಿ.ಇಡಿ.
**ಮಾರ್ಗದರ್ಶಕರು : ಮಹಾಲಿಂಗು ಕೆ** ಪ್ರಾಧ್ಯಾಪಕರು
ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯ

-THE END-

# ಕೃಷ್ಣಪಥ



ರಾಜಕೀಯ ಚಟುವಟಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ರಾಜ್ಯಮಟ್ಟದಿಂದ ಕೇಂದ್ರದವರೆಗೂ ತಮ್ಮನ್ನ ಕ್ರಿಯಾಶೀಲವಾಗಿ ತೊಡಗಿಸಿಕೊಂಡು ಕರ್ನಾಟಕ ರಾಜ್ಯ ರಾಜಕಾರಣದಲ್ಲಿ ಮಿನುಗಿದ ಅಗ್ರಗಣ್ಯ ನಾಯಕರಲ್ಲಿ ಎಸ್.ಎಂ.ಕೃಷ್ಣರವರು ಕೂಡ ಒಬ್ಬರು. ಎಸ್.ಎಂ.ಕೃಷ್ಣರವರು ಮೇ 01 1932 ರಂದು ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಸೋಮನಹಳ್ಳಿಯಲ್ಲಿ ತಾಯಮ್ಮ ಮತ್ತು ಎಸ್.ಸಿ ಮಲ್ಲಯ್ಯ ದಂಪತಿಗಳ ಸುಪುತ್ರರಾಗಿ ಜನಿಸಿದರು.

ಯಾವುದೇ ವ್ಯಕ್ತಿಯ ವ್ಯಕ್ತಿತ್ವ ಅವರ ಕುಟುಂಬ ಸುತ್ತಮುತ್ತಲಿನ ಪರಿಸರ ಮತ್ತು ಸಮಾಜದ ಪ್ರಭಾವಕ್ಕೆ ಒಳಪಟ್ಟಿರುತ್ತದೆ, ಕುಟುಂಬದ ಹಿನ್ನೆಲೆ ಮತ್ತು ಪರಿಸರ ಇವರೊಬ್ಬ ದಕ್ಷ ಪ್ರಬುದ್ಧ ರಾಜಕಾರಣಿ ಹಾಗೂ ಆಡಳಿತಗಾರರಾಗಲು ಪೋಷಕಾಂಶವಾಗಿದ್ದು, ಸುಶಿಕ್ಷಿತ ರಾಜಕಾರಣಿಗಳಲ್ಲಿ ಎಸ್.ಎಂ.ಕೃಷ್ಣರವರು ಅಗ್ರಗಣ್ಯರು.

ಮಲ್ಲಯ್ಯನವರ ತಂದೆ ಚಿಕ್ಕೇಗೌಡರು ಅಂದರೆ ಎಸ್.ಎಂ.ಕೃಷ್ಣನವರ ತಾತನವರು ಅಂದಿನ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು ನಂತರ ಮಲ್ಲಯ್ಯನವರು ಕೂಡ ಅದೇ ಸಂಸ್ಥಾನದಲ್ಲಿ ಮುಂದುವರೆದು 1921 ರಲ್ಲಿ ಚಿಕ್ಕಗೌಡರು ನಿಧನವಾದ ನಂತರ ತೆರವಾದ ಸ್ಥಾನವನ್ನು 1924ರಲ್ಲಿ ಎಸ್.ಸಿ.ಮಲ್ಲಯ್ಯನವರು ಅಲಂಕರಿಸಿದರು.

ಮಲ್ಲಯ್ಯನವರ ವಿದ್ವತ್ತು, ಪಾಂಡಿತ್ಯ, ವೈಚಾರಿಕ ಚಿಂತನೆ, ಹಾಗೂ ಅವರ ವ್ಯಕ್ತಿತ್ವದ ಬಗ್ಗೆ ಕೇಳಿ ತಿಳಿದಿದ್ದ ಅಂದಿನ ಮೈಸೂರು ಅರಸರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ರವರು ಎಸ್.ಸಿ.ಮಲ್ಲಯ್ಯನವರನ್ನು ಕುರಿತು "ಎಸ್.ಸಿ.ಮಲ್ಲಯ್ಯನವರಂತವರು ಪ್ರಜಾ ಪ್ರತಿನಿಧಿ ಸಭೆಯಲ್ಲಿ ಇರುವುದು ಸಭೆಗೆ ಭೂಷಣ" ಎಂದು ಶ್ಲಾಘಿಸಿದರು.

ಇದೇ ಪರಂಪರೆ ಹಾಗೂ ಹಿರಿಯರು ಹಾಕಿಕೊಟ್ಟ ಪಂಕ್ತಿಯಲ್ಲಿ ಸಾಗಿ ಬಂದ ಎಸ್.ಎಂ ಕೃಷ್ಣರವರು ಶಾಸಕರಾಗಿ, ಸಂಸದರಾಗಿ, ಸಚಿವರಾಗಿ, ವಿಧಾನಸಭಾಧ್ಯಕ್ಷರಾಗಿ, ಉಪಮುಖ್ಯಮಂತ್ರಿಯಾಗಿ, ಮತ್ತು ಮುಖ್ಯಮಂತ್ರಿಯಾಗಿ ರಾಜ್ಯ ಹಾಗೂ ರಾಷ್ಟ್ರ ರಾಜಕಾರಣದಲ್ಲಿ ಧ್ರುವತಾರೆಯಂತೆ ಜನಪ್ರಿಯ ನಾಯಕರಾದರು.

## ಶೈಕ್ಷಣಿಕ ಹಿನ್ನೆಲೆ.

1934ನೇ ಇಸವಿ ಎಸ್.ಎಂ.ಕೃಷ್ಣನವರು ಜೀವನದ ಮಹತ್ವದ ಮೈಲುಗಲು. ಆ ವರ್ಷ ಮೈಸೂರು ರಾಜ್ಯದ ಪ್ರವಾಸದಲ್ಲಿದ್ದ ಮಹಾತ್ಮ ಗಾಂಧೀಜಿಯವರು ಮಲ್ಲಯ್ಯನವರ ಆಹ್ವಾನದ ಮೇರೆಗೆ ಸೋಮನಹಳ್ಳಿಯ ಅಂದಿನ ಒಕ್ಕಲಿಗ ವಿದ್ಯಾರ್ಥಿನಿಲಯಕ್ಕೆ ಆಗಮಿಸಿದರು. ಮೂರು ವರ್ಷದ ಪುಟ್ಟ ಬಾಲಕರಾಗಿದ್ದ ಎಸ್.ಎಂ.ಕೃಷ್ಣರವರು ಗಾಂಧೀಜಿಯವರಿಗೆ ಮಾಲಾರ್ಪಣೆ ಮಾಡಿದರು ನಂತರ ಗಾಂಧೀಜಿಯವರ ಹರಿಜನ ಸೇವಾ ನಿಧಿಗೆ ತಮ್ಮ ಕಿವಿಯಲ್ಲಿದ್ದ ಚಿನ್ನದ ಓಲೆಯನ್ನು ಕೊಡುವಂತೆ ತಂದೆಯವರಾದ ಮಲ್ಲಯ್ಯನವರು ಸೂಚಿಸಿದಾಗ ಅದನ್ನು ಗಾಂಧೀಜಿಯವರಿಗೆ ನೀಡಿದರು. ಇದಾದ ನಂತರ ಗಾಂಧೀಜಿಯವರು ಪುಟ್ಟ ಬಾಲಕರಾದ ಎಸ್.ಎಂ ಕೃಷ್ಣರರವರು ಗಲ್ಲವನ್ನ ಸವರಿ ಆಶೀರ್ವದಿಸಿದರು. ಗಾಂಧೀಜಿಯವರು ವಿದ್ಯಾರ್ಥಿ ನಿಲಯ ಕುರಿತು ಹೀಗೆ ಹೇಳಿದರು.

**“I am glad to know that there are two harijana boys also in this hostel.”**

1937ರಲ್ಲಿ ಸೋಮನಹಳ್ಳಿಯಲ್ಲಿ ತಮ್ಮ ಪ್ರಾಥಮಿಕ ಶಿಕ್ಷಣಕ್ಕೆ ಪದಾರ್ಪಣೆ ಮಾಡಿ, ಚಿಕ್ಕವಯಸ್ಸಿನಲ್ಲಿ ಚುರುಕಾಗಿದ್ದ ಇವರು ಮೂರನೇ ತರಗತಿಯಲ್ಲಿ ಪಡೆದ ಅತ್ಯಧಿಕ ಅಂಕಗಳಿಂದಾಗಿ ನೇರವಾಗಿ ಡಬಲ್ ಪ್ರಮೋಷನ್ ಪಡೆದು ಮಿಡ್ಲ್ ಸ್ಕೂಲಿನ ಮೊದಲ ವರ್ಷಕ್ಕೆ ಪ್ರವೇಶ ಪಡೆದರು. ಚಿಕ್ಕಬಳ್ಳಾಪುರದಲ್ಲಿ ಅಮಾಲ್ದಾರರಾಗಿದ್ದ ಅವರ ದೊಡ್ಡ ಭಾವ ಬಿ.ಎಂ.ಲಿಂಗಯ್ಯನವರ ಮನೆಯಲ್ಲಿ ಇದ್ದುಕೊಂಡು ಮಾಧ್ಯಮಿಕ ಶಾಲೆಗೆ ಸೇರಿಕೊಂಡರು. ತಮ್ಮ ತಂದೆಯ ಅಪೇಕ್ಷೆ ಮೇರೆಗೆ ರಾಮಕೃಷ್ಣ ಮಠದ ಆಶ್ರಮಕ್ಕೆ

ಸೇರಿದರು. ನಂತರ ಮಹಾಜನ ಪ್ರೌಢಶಾಲೆಯಲ್ಲಿ ಮಾಧ್ಯಮಿಕ ಶಿಕ್ಷಣ ಪಡೆದು ಸಾವಿರದ ಒಂಬೈನೂರ ನಲವತ್ತೆಂಟರಲ್ಲಿ ಎಸ್.ಎಂ.ಕೃಷ್ಣರವರು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದರು.

ಉನ್ನತ ವಿದ್ಯಾಭ್ಯಾಸಕ್ಕಾಗಿ ಅಂದಿನ ಮೈಸೂರು ಸೂಪರ್ ಫಾಸ್ಟ್ ಗ್ರೇಡ್–3 ಅಂದರೆ ಇಂದಿನ ಯುವರಾಜ ಕಾಲೇಜಿನಲ್ಲಿ ಇಂಟರ್ ಮೀಡಿಯೇಟ್ ಸೇರಿದರು. ಈ ಅವಧಿಯಲ್ಲಿ ವಾಲಿಬಾಲ್ ಮತ್ತು ಟೆನ್ನಿಸ್ ಕ್ರೀಡೆಗಳಲ್ಲಿ ಅತೀ ಆಸಕ್ತಿ ಬೆಳೆಸಿಕೊಂಡರು. ತದನಂತರ ಪದವಿ ಶಿಕ್ಷಣವನ್ನು ಮೈಸೂರಿನ ಪ್ರತಿಷ್ಠಿತ ಮಹಾರಾಜ ಕಾಲೇಜಿನಲ್ಲಿ ಹೆಚ್.ಇ.ಪಿ ವಿಷಯಗಳಲ್ಲಿ ಪಡೆದರು. ತರುವಾಯು ಬೆಂಗಳೂರಿನ ಸರ್ಕಾರಿ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಪಡೆದರು.

## ಜ್ಞಾನದ ಹಸಿವನ್ನು ನೀಗಿಸಲು ವಿದೇಶಿ ಪ್ರವಾಸ

ಆಗಸ್ಟ್ 09 1958ರಂದು ಎಂ.ವಿ.ವಿಕ್ಟೋರಿಯಾ ಹಡಗಿನಲ್ಲಿ ಇಟಲಿಯ ನೇಪಲ್ಸ್ ನಗರದತ್ತ 15 ದಿನಗಳ ಸುದೀರ್ಘ ಪ್ರಯಾಣ ಮತ್ತೆ ಅಲ್ಲಿಂದ ಟೆಕ್ಸಾಸ್ ಪ್ರಾಂತ್ಯವನ್ನು ತಲುಪಿ ಹೆಸರಾಂತ ಸದರನ್ ಮೆಥಡಿಸ್ಟ್ ವಿ.ವಿಯಲ್ಲಿ Master of Comparative Law Course ಗೆ ಸೇರಿದರು. ಇದಾದ ನಂತರ ಪಿಹೆಚ್.ಡಿ ಪದವಿಗಾಗಿ ಪ್ರವೇಶ ಪಡೆದರು.

## ಮರಳಿ ತಾಯ್ನಾಡಿಗೆ

ಎಸ್.ಎಂ.ಕೃಷ್ಣರವರು ತಮ್ಮ ಹುಟ್ಟೂರು ಮಾತೃಭೂಮಿಯ ಮೇಲೆ ಕಿಂಚಿತ್ತು ಅಭಿಮಾನ ಕಡಿಮೆಯಾಗಿರಲಿಲ್ಲ. 1961 ಮೇ 16ರಂದು ಮರಳಿ ತಮ್ಮ ಹುಟ್ಟೂರಿಗೆ ಬಂದರು.

# ಎಸ್.ಎಂ.ಕೃಷ್ಣರವರ ರಾಜಕೀಯ ಪಥ

ಎಸ್.ಎಂ.ಕೃಷ್ಣರವರು ಮೂಲತಃ ರಾಜಕೀಯ ಹಿನ್ನಲೆಯುಳ್ಳ ಕುಟುಂಬದಿಂದ ಬಂದವರಾಗಿದ್ದು ತಾತಾ ಚಿಕ್ಕೇಗೌಡರು ಹಾಗೂ ತಂದೆ ಮಲ್ಲಯ್ಯನವರು ಹಳೇ ಮೈಸೂರು ಪ್ರಾಂತ್ಯದ ಜನರ ಮನಸ್ಸಿನಲ್ಲಿ ಬೇರೂರಿದ್ದ ಅಗ್ರಗಣ್ಯ ನಾಯಕರು.

ಮದ್ದೂರಿನಲ್ಲಿ ಹೆಚ್ ಕೆ ವೀರಣ್ಣಗೌಡರು ಪ್ರಶ್ನಾತೀತ ಸೋಲಿಲ್ಲದ ನಾಯಕರಾಗಿದ್ದರು. ಆದರೆ ಇವರ ನಡವಳಿಕೆಯಿಂದ ಹಲವಾರು ಕಾಂಗ್ರೇಸ್ ಕಾರ್ಯಕರ್ತರು ವೀರಣ್ಣಗೌಡರ ಬಗ್ಗೆ ಅಸಮಾಧಾನ ಹೊಂದಿದ್ದರು. ಮಲ್ಲಯ್ಯನವರ ಅನುಯಾಯಿಗಳು ಕೂಡ ಪಿ.ಎಸ್ಪಿ ಪಕ್ಷ ಸೇರಿದರು ಪಿ.ಎಸ್ಪಿ ಕಾರ್ಯಕರ್ತರು ಜನಸಾಮಾನ್ಯರ ಅಭಿಪ್ರಾಯ ಪಡೆದು ಅರಕಲ್ಲು ದೊಡ್ಡಿ ಗ್ರಾಮದ ಪಾಪೇಗೌಡರ ಮನೆಯಲ್ಲಿ ಸಭೆ ಸೇರಿ ಕೃಷ್ಣರವರ ವ್ಯಕ್ತಿತ್ವ, ಸಹನೆ, ವಿನಯವಂತಿಕೆ, ಮನೋಭಾವ ಮತ್ತು ಮಾತುಗಾರಿಕೆ ಎಲ್ಲವನ್ನು ಗಣನೆಗೆ ತೆಗೆದುಕೊಂಡು ವೀರಣ್ಣಗೌಡರ ಪ್ರತಿ ಸ್ಪರ್ದಿಯಾಗಿ ಕೃಷ್ಣರವರ ಹೆಸರನ್ನು ಅಂತಿಮಗೊಳಿಸಿದರು.

ಬದುಕು ಹಾಗೂ ರಾಜಕೀಯ ಜೀವನ ಎಷ್ಟು ಆಕಸ್ಮಿಕ ಅನಿರೀಕ್ಷಿತ ಸಂದರ್ಭಕ್ಕೆ ಎಡೆ ಮಾಡಿಕೊಡುತ್ತದೆ ಎಂಬುದಕ್ಕೆ ವೀರಣ್ಣಗೌಡರು ಹಾಗೂ ಎಸ್.ಎಂ.ಕೆ ರವರು ಪ್ರತಿಸ್ಪರ್ದಿಯಾಗಿ ಚುನಾವಣೆಗೆ ನಿಲ್ಲಲು ಹೊರಟಿದ್ದೆ ಸಾಕ್ಷಿ.

1962ರ ಚುನಾವಣೆಯಲ್ಲಿ ಕೃಷ್ಣರವರಿಗೆ ವಿಜಯಮಾಲೆ ದಕ್ಕಿತು ವಿಧಾನಸಭಾ ಕ್ಷೇತ್ರದಲ್ಲಿ ಹೊಸ ಶಕೆ ಆರಂಭವಾಯಿತು. ಸೋಲಿಲ್ಲದ ನಾಯಕರಾಗಿದ್ದ ಎಚ್.ಕೆ.ವಿ ರವರನ್ನ ಎಸ್.ಎಂ.ಕೆ ರವರು ತಮ್ಮ ಚೊಚ್ಚಲ ವಿಧಾನಸಭಾ ಚುನಾವಣೆಯಲ್ಲಿ ಸೋಲಿಸಿದ್ದು ರಾಜ್ಯವ್ಯಾಪಿ ಹರಡಿತು. ಎಸ್.ಎಂ.ಕೆ ರವರ ವಿಜಯಕ್ಕಾಗಿ ಅವಿಶ್ರಾಂತವಾಗಿ ದುಡಿದಿದ್ದ ಮುಖಂಡರಾದ ತಿರುಮಲೆಗೌಡರು ತಮ್ಮ ಸಂತೋಷವನ್ನು ತಡೆಯಲಾಗದೆ ಹೃದಯಾಘಾತದಿಂದ ನಿಧನರಾದರು.

ಪ್ರಥಮ ಬಾರಿಗೆ ವಿಧಾನಸಬಾ ಪ್ರವೇಶಿಸಿ ತಮ್ಮ ವಾಕ್ಚಾತುರ್ಯ ಜಾಣತನದಿಂದ ಮಂತ್ರ ಮುಗ್ದರನ್ನಾಗಿಸಿದರು.

ಅಂದಿನ ಮುಖ್ಯಮಂತ್ರಿ ಆಗಿದ್ದ ನಿಜಲಿಂಗಪ್ಪನವರ ಸರ್ಕಾರದ ತಪ್ಪುಗಳನ್ನು ಎತ್ತಿಹಿಡಿದು ಸಂವಿಧಾನಾತ್ಮಕವಾಗಿ ಕಟು ಟೀಕೆ ಹಾಗೂ ವಿಮರ್ಶೆಗೆ ಒಳಪಡಿಸಿ ಸರ್ಕಾರದ ತಪ್ಪುಗಳನ್ನು ತಿದ್ದಿಕೊಳ್ಳಲು ಎಚ್ಚರಿಕೆ ಗಂಟೆ ನೀಡುತ್ತಿದ್ದರು. ಲೋಕಪಯೋಗಿ ಇಲಾಖೆ ಲೋಕಕಲ್ಯಾಣಕ್ಕಾಗಿ ಇರದೇ ಅಧಿಕಾರಿಗಳು ಮತ್ತು ಕಾಂಟ್ರ್ಯಾಕ್ಟದಾರರ ಪರವಾಗಿದೆ ಎಂದು ಪಿಡಬ್ಲೂಡಿ ಇಲಾಖೆಯ ಅವ್ಯವಹಾರಗಳನ್ನು ಕಟು ಚರ್ಚೆಗೆ ಒಳಪಡಿಸುತ್ತಿದ್ದರು. ಬಹುಕೈಗಾರೀಕರಣ, ಲಿಂಗನಮಕ್ಕಿ ನೀರಾವರಿ ವಿದ್ಯುತ್ ಮುಂತಾದ ರಾಜ್ಯಮಟ್ಟದ ವಿಚಾರಗಳ ಬಗ್ಗೆ ಸರ್ಕಾರದ ಗಮನಸೆಳೆದು ತಂದು ಕಿವಿಯನ್ನು ಹಿಂಡುತಿದ್ದರು.

## ಕೃಷ್ಣರವರ 2ನೇ ಚುನಾವಣೆ

ಸೋಲು ಯಾರನ್ನು ಕಾಡದೆ ಬಿಡದು ಇದಕ್ಕೆ ಕೃಷ್ಣ ರವರೇನೂ ಹೊರತಲ್ಲ, ಬದುಕಲ್ಲಿ ವಿಜಯದ ಬೆನ್ನಲ್ಲೇ ಸೋಲಿನ ಕಹಿ ಅಂಟಿಕೊಂಡಿರುತ್ತದೆ. ಕೃಷ್ಣ ರವರು ತಮ್ಮ 1967ರ ಎರಡನೇ ವಿಧಾನಸಭಾ ಚುನಾವಣೆಯಲ್ಲಿ ಸೋಲನ್ನು ಅನುಭವಿಸಿದರು. ರಾಜಕೀಯದಿಂದ ನಿರ್ಗಮಿಸಲು ಯೋಚಿಸಿದ್ದ ಎಸ್.ಎಂ.ಕೆ ರವರು ಹಿರಿಯರ ಅನುಭವದ ಮಾತನ್ನು ಕೇಳಿದರು. ಸೋಲೇ ಕೃಷ್ಣರವರನ್ನ ಮುಂದೊಂದು ದಿನ ರಾಷ್ಟ್ರ ಮಟ್ಟದ ನಾಯಕರಾಗಿ ರೂಪುಗೊಳ್ಳಲು ಅವಕಾಶವನ್ನು ಒದಗಿಸಿತು.

### 1967ರ ವಿಧಾನಸಭಾ ಚುನಾವಣೆಯಲ್ಲಿ ಕೃಷ್ಣ ರವರ ಸೋಲಿಗೆ ಕಾರಣವಾದ ಅಂಶಗಳು

- ಕ್ಷೇತ್ರದತ್ತ ಗಮನಕೊಡದೆ ರಾಜ್ಯ ಹಾಗೂ ರಾಷ್ಟ್ರಮಟ್ಟದ ಸಮಸ್ಯೆಗಳತ್ತ ಗಮನ ನೀಡಿದ್ದು.

- ಪಿಎಸ್ಪಿ ಪಕ್ಷವನ್ನ ರಾಷ್ಟ್ರಮಟ್ಟದಲ್ಲಿ ಬೆಳೆಯಲು ಪ್ರಯತ್ನಿಸಿದ್ದು.
- ಕ್ಷೇತ್ರಕ್ಕೆ ಭೇಟಿ ನೀಡದೇ ಅಂತರ ಕಾಯ್ದುಕೊಂಡದ್ದು.
- ಸ್ಥಳೀಯ ಕಾರ್ಯಕರ್ತರ ಕೈಗೆ ಸಿಗದೇ ಅವರು ಅತೃಪ್ತರಾದದ್ದು.
- ಕಾಂಗ್ರೆಸ್ ಅಭ್ಯರ್ಥಿಯಾದ ಮಂಚೇಗೌಡರು ಸ್ಥಳೀಯ ಮಟ್ಟದಲ್ಲಿ ಪ್ರಬಲರಾದದ್ದು.
- ಹೆಚ್.ಕೆ.ವಿ.ಎಂಬ ಬಲಿಷ್ಠ ನಾಯಕನನ್ನ ಸೋಲಿಸಿದೆ ಎಂಬ ಅತಿಯಾದ ಆತ್ಮವಿಶ್ವಾಸ.

## 1967ರ ಲೋಕಸಭಾ ಉಪಚುನಾವಣೆ

1967 ರಲ್ಲಿ ಮಂಡ್ಯ ಲೋಕಸಭಾ ಸದಸ್ಯರಾಗಿದ್ದ ಶಿವನಂಜಪ್ಪನವರ ಅಕಾಲಿಕ ಮರಣದಿಂದಾಗಿ ಮಂಡ್ಯ ಲೋಕಸಭಾ ಸದಸ್ಯತ್ವ ತೆರವುಗೊಂಡಿತು. ಈ ಉಪಚುನಾವಣೆಗೆ ಚೌಡಯ್ಯನವರ ಪ್ರತಿಸ್ಪರ್ಧಿಯಾಗಿ ಕೃಷ್ಣರವರನ್ನು ಅಭ್ಯರ್ಥಿಯಾಗಿ ಆಯ್ಕೆ ಮಾಡಲಾಯಿತು. 1966ರಲ್ಲಿ ತಮ್ಮ ತಾಯಿಯನ್ನ ಕಳೆದುಕೊಂಡ ನೋವು ಮತ್ತು ಎರಡನೇ ಚುನಾವಣೆಯ ಸೋಲಿನ ಕಹಿ ಅನುಭವದಿಂದ ಚಿಂತಾಕ್ರಾಂತರಾಗಿದ್ದ ಎಸ್.ಎಂ.ಕೆ ರವರನ್ನು ಸಾಹುಕಾರ ಚೆನ್ನಯ್ಯ ಕೆ.ಟಿ ಸುಬ್ರಹ್ಮಣ್ಯಂ ರವರು ಮತ್ತು ಸಿದ್ಧವೀರಪ್ಪನವರು ಮನವೊಲಿಸಿ ಚುನಾವಣೆಗೆ ನಿಲ್ಲುವಂತೆ ತಿಳಿಹೇಳಿದರು. ಅವರ ಆಶಿರ್ವಾದದಿಂದ ಕೃಷ್ಣರವರು ಲೋಕಸಭಣೆಗೆ ಪ್ರವೇಶಿಸಿ ರಾಷ್ಟ್ರಮಟ್ಟದ ರಾಜಕಾರಣಕ್ಕೆ ಪಾದಾರ್ಪಣೆ ಮಾಡಿದರು.

ಇವರು ಲೋಕಸಭಾ ಸದಸ್ಯರಾಗಿದ್ದಾಗ ರಾಷ್ಟ್ರಮಟ್ಟದ ಪ್ರಮುಖ ವಿಚಾರಗಳ ಬಗ್ಗೆ ಚರ್ಚೆ ಮಾಡಿ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ಈ ಅವಧಿಯಲ್ಲಿ ಎಸ್.ಎಂ.ಕೆ ಅವರು ವಾಜಪೇಯಿ, ಮಣೀರಾಬಾಗಡಿ. ಪಿಲೂ ಮೋದಿ ಹಾಗೂ ರಾಮ್ ಮನೋಹರ್ ಲೋಹಿಯಾ ರವರಂತಹ ರಾಷ್ಟ್ರಮಟ್ಟದ ನಾಯಕರ ಗಡಿಯಲ್ಲಿ ಬೆಳೆದರು.

# ಕಾಂಗ್ರೇಸ್ ಪಕ್ಷಕ್ಕೆ ಸೇರ್ಪಡೆ

1969ರಲ್ಲಿ ಕಾಂಗ್ರೇಸ್ ಪಕ್ಷದಲ್ಲಿ ಬಿರುಕು ಉಂಟಾಗಿ ಕಾಂಗ್ರೇಸ್ ಇಬ್ಭಾಗವಾಗಿ ಎರಡು ಹೋಳಾಯಿತು. ಈ ಅವಧಿಯಲ್ಲಿ ಪ್ರಧಾನಿಯಾಗಿದ್ದ ಶ್ರೀಮತಿ ದಿವಂಗತ ಇಂದಿರಾಗಾಂಧಿಯವರು ಪ್ರಗತಿಪರ ಸಮಾಜವಾದಿ ನಾಯಕರಾಗಿ ತಮ್ಮ ಪಕ್ಷಕ್ಕೆ ಸೇರುವಂತೆ ಆಹ್ವಾನ ನೀಡಿದರು. ಸಮಾಜವಾದ ಸಿದ್ದಾಂತದ ತತ್ವಕ್ಕೆ ಹತ್ತಿರವಿದ್ದ ಪಿ.ಎಸ್.ಪಿ ಪಾರ್ಟಿಯ ಬಹುತೇಕ ಸದಸ್ಯರು ಇಂದಿರಾ ಬಳಿ ಸೇರಿದರು. ಅದೇ ರೀತಿ ಕೃಷ್ಣರವರ ಕಾಂಗ್ರೇಸ್ ಕೈ ಹಿಡಿಯುವ ಮೂಲಕ ಇಂದಿರಾ ನೇತೃತ್ವದ ಕಾಂಗ್ರೇಸ್‌ಗೆ ಪ್ರವೇಶಿಸಿದರು. 1971ರಲ್ಲಿ ಕಾಂಗ್ರೇಸ್‌ನಿಂದ ಪ್ರಥಮ ಭಾರಿಗೆ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿ ಎರಡನೇ ಬಾರಿಗೆ ಚೌಡಯ್ಯರವರನ್ನ ಸೋಲಿಸಿ ಮಂಡ್ಯ ಲೋಕಸಭಾ ಕ್ಷೇತ್ರದ ಸಂಸದರಾದರು.

ರಾಷ್ಟ್ರ ರಾಜಕಾರಣದಲ್ಲಿ ಮಿಂಚುತ್ತಿದ್ದ ಕೃಷ್ಣರವರ ಮೇಲೆ ದೇವರಾಜ್ ಅರಸ್‌ರವರ ಕಣ್ಣುಬಿದ್ದು ಅಸಾಧರಣ ಚಾಣಾಕ್ಷರಾಗಿದ್ದ ಕೃಷ್ಣರವರನ್ನು ರಾಜ್ಯ ರಾಜಕಾರಣಕ್ಕೆ ಕರೆತಂದರೆ ತಮಗೂ ಹಾಗೂ ಸಮಾಜ ಮತ್ತು ಪಕ್ಷಕ್ಕೂ ಹಿತ ಎಂದು ತೀರ್ಮಾನಿಸಿ ಅವರನ್ನು ರಾಜ್ಯ ರಾಜಕಾರಕ್ಕೆ ಕರೆ ತಂದು ತಮ್ಮ ಮಂತ್ರಿ ಮಂಡಲದಲ್ಲಿ ಅವರಿಚ್ಚೆಯ ಸಚಿವ ಸ್ಥಾನ ನೀಡಿ ಅವರ ಸೇವೆಗೆ ಅವಕಾಶ ಕಲ್ಪಿಸಿದರು. ಅರಸುರವರ ಸಂಪುಟದಲ್ಲಿ ಕೈಗಾರಿಕಾ ಸಚಿವರಾದ ಎಸ್.ಎಂ.ಕೆ ರವರು ಕುದುರೆಮುಖ ಯೋಜನೆ, ವಿಕ್ರಾಂತ್ ಯೋಜನೆ, ಜಿಲ್ಲಾವಾರು ಕೈಗಾರಿಕ ಪ್ರಗತಿಯ ವಿಂಗಡಣೆ, ಕೈಗಾರಿಕಾ ವಸಹಾತುಗಳ ಸ್ಥಾಪನೆ, ವಿಶ್ವೇಶ್ವರಯ್ಯ ಕಬ್ಬಿಣ ಕಾರ್ಖಾನೆ, ಭದ್ರಾವತಿ ಸಿಮೆಂಟ್ ಕಾರ್ಖಾನೆ, ಹಾಗೂ ಕಾಗದ ಕಾರ್ಖಾನೆಗಳಿಗೆ ಪುನಶ್ಚೇತನ ನುಡಿ ಕೈಗಾರಿಕಾ ವಲಯದಲ್ಲಿ ಬಹುದೊಡ್ಡ ಸುಧಾರಣೆ ತಂದರು. 1989 ರಲ್ಲಿ ವಿಧಾನಸಭಾಧ್ಯಕ್ಷರಾಗಿ ಆಯ್ಕೆಯಾದರು. ಈ ಅವಧಿಯಲ್ಲಿ ಎಲ್ಲಾ ಪಕ್ಷಗಳಿಂದ ಸರ್ವಾನುಮತದಿಂದ ಆಯ್ಕೆಯಾದದ್ದು ವಿಶೇಷವಾಗಿತ್ತು.

1993ರ ಜನವರಿಯಲ್ಲಿ ಕೃಷ್ಣರವರು ಉಪಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಈ ಹುದ್ದೆಯಲ್ಲಿ ಎರಡು ವರ್ಷಗಳ ಕಾಲ ಕಾರ್ಯ ನಿರ್ವಹಿಸಿದರು.

## ಮುಖ್ಯಮಂತ್ರಿಯಾಗಿ ಎಸ್ ಎಂ ಕೃಷ್ಣರವರು

ಎಸ್ ನಿಜಲಿಂಗಪ್ಪ ಹಾಗೂ ದೇವರಾಜ್ ಅರಸುರವರ ಶಿಷ್ಯರಾಗಿ ಗುರುತಿಸಿಕೊಂಡಿದ್ದ ಎಸ್ ಎಂ ಕೃಷ್ಣರವರು ಅಕ್ಟೋಬರ್ 11 1999 ರಂದು ಕರ್ನಾಟಕ ರಾಜ್ಯದ 16ನೇ ಮುಖ್ಯಮಂತ್ರಿಯಾಗಿ ಅಧಿಕಾರಕ್ಕೆ ಬಂದರು ಈ ಅವಧಿಯಲ್ಲಿ ರಾಜ್ಯದ ಜಿಡಿಪಿ ರಾಷ್ಟ್ರದ ಸರಾಸರಿ ಜಿಡಿಪಿಗೆ ಹತ್ತಿರವಾಗುವಷ್ಟು ಬೆಳೆದಿದ್ದು ಕೈಗಾರಿಕಾ ಮಾಹಿತಿ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡಲಾಯಿತು. ಈ ಬೆಳವಣಿಗೆಯನ್ನ ಕಂಡ ತಜ್ಞರು ಈ ರೀತಿ ಹೇಳಿದರು. “ಕರ್ನಾಟಕ ಇಂದೇನು ಯೋಚಿಸುತ್ತಿದೆಯೋ ಭಾರತ ಅದನ್ನ ನಾಳೆ ಯೋಚಿಸುತ್ತದೆ” ಎಂದು ಕೃಷ್ಣರವರ ಆಡಳಿತ ವೈಖರಿಯನ್ನು ಪ್ರಶಂಸಿಸುತ್ತಿದ್ದರು.

ಎಸ್.ಎಂ.ಕೃಷ್ಣರವರ ಆಡಳಿತ ಅವಧಿಯಲ್ಲಿ ಕರ್ನಾಟಕದಲ್ಲಿ ಆದಂತಹ ಅಭಿವೃದ್ಧಿಯ ಮೈಲುಗಲ್ಲುಗಳ ಪ್ರಮುಖ ಅಂಶಗಳು.

ರೈತ ಸಂಪರ್ಕ ಕೇಂದ್ರ, ತೊಗರಿ ಮಂಡಳಿ ಕೃಷಿಗೆ ಆದ್ಯತೆ.

ಭೂಮಿ ಯೋಜನೆ, ಭೂ ದಾಖಲೆಗಳ ಗಣಕೀಕರಣ.

ಪ್ರಾಜೆಕ್ಟ್ ವರುಣ.

ಯೋಜನೆಗಳ ಪುನಶ್ಚೇತನ ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಡಾಕ್ಟರ್ ಡಿ ಎಂ ನಂಜುಂಡಪ್ಪ  ಸಮಿತಿಯ ನೇಮಕ ಮತ್ತು ಅನುಷ್ಠಾನ.

ಮಾಹಿತಿ ತಂತ್ರಜ್ಞಾನದ ಮೂಲಕ ಬೆಂಗಳೂರಿಗೆ ವಿಶ್ವಮನ್ನಣೆ ದೇಶದಲ್ಲೇ ಮೊದಲ ಬಾರಿಗೆ ಮಾಹಿತಿ ತಂತ್ರಜ್ಞಾನದ ನೀತಿ ರೂಪಿಸಿ ಐಟಿ ಕಂಪನಿಗಳ ಸ್ಥಾಪನೆಗೆ ಶ್ರಮಿಸಿದರು. ಈ ಮೂಲಕ ದೇಶದಲ್ಲಿ ಅತೀ ಹೆಚ್ಚು ಸಾಫ್ಟ್‌ವೇರ್ ರಫ್ತು ಮಾಡುವ ರಾಜ್ಯವೆಂದು

ಕರ್ನಾಟಕ ಹಿರಿಮೆಗೆ ಪಾತ್ರವಾಯಿತು. ಇಂದಿಗೂ ಕೂಡ ಐಟಿ ಕಂಪನಿಗಳ ಅಸ್ತಿತ್ವಕ್ಕೆ ಕೃಷ್ಣರವರ ಅಸ್ತಿಭಾರ ಮಹತ್ವದ್ದು.

ಜೈವಿಕ ತಂತ್ರಜ್ಞಾನಕ್ಕೂ ಹೆಚ್ಚು ಆಧ್ಯತೆ ನೀಡಿ ಬೆಂಗಳೂರಿನಲ್ಲಿ 150 ಎಕೆರೆಯಷ್ಟು ವಿಸ್ತಾರವಾದ ಜಾಗದಲ್ಲಿ ಬಯೋಟೆಕ್ನಾಲಜಿ ಪಾರ್ಕ್ ಸ್ಥಾಪನೆಮಾಡಿ ಐಟಿ ಬಿಟಿ ಸಿಟಿಯಾಗಿ ಬೆಂಗಳೂರು ಜಾಗತಿಕ ಮಟ್ಟದಲ್ಲಿ ಬೆಳೆಯಲು ಸಹಕಾರಿಯಾಯಿತು. ಇದು ಕೃಷ್ಣರವರ ದೂರದೃಷ್ಟಿ ಚಿಂತನೆಯ ಫಲವಾಗಿದೆ ಎಂದು ಹೇಳಬಹುದು.

## ಗಣಿ ಮತ್ತು ಭೂ ವಿಜ್ಞಾನ ಪ್ರಥಮ ಖನಿಜ ನೀತಿಯ ಪ್ರಕಟಣೆಯನ್ನು ಮಾಡಿದ್ದು.

ಸರ್ಕಾರದ ಇಲಾಖೆಗಳ ಕಂಪ್ಯೂಟರೀಕರಣ ಮಾಡಿದ್ದು ಇವರ ಅವಧಿಯ ಮತ್ತೊಂದು ಮೈಲುಗಲ್ಲಾಗಿದೆ. ಹೀಗೆ ಹಲವಾರು ಜನಪ್ರಿಯ ಜನಪರ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಜಾರಿಗೆ ತಂದು ಕರ್ನಾಟಕವನ್ನು ಅಭಿವೃದ್ಧಿಯ ಪಥದಲ್ಲಿ ಕೊಂಡೊಯ್ದು ಸುಭದ್ರ ಕರ್ನಾಟಕಕ್ಕೆ ಅಡಿಗಲ್ಲು ಹಾಕಿದರು.

## ಡಾ||.ರಾಜ್‌ಕುಮಾರ್ ಅಪಹರಣ ಪ್ರಕರಣ

ಕರ್ನಾಟಕ ಚಲನಚಿತ್ರ ರಂಗದ ಅನಬಿಷಕ್ತ ದೊರೆ ಡಾ|| ರಾಜ್‌ಕುಮಾರ್ ಅವರನ್ನು ಕಾಡುಗಳ್ಳ ವೀರಪ್ಪನ್ 2000ನೇ ಇಸವಿಯಲ್ಲಿ ಅಪಹರಿಸಿದಾಗ ಅವರನ್ನ ಬಿಡಿಸಲು ಶಾಂತಿಮಾರ್ಗ ಅನುಸರಿಸಿ ಸತತ ನೂರ ಎಂಟು ದಿನಗಳ ಕಾಲ ಸೂಕ್ಷ್ಮ ವಾತವರಣವಿದ್ದರೂ ಎಲ್ಲಿಯೂ ಸಣ್ಣಘಟನೆಗೂ ಅವಕಾಶ ಕೊಡದೆ ಡಾ||.ರಾಜ್ ಅವರನ್ನು ಬಿಡಿಸಿಕೊಂಡು ಬಂದಿದ್ದು ಎಸ್.ಎಂ.ಕೆ ರವರ ಆಡಳಿತದ ಚಾಣಕ್ಷತನಕ್ಕೆ ಕೈಗನ್ನಡಿಯಾಗಿದೆ.

ಒಟ್ಟಾರೆಯಾಗಿ ಎಸ್.ಎಂ.ಕೃಷ್ಣರವರ ಆಡಳಿತ ಇಡೀ ದೇಶಕ್ಕೆ ಮಾದರಿಯಾಗಿದ್ದು ಅವರ ರಾಜಕೀಯ ಜೀವನದಲ್ಲಿ ಹಲವಾರು ಹುದ್ದೆಗಳನ್ನು ಸಮರ್ಥವಾಗಿ ನಿಭಾಯಿಸಿ ಹಾಗೂ ಸ್ಥಾನಮಾನಗಳಿಗೂ ತಾವೊಬ್ಬ ದಕ್ಷ ನಾಯಕ ಎಂಬುದನ್ನು ತಮ್ಮ ಕಾರ್ಯಗಳಿಂದ ಮಾಡಿ ತೋರಿಸಿದರು. ಕರ್ನಾಟಕವನ್ನು ಹಾಗೂ ಬೆಂಗಳೂರನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ವಿಜೃಂಭಿಸಲು ಸುಬದ್ರ ಅಡಿಪಾಯವನ್ನು ಹಾಕಿಕೊಟ್ಟರು. ಮಹಾಭಾರತದಲ್ಲಿ ಶ್ರೀ ಕೃಷ್ಣ ಹೇಗೊ ಹಾಗೆ ಕರ್ನಾಟಕದ ರಾಜ್ಯ ರಾಜಕಾರಣದಲ್ಲಿ ಎಸ್.ಎಂ.ಕೃಷ್ಣರವರು ದ್ರುವತಾರೆ ಇದ್ದಂತೆ. ಎಸ್.ಎಂ.ಕೆ ರವರ ಆಡಳಿತ ರಾಜಕೀಯ ಸೇವೆ ಹಾಗೂ ಕೊಡುಗೆಗಳನ್ನು ಗಮನಿಸಿ ಭಾರತ ಸರ್ಕಾರವು ಅವರಿಗೆ 2023ರಲ್ಲಿ ಭಾರತದ ಎರಡನೇ ಅತ್ಯುನ್ನತ ನಾಗರೀಕ ಪ್ರಶಸ್ತಿಯಾದ ಪದ್ಮವಿಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

**ಸಂತೋಷ ಎನ್.ಪಿ** ದ್ವಿತೀಯ .ಬಿ.ಇಡಿ.

**ಮಾರ್ಗದರ್ಶಕರು : ಮಹಾಲಿಂಗು ಕೆ** ಪ್ರಾಧ್ಯಾಪಕರು

ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯ

-THE END-



# ಸಾಹಿತ್ಯ ಅವಲೋಕನ

## ಎಚ್.ಎಲ್. ನಾಗೇಗೌಡರ ಹಿನ್ನಲೆ ಮತ್ತು ಸಾಧನೆ

ಎಚ್.ಎಲ್. ನಾಗೇಗೌಡ (ಫೆಬ್ರವರಿ 11 1915– ಸೆಪ್ಟೆಂರ್ 22 2005) ಕರ್ನಾಟಕದ ಮಂಡ್ಯ ಜಿಲ್ಲೆಯ ಹೆರಗನಹಳ್ಳಿಯಲ್ಲಿ ಜನಿಸಿದರು. ಇವರು 1960 ರಲ್ಲಿ ಭಾರತೀಯ ಆಡಳಿತಾತ್ಮಕ ಸೇವಾ (ಐ.ಎ.ಎಸ್) ಅಧಿಕಾರಿಯಾದರು, ಇವರು ಕನ್ನಡದಲ್ಲಿ ಕಾದಂಬರಿಗಳು, ಕವನ, ಸಣ್ಣ ಕಥೆಗಳು, ಪ್ರಬಂಧಗಳು ಮತ್ತು ಪ್ರವಾಸಕಥನಗಳುನ್ನು ಬರೆದಿದ್ದಾರೆ. 1979ರಲ್ಲಿ ನಾಗೇಗೌಡರು ಕರ್ನಾಟಕದ ಸಾಂಪ್ರದಾಯಿಕ ಜಾನಪದ ಕಲೆಗಳ ಅಧ್ಯಯನ ಮತ್ತು ಪ್ರಸರಣ ಮೀಸಲಾದ ಕರ್ನಾಟಕ ಜಾನಪದ ಪರಿಷತ್ತನ್ನು ಸ್ಥಾಪಿಸಿದರು. ಇವರಿಗೆ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ನಾಡೋಜ ಪ್ರಶಸ್ತಿ ದೊರಕಿವೆ

ನಾಗೇಗೌಡರದ್ದು ಹುಟ್ಟು ಗ್ರಾಮೀಣ ಪ್ರತಿಭೆ. ತಾನು ಹುಟ್ಟಿ ಬೆಳೆದ ನೆಲದ ಸಿರಿಯನ್ನು ಮೈಗೂಡಿಸಿಕೊಂಡು ವಿಶಿಷ್ಟ ವ್ಯಕ್ತಿತ್ವ ದಕ್ಷ ಅಧಿಕಾರಿಯಾಗಿ, ಶ್ರೇಷ್ಠ ಸಾಹಿತಿಯಾಗಿ, ಅಷ್ಟಕ್ಕೆ ಸೀಮಿತಗೊಳ್ಳದೆ, ಜಾನಪದ ಸಿರಿಗೆ ಮನಸೋತು ನಾಡಿನಲ್ಲೆಲ್ಲ 'ಸಿರಿಗಂಧ' ವನ್ನು ಹರಡಲು ಪಣತೊಟ್ಟು ಶ್ರಮಿಸಿದ ಅಪರೂಪದ ವ್ಯಕ್ತಿ, ಕೂಲಿಮಠದಲ್ಲಿ ಓದಿ ಅರಳಿದ ಈ ಪ್ರತಿಭೆ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯನ್ನು ಶ್ರೀಮಂತಗೊಳಿಸುವಷ್ಟು ಶಕ್ತಿಯುತವಾಗಿ ಬೆಳೆದದ್ದು ಹಾಗೂ ಇಡೀ ನಾಡಿನ ಖ್ಯಾತಿಯನ್ನು ಹೊರ ಜಗತ್ತಿಗೂ ಅನಾವರಣಗೊಳಿಸುವಷ್ಟು ಉಜ್ವಲವಾಗಿ ಬೆಳಗಿದ್ದು ಅಚ್ಚರಿಯಾದ ಸಂಗತಿ ಎನಿಸಿದರೂ ನೂರಕ್ಕೆ ನೂರರಷ್ಟು ವಾಸ್ತವ. ಇದೆಲ್ಲದರ ಹಿಂದೆ ಇದ್ದದ್ದು ಅವರ ಶ್ರಮದ ದುಡಿಮೆ, ಜೀವನೋತ್ಸಾಹ ದಾಹ, ಏನನ್ನಾದರೂ ಸಾಧಿಸಬೇಕೆಂಬ ಛಲ, ನಾಡು, ನುಡಿ ಸಂಸ್ಕೃತಿಯ ಬಗ್ಗೆ ಅವರಿಗಿದ್ದ ಅಪಾರವಾದ ಕಾಳಜಿ ಮತ್ತು ಅದನ್ನು ಅರಿಯಬೇಕೆಂಬ ಕುತುಹಲ ಹಾಗೂ ಅದನ್ನು ಉಳಿಸಿ ಮುಂದಿನ ಪೀಳಿಗೆಗೂ ಕಾಯ್ದಿರಿಸಬೇಕೆಂಬ ಮನೋಭಾವ ಅವರಿಂದ ಈ ಎಲ್ಲವನ್ನೂ ಮಾಡಿಸಿತೆನ್ನಬಹುದು.

ನಾಗೇಗೌಡರು ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿದ್ದವರಲ್ಲ ಸರ್ಕಾರಿ ಅಧಿಕಾರಿಯಾಗಿದ್ದವರು. ತಮ್ಮ ಪ್ರಾಮಾಣಿಕ ಹಾಗೂ ಶ್ರಮದ ದುಡಿಮೆಯಿಂದ ಉನ್ನತೋನ್ನತ ಪದವಿಗಳನ್ನು ಅಲಂಕರಿಸಿ ದೇಶಕ್ಕಾಗಿ ಅರ್ಪಿಸಿಕೊಂಡವರು.

# ಗೌರವ ಪ್ರಶಸ್ತಿಗಳು

- ಜಾನಪದ ಕ್ಷೇತ್ರದಲ್ಲಿ ಇವರಿಗಿದ್ದ ಆಳವಾದ ಅನುಭವಕ್ಕೆ ತಕ್ಕ ಗೌರವ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಪ್ರಾರಂಭವಾದಾಗ ಪ್ರಥಮ ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದು (1980–83).
- 1995ರಲ್ಲಿ ಮುದ್ದೋಳಲ್ಲಿ ನಡೆದ 64ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ.
- 'ನನ್ನೂರು' ದೊಡ್ಡಮನೆ (1965), 'ವೆಯರ್ ಎಲ್ವಿನರ', 'ಗಿರಿಜನ ಪ್ರಪಂಚ' (1966), 'ಸೋಬಾನೆ ಚಿಕ್ಕಮ್ಮನ ಪದಗಳು' (1972), 'ಪದವೆ ನಮ್ಮ ಎದೆಯಲ್ಲಿ'(1976), ;ನಾ ಕಂಡ ಪ್ರಪಂಚ (ಪ್ರವಾಸ–1986), 'ಭೂಮಿಗೆ ಬಂದ ಗಂಧರ್ವ' (ಕಾದಂಬರಿ), 'ಬೆಟ್ಟದಿಂದ ಬಟ್ಟಲಿಗೆ' (ಕಾಫಿಯ ಕಥೆ) ಈ ಏಳು ಕೃತಿಗಳಿಗೂ ಸಾಹಿತ್ಯ ಆಕಾಡೆಮಿ ಬಹುಮಾನ ದೂರೆಯುವುದರ ಜೋತೆಗೆ ಸಾಹಿತ್ಯ ಆಕಾಡೆಮಿಯ ಪ್ರಶಸ್ತಿ (1975).
- ನಾಗವಲ್ಲಿ ಆತ್ಮಚರಿತ್ರೆ.
- ಕರ್ನಾಟಕದ ರಾಜ್ಯೋತ್ಸವ ಪ್ರಶಸ್ತಿ (1988).
- ಕರ್ನಾಟಕದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ (1990).
- ಕರ್ನಾಟಕ ನಾಟಕ ಅಕಾಡಮಿ ಫೆಲೋಷಿಪ್.
- ನಾಡೋಜ ಪ್ರಶಸ್ತಿ.
- ಪಂಪ ಪ್ರಶಸ್ತಿ.
- ಜಾನಪದದ ಬಗ್ಗೆ ದೂರದರ್ಶನದಲ್ಲಿ ಪ್ರಸಾರವಾದ ' ಸಿರಿಗಂಧ ಧಾರಾವಾಹಿಯ ರೂವಾರಿ.

# ಕಾದಂಬರಿಗಳು

## ‘ಸೊನ್ನೆಯಿಂದ ಸೊನ್ನೆಗೆ’

**ಇದೊಂದು ಐತಿಹ್ಯ ಸ್ವರೂಪದ ಕಾದಂಬರಿ ಹಾಲು ಕುಡಿದ ಮಕ್ಕಳೇ ಬದುಕುವುದಿಲ್ಲ; ಇನ್ನು ವಿಷ ಕುಡಿದವ್ರು ಬದುಕಿಯಾವೆ’ ಎಂಬುದು ಈ ಕಾದಂಬರಿಯ ತಿರುಳು.**

ಸಾಮಾನ್ಯವಾಗಿ ಹಳಿಗಳಲ್ಲಿ ಮಳೆಗಾಗಿ ಪೂಜೆ ಪುರಸ್ಕಾರವನ್ನು ಮಾಡುತ್ತಾರೆ. ಹಾಗೆ ತುಂಬಾ ದಿನಗಳ ನಂತರ ಮಳೆ ಇಲ್ಲದೆ ರೈತರು ನರಳುತಿರುತ್ತಾರೆ. ಬೇಸಿಗೆ ಕಾಲದಲ್ಲಿ ಅಂದರೆ ಏಪ್ರೀಲ್ ತಿಂಗಳಲ್ಲಿ ಭರಣಿ ಮಳೆಯಾಗುತ್ತದೆ. ಭರಣಿ ಮಳೆಯಾದ ಮೇಲೆ ರೈತರು ತಮ್ಮ ತಮ್ಮ ಕೆಲಸವನ್ನು ಅಂದರೆ ವ್ಯವಸಾಯ ಮಾಡಲು ಪ್ರಾರಂಭವಾಗುತ್ತದೆ. ಊರಿನಲ್ಲಿ ಇದ್ದಂತಹ ಕೆರೆಕಟ್ಟೆಗಳನ್ನು ತುಂಬುತ್ತವೆ. ಹಾಗೆ ತುಂಬ ದಿನದ ನಂತರ ಮಳೆ ಬಂದರೆ ಭೂಮಿಯ ಮೇಲಿನ ಮಣ್ಣು ‘ಗಮಗಮ’ ಎಂಬ ವಾಸನೆ ಬರುತ್ತದೆ. ಸಾಮಾನ್ಯವಾಗಿ ಜನರು ಗ್ರಾಮದೇವತೆಯ ಹಬ್ಬವನ್ನು ಸರಿಯಾಗಿ ಆಚರಣೆ ಮಾಡದಿದ್ದರೆ ಮಳೆಯಾಗುವುದಿಲ್ಲ ಎಂದು ನಂಬಿದ್ದಾರೆ. ಮನೆಗಳಲ್ಲಿ ಹೆಂಗಸರು ಹೆಚ್ಚಾಗಿ ಪೂಜೆ ಪುರಸ್ಕಾರವನ್ನು ಮಾಡುತ್ತಿರುತ್ತಾರೆ.ಕೆಲವು ಗಂಡಸರು ದೇವರಿಗೆ ಪೂಜೆ ಮಾಡುದ್ರೇನು ಏನು ಪ್ರಯೋಜನವಿಲ್ಲ. ನಾವು ಮಾಡುವ ಶ್ರಮವೇ ದೇವರು ದೇವರಿಗೆ ಪೂಜೆ ಮಾಡುವ ವಿಷಯದಲ್ಲಿ ಎಲ್ಲರೂ ನಿಷ್ಠೆಯಿಂದ ಇರುತ್ತಾರೆ. ಆದರು ಅವರ ಶ್ರಮಕ್ಕೆ ಪ್ರತಿಫಲ ಸಿಗದಿದ್ದಾಗಲೋಕರೂಡಿಯಾಗಿ ಮಾತನಾಡುತಾರೆ ಏಕೆಂದರೆ ಮುಗ್ದ ಜನರು. ಒಕ್ಕಲಿಗರ ಮನೆಗಳಲ್ಲಿ ಹೆಚ್ಚಾಗಿ ವ್ಯವಸಾಯವನ್ನು ಅವಲಂಭಿಸುತ್ತಾರೆ.ರಾಗಿ ಕಾಳುಗಳನ್ನು ಹೆಚ್ಚಾಗಿ ಬಳೆಯುತ್ತಾರೆ ಹಿಂದೆ ಮುದ್ದೆ ಸಾಂಬರು ಪ್ರಿಯವಾದದ್ದು ಈಗೀನ ಕಾಲದಲ್ಲಿ ಮುದ್ದೆ–ಸಾಂಬಾರು ಕಣ್ಮರೆಯಾಗುತ್ತಿದೆ ಆದರೆ ಆರೋಗ್ಯಕ್ಕೆ ತುಂಬಾ ಒಳ್ಳೆಯದು.

ಹಳ್ಳಿಗಳಲ್ಲಿ ಪ್ರೀತಿಯಿಂದ ಮಾತನಾಡಿಸುತ್ತಾರೆ. ಆದರೆ ಸಿಟಿಗಳಲ್ಲಿ ಈ ಒಂದು ಸೌಜನ್ಯತೆ ಹೆಚ್ಚಾಗಿ ಕಂಡುಬರುವುದಿಲ್ಲ ಹಳ್ಳಿಗಳಲ್ಲಿ ಪೂಜೆ ಮಾಡುವಾಗ ಯಾವುದೇ ರೀತಿ ಶಬ್ಧವನ್ನು ಕೇಳಿಸಿಕೊಳ್ಳುವುದಿಲ್ಲ. ನಮ್ಮ ಏಕಾಗ್ರತೆ ದೇವರ ಮೇಲಿರುತ್ತದೆ. ಈಗಿನ ಕಾಲದ ರೀತಿ ಪೂಜೆಗಾಗಿ ದುಂದುವೆಚ್ಚ ಮಾಡುತ್ತಿರಲಿಲ್ಲ ಹೆಚ್ಚು ಸಮಯವನ್ನು ಉಪಯೋಗಿಸುತ್ತಿರಲಿಲ್ಲ. ನಿಷ್ಠಯಿಂದ ಸ್ವಲ್ಪ ಸಮಯ ಮಾತ್ರ ಮಾಡುತ್ತಿದ್ದರು.

ಈಗಲು ಕೂಡ ಹಳ್ಳಿಗಳಲ್ಲಿ ದಾವಳಿಗಳು, ಛಾಪೆಗಳನಿಟ್ಟು ನೆಂಟರಿಗಾಗಿ ಇಟ್ಟಿರುತ್ತಾರೆ. ಹಳ್ಳಿಗಳಲ್ಲಿ ಅತಿಥಿಗಳನ್ನ ಪ್ರೀತಿಯಿಂದ ಸ್ವಾಗತಿಸುತ್ತಾರೆ ಈಗ ಇದು ಸ್ವಲ್ಪ ಸ್ವಲ್ಪ ಕಣ್ಮರೆಯಾಗಿದೆ. ಮನೆಗೆ ಬಂದ ಅತಿಥಿಗಳಿಗೆ ಹೊಟ್ಟೆ ತುಂಬಾ ಊಟಹಾಕುವುದು ಹಳ್ಳಿಗಳಲ್ಲಿ ಹೆಚ್ಚಾಗಿದೆ. ಹಳ್ಳಿಗಳಲ್ಲಿ ಅದರಲ್ಲೂ ಹಿಂದಿನ ಕಾಲದಲ್ಲಿ ಒಟ್ಟಿಗೆ ಊಟವನ್ನು ಮಾಡುತ್ತಿದ್ದರು. ಈಗ ಆ ಪದ್ಧತಿ ಕಡಿಮೆಯಾಗಿದೆ. ಮೊದಲು ಮಕ್ಕಳಿಗೆ ಸಾಕು ಸಾಕು ಎನ್ನುವವರೆಗೆ ಊಟ ಮಾಡಿಸಿ ನಂತರ ಊಟ ಮಾಡುವರು. ಹಳ್ಳಿಗಳಲ್ಲಿ ಊಟವಾದ ಮೇಲೆ ಜಗುಲಿ ಮೇಲೆ ಕುಳಿತು ನಾಲ್ಕಾರು ಜನರು ಸೇರುತ್ತಿದ್ದರು. ಹರಟೆ ಹೊಡೆಯುತ್ತಿದ್ದರು. ದೇಶದ ಇತಿಹಾಸವನ್ನೇ ಜಗುಲಿಯ ಮೇಲೆ ಹೇಳುತ್ತಿದ್ದರು. ಒಬ್ಬರ ಬಾಯಿಯಿಂದ ಒಬ್ಬರ ಬಾಯಿಗೆ ಹರಡುತ್ತಿತ್ತು. ಗ್ರಾಮೀಣ ಸೊಗಡಿನಿಂದಾಗಿ ಈ ಕಾದಂಬರಿ ವಿಶೇಷವೆನಿಸುತ್ತದೆ.

ಬಿ.ಫಾಲಕ್ಷಯ್ಯರವರು ಎಚ್.ಎಲ್.ನಾಗೇಗೌಡರು ಬರೆದಿರುವ ಕಾದಂಬರಿಯ ಬಗ್ಗೆ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದ್ದಾರೆ. ಪ್ರತಿ ವರ್ಷ ನೂರಾರು ಕಾದಂಬರಿಗಳು ಪ್ರಕಟವಾಗುತ್ತದೆ. ಬಹಳಷ್ಟು ಕಾದಂಬರಿಗಳು ಪ್ರೀತಿ ಪ್ರೇಮದ ಕಾದಂಬರಿಗಳೇ ಹೆಚ್ಚು. ಆದರೆ ಎಚ್.ಎಲ್.ನಾಗೇಗೌಡರು ಪ್ರಾದೇಶಿಕತೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಸೊನ್ನೆಯಿಂದ ಸೊನ್ನೆಗೆ ಕಾದಂಬರಿಯಲ್ಲಿ ಕಂಡ ಬಾಳಿಗಿಂತ ಬಲ್ಲವರೊಬ್ಬರಿಂದ ಕೇಳಿ ಅನುಭವಿಸಿದ ಬಾಳಿನ ಚಿತ್ರವನ್ನು ಈ ಕಾದಂಬರಿಯಲ್ಲಿ ಕಾಣಬಹುದು ಎಂದು ತಮ್ಮ ಅನಿಸಿಕೆಯಲ್ಲಿ ವ್ಯಕ್ತಪಡಿಸದ್ದಾರೆ ಹಾಗೂ ಬಡತನವಾಗಲಿ ಶ್ರೀಮಂತಿಕೆಯಲೀ ಶಾಶ್ವತವಲ್ಲ. ಈ ತತ್ವದ ಬುನಾದಿಯ ಮೇಲೆ ಈ ಕಾದಂಬರಿ ಬೆಳೆದಿದೆ. ನಾವು ಅನ್ಯಮಾರ್ಗದಿಂದ ಹಣವನ್ನು ಸಂಪಾದನೆ ಮಾಡಬಾರದು ಅಂದರೆ ಕಳ್ಳತನ, ಭ್ರಷ್ಟಚಾರ, ದರೋಡೆ ಮುಂತಾದವುಗಳಿಂದ ಹಣ ಸಂಪಾದನೆ ಮಾಡಬಾರದು. ನ್ಯಾಯ ಮಾರ್ಗದಿಂದ ಸಂಪಾದನೆ ಮಾಡಬೇಕು ಎಂದು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದ್ದಾರೆ.

**ಅರ್ಚನ ಎಲ್.ಎನ್** ದ್ವಿತೀಯ .ಬಿ.ಇಡಿ.

**ಮಾರ್ಗದರ್ಶಕರು : ಮಹದೇವಸ್ವಾಮಿ ಎಸ್** ಪ್ರಾಧ್ಯಾಪಕರು

ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯ

# ನನ್ನೂರು

- ನನ್ನೂರು 90ರ ದಶಕದ ಅಪ್ಪಟ ಗ್ರಾಮೀಣ ಸೊಗಡಿನ ಕಾದಂಬರಿ. ನಾಗೇಗೌಡರು ತನ್ನ ಬಾಲ್ಯದಿಂದ ತಾನು ಕಂಡಂತಹ ಸ್ವ–ಗ್ರಾಮದ ಸ್ವ–ಅನುಭವಗಳನ್ನು ಕಟ್ಟಿಕೊಟ್ಟಿದ್ದಾರೆ.
- ಕದಬಳ್ಳಿ ಗ್ರಾಮದ ಹೆಸರಿನಿಂದ ಹಿಡಿದು ಅಲ್ಲಿನ ಹಬ್ಬ ಹರಿದಿನ, ಜನಜೀವನ, ದೈನಂದಿನ ಚಟುವಟಿಕೆಗಳು, ಸಂಸ್ಕೃತಿ, ಆಚರಣೆ, ರೂಢಿ ಸಂಪ್ರದಾಯಗಳು, ಆ ಗ್ರಾಮದ ರೀತಿ ರಿವಾಜುಗಳ ಒಟ್ಟು ಮೊತ್ತವೇ ನನ್ನೂರು. ಈ ಕಾದಂಬರಿಯ ಮೂಖ್ಯ ಭೂಮಿಕೆಯೇ ಗ್ರಾಮದ ಹಬ್ಬಗಳು ಮತ್ತು ಹೊರ ಪ್ರಪಂಚದ ಯಾವುದೇ ಪರಿವೆಯೇ ಇಲ್ಲದೆ ಇರುವ ಹಳ್ಳಿಯ ಮುಗ್ಧ ಮನಸ್ಸುಗಳು,  ಕಾರಬ್ಬ, ಸಂಕ್ರಾಂತಿ, ದೀಪಾವಳಿ, ಗ್ರಾಮದೇವರ ಹಬ್ಬಗಳ ನೈಜ ಚಿತ್ರಣವಂತೂ ಸೊಗಸಾಗಿದೆ. ಇತ್ತೀಚಿಗೆ ಜಾನುವಾರುಗಳನ್ನು ಸಾಕುವವರೇ ಕಡಿಮೆ, ಇನ್ನೂ ಕಾರಬ್ಬದಂತಹ ಆಚರಣೆಗಳು ಮರೆಯಾಗುತ್ತಿರವುದು ನೀರಾಸದಾಯಕ. ಇನ್ನೂ ಸಂಕ್ರಾಂತಿ ದೀಪಾವಳಿಗಳಂತೂ ಕಾದಂಬರಿಯಲ್ಲಿ ಚಿತ್ರಿಸಿರುವುದಕ್ಕೂ ನಮ್ಮ ಇವತ್ತೀನ ಆಚರಣೆಗೂ ಶತಕೋಟಿ ಮೈಲಿಗಳ ಅಂತರವಿದೆ. ಆಧುನಿಕತೆ ಮತ್ತು ಇತರೆ ವಿದೇಶ ಸಂಸ್ಕೃತಿಗೆ ಮಾರುಹೊಗಿ ಅವುಗಳ ನೈಜ ಆಚರಣೆಯ ಚಿತ್ರಣವನ್ನೇ ಬದಲಿಸಿದ್ದೇವೆ.
- ಹಳ್ಳಿಯ ಜನ ದನ, ಕರು, ಕೋಳಿ, ಕುರಿ, ಬೇಸಾಯದ ಜೊತೆಗೆ ಮದುವೆ ಶಾಸ್ತ್ರದ ಲಗ್ನಪತ್ರಿಕೆಗಳ ಸೋಬಾನೆ–ಗೀತೆಗಳ, ತುಂಬು–ಕುಟುಂಬದ ಒಳ್ಳೆಯ ಬಾಡಿನೆಸರ ಸವಿಯ ಸ್ವಂತಿಕೆಯ ಅನಾವರಣವೇ ನನ್ನೂರು.
- ಕಾದಂಬರಿಯುದ್ದಕ್ಕೂ  ಗಾದೆ, ನಾಣ್ಣುಡಿಗಳು,  ಹೇಳಿಕೆಗಳು–ಪದ್ಯಗಳು ಬಳಸಿದ್ದು ಕಾದಂಬರಿಗೆ ಮೆರುಗು ತಂದಿದೆ. ಇಲ್ಲಿನ ಪಾತ್ರಗಳಾದ ಘನತೆಯ ಗೌಡರು, ಶಾನುಬೋಗ ಸಿಂಗಪ್ಪಯ್ಯ, ಆಯಿತೇ ಆಚಾರ್ರು, ಕೆಂಗೇಗೌಡ, ನೆನೆಯಬಾರದ ರಂಗಣ್ಣ, ದಸರೆಯ ದಾಸಪ್ಪ, ಸನ್ಯಾಸಿ ಷೇಠ್, ಚಾರ್ಲಿ ಚಾಪ್ಲಿನ್, ಹಾಗೂ ಇತರೆ ಪಾತ್ರಗಳ ಸುತ್ತಲು ನಡೆಯುವ ಸನ್ನಿವೇಶಗಳು ಕಣ್ಣಿಗೆ ಕಟ್ಟಿದಂತಿವೆ.
- ಪ್ರತಿ ಪಾತ್ರದ ಹೆಸರಿನ ಜೊತೆ ಅಂಟಿಕೊಡಿರುವ ಅಡ್ಡ ಹೆಸರು. ಇಂದಿನ ಗ್ರಾಮಗಳಿಗೂ ಅನ್ವಯ, ಹಾಗೆಯೇ ಹೆಸರುಗಳು ಪಾತ್ರಗಳ ಕುಲಕಸುಬು ಹಾಗೂ ಜಾತಿಯನ್ನು ಸೂಚಿಸುತ್ತದೆ.
- ಕಾದಂಬರಿಕಾರರು  ಜಾತಿಯ ಚಿತ್ರಣದ ಗೋಜಿಗೆ ಹೋಗಿಲ್ಲವಾದರೂ ಅಲಲ್ಲಿ ಕೆಲವು ಸಾಲುಗಳು ಆ ಚರ್ಚೆಗೆ ಆಸ್ಪದ ಮಾಡಿಕೊಡುತ್ತವೆ. ಉದಾ: ನೆನೆಯಬಾರದ

ರಂಗಣ್ಣ, ಹೊಲೆಯರ ಹುಲ್ಲು ಗುಡಿಸಲುಗಳ ಪ್ರಸ್ತಾಪವು ಕದಬಳ್ಳಿಯ ಸಾಮಾಜಿಕ ಚಿತ್ರಣವನ್ನು ಹಾಗೆ ತೇಲಿ ಬಿಡುವ ಪ್ರಯತ್ನವೆಂಬಂತೆ ಭಾಸವಾಗುತ್ತದೆ.

❖ ಇದರ ನಡುವೆ ಕೊಬ್ಬರಿ ಮಾವಿನ ಜೊತೆ ಪರಂಗಿಯರ ಉಲ್ಲೇಖವು ನುಸುಳಿಹೋಗಿದೆ, ಇಲ್ಲಿನ ಭಾಷೆ ಅಷ್ಟೇನು ಕ್ಲಿಷ್ಟವಾಗಿಲ್ಲವಾದರು ಕೆಲ ಪದಗಳು ಈ ತಲೆಮಾರಿಗೆ ಬಹುತೇಕ ಅಪರಿಚಿತ.

❖ ಕಾದಂಬರಿಕಾರರೇ ಹೇಳುವಂತೆ ಹಳ್ಳಿಯ ಬಾಳು, "ಬಾಳೆಹಣ್ಣು ತಿನ್ನುವಷ್ಟು ಸುಲಭವಲ್ಲ, ಅದು ಹಲಸಿನ ಹಣ್ಣು ತಿನ್ನುವಷ್ಟು ಕಷ್ಟ" ಎಂಬಂತೆ ಹಳ್ಳಿಗರ ಜೀವನದ ದಿಟ, ಸತ್ಯ, ಬದುಕು, ಬವಣೆಗಳು, ಬಡತನ ಬೇಗೆಯ ನಡುವೆ ಕೌಟುಂಬಿಕ ಕಲಹಗಳು ಗೊಡ್ಡು ಸಂಪ್ರದಾಯಗಳು ಅವರ ಜೀವನದ ತೊಳಲಾಟಗಳು ಅಷ್ಟೇ ಸೋಜಿಗವು ಹೌದು. ಜಾನಪದಕ್ಕಾಗಿಯೇ ಮೀಸಲಾಗಿರುವ ಈ 'ಕಥೆ' ಮಹತ್ವ ಪೂರ್ಣವಾಗಿ ಸಾಗಿ 'ನನ್ನೂರು ರಚನೆಗೊಂಡಿದೆ.
ವಿಶೇಷಮಾಹಿತಿ: ವಿಶ್ವಮಾನವ ಕವಿ ಕುವೆಂಪು ಅವರು ಎಚ್.ಎಲ್.ನಾಗೇಗೌಡರ ಸಾಧನೆಗಳನ್ನು ಪ್ರಶಂಸಿಸಿ 'ಮಲೆನಾಡ ವಾಲ್ಮೀಕಿ'ಎಂದು ಪ್ರಶಸ್ತಿ ನೀಡಿದ್ದಾರೆ.

**ಓಂಶ್ರೀ ಹೆಚ್.ಆರ್** ಪ್ರಥಮ .ಬಿ.ಇಡಿ.
**ಮಾರ್ಗದರ್ಶಕರು : ಮಹದೇವಸ್ವಾಮಿ ಎಸ್** ಪ್ರಾಧ್ಯಾಪಕರು
ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯ

-THE END-



# ಎಂ.ಎಲ್. ಶ್ರೀಕಂಠೇಶಗೌಡ

ಸಾಹಿತ್ಯ ಕ್ಷೇತ್ರಕ್ಕೂ ತನ್ನದೇ ಆದ ಕೊಡುಗೆ ನೀಡಿರುವ ಹಾಗೂ ತನ್ನದೇ ಆದ ಛಾಪು ಮೂಡಿಸಿರುವ ಜಿಲ್ಲೆ ಮಂಡ್ಯ. ಜಿಲ್ಲೆಯ ಇತಿಹಾಸದತ್ತ ತುಂಬಾ ಹಿಂದೆ ಹೊರಳಿದರೆ ಷಡಕ್ಷರದದೇವ, ತಿರುಮಲಾರ್ಯ, ಸಿಂಗಾರಾರ್ಯ, ಚಿಕ್ಕುಪಾಧ್ಯಾಯ, ಚಿಕ್ಕ ದೇವರಾಜ ಒಡೆಯರ್, ಕಿಕ್ಕೇರಿಯ ಆರಾಧ್ಯ ನಂಜುಂಡ, ಸಂಚಿಹೊನ್ನಮ್ಮ, ಮೇಲುಕೋಟೆಯ ರಾಜಮ್ಮ ಅವರ ಪೀಳಿಗೆಯ ನೆನಪಿಗೆ ಬರುತ್ತದೆ. ಶತಮಾನದ ಮೊದಲ ದಶಕದಲ್ಲಿ ನಿಂತು ನೋಡಿದರೆ ಶ್ರೀರಂಗ ಪಟ್ಟಣದ ಕೃಷ್ಣಮಚಾರ್ಯ, ಎಸ್.ಜಿ ನರಸಿಂಹಾಚಾರ್ಯ, ದೇವ ಶಿಖಾಮಣಿ, ಎಂ.ಎ. ರಾಮಾನುಜ ಅಯ್ಯಂಗಾರ್, ತದನಂತರ ಹೊಸಗನ್ನಡ ಸಾಹಿತ್ಯ ಪ್ರಕಾರಕ್ಕೆ ನಾಂದಿಹಾಡಿದ ಬಿ. ವೆಂಕಟಾಚಾರ್ಯರು, ಬಿ.ಎಂ.ಶ್ರೀ. ಅವರು ನೆನಪಾಗುತ್ತಾರೆ.

ಹಾಗೆಯೇ ಜಿಲ್ಲೆಯಲ್ಲಿ ಕನ್ನಡ ನವೋದಯ ಕಾಲದ ಸಾಹಿತ್ಯಕ್ಕೆ ಹೊಸ ರೂಪ ನೀಡಿದವರಲ್ಲಿ ಮೊದಲಿಗೆ ನೆನಪಾಗುವ ಹೆಸರು ಎಂ.ಎಲ್.ಶ್ರೀಕಂಠೇಶಗೌಡರು (1852–1926) ಮದ್ದೂರು ತಾಲ್ಲೂಕು ದೇಶಿಹಳ್ಳಿಯವರಾದ ಎಂ.ಎಲ್. ಶ್ರೀಕಂಠೇಶಗೌಡರು ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದವರು. ಅನುವಾದ, ಲೇಖನ, ಕಾವ್ಯ, ಕಾದಂಬರಿ ಪ್ರಕಾರಗಳಲ್ಲಿ ಸೈ ಎನಿಸಿಕೊಳ್ಳುವ ಮೂಲಕ 'ಜಿಲ್ಲೆಯಲ್ಲಿ ಹೊಸಗನ್ನಡ ಸಾಹಿತ್ಯದ ಉದಯಕ್ಕೆ ಬಣ್ಣ ಕೊಟ್ಟ ಕಾರಣ ಪುರಷ ಕಿರಣ' ಎಂದು ಕೀರ್ತಿತರಾದರು.

ಅವರ ಸಾಹಿತ್ಯ ಸೇವೆ ಕೇವಲ ಕೃತಿ ರಚನೆಗಷ್ಟೇ ಸೀಮಿತವಾಗಿರಲಿಲ್ಲ ಎಂಬುದು ಗಮನಾರ್ಹ. ಅವರ ಕಾರ್ಯ ವ್ಯಾಪ್ತಿಯನ್ನು ಗಮನಿಸಿದರೆ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಮೇಲೆ ಅವರಿಗಿದ್ದ ಅಭಿಮಾನ ಗೋಚರಿಸುತ್ತದೆ. ಗೆಳೆಯರ ಜೊತೆಗೂಡಿದ 'ಗ್ರಾಜುಯೇಟ್ ಟ್ರೇಡಿಂಗ್ ಅಸೋಸಿಯೇಷನ್' ಹೆಸರಿನ ಪ್ರಕಾಶನ ಸಂಸ್ಥೆ, 'ವಿದ್ಯಾದಾಯಿನಿ' ಹಾಗೂ 'ಸುರಭಿ' ಹೆಸರಿನಲ್ಲಿ ಸಾಹಿತ್ಯಕ ಪತ್ರಿಕೆ, ಜೊತೆಗೆ 'ಶ್ರೀ ಕಂಠೇಶ್ವರ ನಾಟಕ ಸಭಾ'ವನ್ನು ಅಸ್ತಿತ್ವಕ್ಕೆ ತರುವ ಮೂಲಕ ರಂಗಭೂಮಿಯ ಸೇವೆಗೂ ಅರ್ಪಿಸಿ ಕೊಂಡವರು ಗೌಡರು. ಷೇಕ್ಸಪಿಯರ್ ಗೌಡರ ನೆಚ್ಚಿನ ನಾಟಕಕಾರ. ಇವರು ಷೇಕ್ಸ್‌ಪಿಯರ್ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದವರಲ್ಲಿ ಮೊದಲನೆಯವರು ಎಂದು ಹೇಳಲಾಗುತ್ತದೆ. ಕನ್ನಡದಲ್ಲಿ ನಾಟಕಗಳೇ ಅಪರೂಪ ಎನ್ನುವಂಥಹ ಸಂದರ್ಭದಲ್ಲಿ ಇಂಗ್ಲೀಷ್ ನಾಟಕಗಳನ್ನು ರೂಪಂತರಿಸಿದ್ದಾರೆ ಎಂಬದನ್ನು ಗಮನಿಸಬೇಕಾದಂತಹ ಅಂಶ.

'ಪ್ರಿಯದರ್ಶಿಕೆ' ಅವರ ಸಂಸ್ಕೃತ ರೂಪಾಂತರಿಕ ಕೃತಿಗಳಲ್ಲಿ ಒಂದು. ಡಾ.ಮಾಸ್ತಿ ಅವರು ಗೌಡರ "ಪ್ರಮೀಳಾರ್ಜುನೀಯಂ" ಕೃತಿಯನ್ನು ಪರಿಚಯಿಸುತ್ತ ಒಂದು ಕಡೆ 'ಈ ರೂಪಾಂತರ ಮಾಡಿದ ಕವಿ ತುಂಬಾ ಜಾಣರು'. ಅವರುಬದುಕನ್ನು ಚೆನ್ನಾಗೇ ನೋಡಿದವರು. ಕನ್ನಡದಲ್ಲಿ ಚೆನ್ನಾಗಿ ಬರೆಯಬಲ್ಲವರು. "ಹಾಗೂ ಷೇಕ್ಸಪಿಯರ್‌ರನ್ನು ಕನ್ನಡಕ್ಕೆ ತರುವ ಯೋಚನೆ ಮಾಡದೇ ಸ್ವತಂತ್ರ ನಾಟಕಗಳನ್ನು ಬರೆದಿದ್ದರೆ ಇವರ ಶಕ್ತಿ ಇನ್ನಷ್ಟು ಹೆಚ್ಚು ಸಾರ್ಥಕವಾಗಿ ವಿನಿಯೋಗ ಆಗುತ್ತಿತ್ತು ಎಂದಿದ್ದಾರೆ". ಇದು ಗೌಡರ ಸಾಹಿತ್ಯ ಶ್ರೀಮಂತಿಕೆಗೆ ಮಾಡಬಹುದಾದ ವ್ಯಾಖ್ಯಾನವು ಹೌದು. ಜಿಲ್ಲೆಯಲ್ಲಿ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದ ಇಂಥ ಕೃತಿಕಾರರ ಸಾಹಿತ್ಯದ ವಿವಿಧ ಮಜಲುಗಳನ್ನು ಒರೆಗೆ ಹಚ್ಚುವ ಕಾರ್ಯ ಇದೇ.

- ವ್ಯಕ್ತಿ ಜೀವನದಲ್ಲಿ ಅವರು ಮೊದಲಿಗೆ ವಕೀಲರಾಗಿದ್ದು, ಆಮೇಲೆ ನ್ಯಾಯಾಧೀಶರಾಗಿದ್ದರು. ಶಿವಮೊಗ್ಗ, ಹಾಸನ, ಕೋಲಾರ, ನಂಜನಗೂಡು ಮಧುಗಿರಿ ಮೊದಲಾದ ಸ್ಥಳಗಲ್ಲಿ ಕೆಲಸಮಾಡಿ ಪ್ರಾಮಾಣಿಕತೆ ದಕ್ಷತೆಗಳಿಗೆ ಹೆಸರಾಗಿದ್ದರು.
- ಸಾಹಿತ್ಯ ಪ್ರವೃತ್ತಿಯ ಶ್ರೀಕಂಠೇಶಗೌಡರು ಪತ್ರಿಕೋದ್ಯಮಿಯು ಆಗಿದ್ದರು. 'ಸುರಭಿ' ಎನ್ನುವುದು ಅವರು ಸಂಪಾಧಿಸಿ ಪ್ರಕಟಿಸುತ್ತಿದ್ದ ಪತ್ರಿಕೆಯ ಹೆಸರು.
- ಇಂಗ್ಲೀಷ್ ವಿಧ್ಯಾಭ್ಯಾಸ ಪಡೆದು, ಇಂಗ್ಲೀಷ್ ಸಾಹಿತ್ಯಕ್ಕೆ ಮನಸ್ಸುಕೊಟ್ಟು, ಆ ಸಾಹಿತ್ಯದ ಸೌಂದರ್ಯ ಸಂಪತ್ತುಗಳನ್ನು ಕನ್ನಡಕ್ಕೆ ತರಬೇಕೆಂದು ಸಂಕಲ್ಪಿಸಿ, ಯಶಸ್ಸುಗಳಿಸಿದವರಲ್ಲಿ ಅದರಲ್ಲಿಯು ಶ್ರೀಕಂಠೇಶಗೌಡರು ವಿಶೇಷ ಸ್ಥಾನ ಪಡೆದಿದ್ದಾರೆ.
- ಅವರು ಬಗೆ ಬಗೆಯ ಸಾಹಿತ್ಯ ಕೃತಿಗಳನ್ನು ರಚಿಸಿದ್ದರೂ ಅವರ ಖ್ಯಾತಿ ಬೆಳೆದಿರುವುದು ಷೇಕ್ಸ್‌ಪಿಯರ್‌ನ ಎರಡು ನಾಟಕಗಳ ರೂಪಾಂತರಗಳಿಂದ : ಒಂದು, 'ಮ್ಯಾಕ್‌ಬೆತ್'. (ಪ್ರತಾಪರುದ್ರದೇವ) ಇನ್ನೊಂದು, ಎ ಮಿಡ್ ಸಮರ್ ನೈಟ್ಸ್ ಡ್ರೀಮ್ (ಪ್ರಮೀಳಾರ್ಜುನೀಯಂ) ಇವು ಪ್ರಕಟಗೊಂಡದ್ದು ಕ್ರಮವಾಗಿ 1895 ಮತ್ತು 1896ರಲ್ಲಿ.

ಇಂಗ್ಲೀಷ್ ವಿದ್ಯಾಬ್ಯಾಸ ಪಡೆದು, ಆ ಸಾಹಿತ್ಯಕ್ಕೆ ಮನಸೋತು, ಆ ಸಾಹಿತ್ಯದ ಸೌಂದರ್ಯ ಸಂಪತ್ತುಗಳನ್ನು ಕನ್ನಡಕ್ಕೆ ತರಬೇಕೆಂದು ಸಂಕಲ್ಪಿಸಿ, ಯಶಸ್ಸುಗಳಿಂದ

ಶ್ರೀಕಂಠೇಶಗೌಡರು ರೂಪಾಂತರ ಕ್ಷೇತ್ರದಲ್ಲಿ ವಿಶೇಷ ಸ್ಥಾನ ಪಡೆದಿದ್ದಾರೆ. ನಮ್ಮ ಕನ್ನಡ ಸಾಹಿತ್ಯಕ್ಕೆ ಹಲವು ಹೊಸ ಪ್ರೌವೃತ್ತಿಗಳನ್ನು ರಸಗಳನ್ನು ಹಾಗೂ ಮಜಲುಗಳನ್ನು ತಂದುಕೊಟ್ಟು ಕನ್ನಡಿಗರ ಚಿರಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಒಂದು ಕಡೆ ಶ್ರೀ ತ.ಸು.ಶಾಮರಾಯರು ಬರೆಯುತ್ತ, "ಇಂಗ್ಲೀಷ್ ನಾಟಕಗಳನ್ನು ಕನ್ನಡಕ್ಕೆ ಭಾಷಾಂತರ ಮಾಡ ಹೊರಟವರಲ್ಲಿ ಶ್ರೀಮಾನ್ ಶ್ರೀಕಂಠೇಶಗೌಡರ ಹೆಸರು ಅಗ್ರಗಣ್ಯವಾದದ್ದು. ಅವರ ಭಾಷಾಂತರ ಶಕ್ತಿಗಿಂತಲೂ ಅವರ ಕನ್ನಡ ಅಭಿಮಾನಕ್ಕಾಗಿ ಅವರನ್ನು ಕನ್ನಡಿಗರು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಜೊತೆಗೆ ನೂತನ ವಿಧಾನದ ನಾಟಕಗಳನ್ನಾಡುವ ವಿಚಾರದಲ್ಲಿ ನಟರಿಗೆ ಬೇಕಾದಷ್ಟು ಸಲಹೆಗಳನ್ನು ಕೊಟ್ಟು ಕನ್ನಡ ನಾಟಕದ ಜಗತ್ತಿನಲ್ಲಿ ನೂತನ ಸಂಪ್ರದಾಯವನ್ನು ಆರಂಬಿಸಿದರೆಂದು ಹೇಳಬಹುದು ಎಂದಿದ್ದಾರೆ.

ಇನ್ನು ನಾಟಕಗಳ ವಿಮರ್ಶೆಗೆ ಬಂದರೆ, ಪ್ರತಾಪರುದ್ರದೇವ ನಾ ಕಂಡಂತೆ ಷೇಕ್ಸ್‌ಪಿಯರ್‌ನ ಅದ್ಬುತ ನಾಟಕಗಳೊಂದು. ಪ್ರಪಂಚದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಪಠ್ಯಕ್ರಮವಾಗಿರುವ ಪ್ರತಾಪರುದ್ರದೇವ ಮಾನವನ ಆಕಾಂಕ್ಷೆ, ಅಧಿಕಾರದ, ದುರಾಸೆ, ತಂತ್ರ–ಪ್ರತಿತಂತ್ರ, ದುರ್ಮಾರ್ಗಗಳು, ಅಡ್ಡದಾರಿ, ಅತಿಯಾದ ಆತ್ಮವಿಶ್ವಾಸ, ದ್ರೋಹ ಇತ್ಯಾದಿ ಮಾನವನ ದೌರ್ಬಲ್ಯಗಳನ್ನು ಷೇಕ್ಸ್‌ಪಿಯರ್‌ರವರು ಕಣ್ಣಿಗೆ ಕಟ್ಟುವಂತೆ, ಕಣ್ಣಮುಂದೆ ಆ ಪಾತ್ರಧಾರಿಗಳು ಬಂದಂತೆ ಭಾಸವಾಗುತ್ತದೆ. ಒಂದೊಂದು ಸಲ ನಾವೇ ಆ ಪಾತ್ರದಾರಿಗಳೇನೋ ಎಂದನೆಸಿಬಿಡುತ್ತದೆ. ಇಂತಹ ಅದ್ಬುತ ನಾಟಕವನ್ನು ಶ್ರೀಕಂಠೇಶಗೌಡರು ಕನ್ನಡಕ್ಕೆ ಭಾಷಾಂತರಗೊಳಿಸಿ ಕನ್ನಡಿಗರು ಆ ದೌರ್ಬಲ್ಯಗಳ ಸುಳಿಗಳಿಂದ ಎಚ್ಚೆತ್ತುಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದಾರೆ ಎಂದು ಹೇಳಬಹುದು.

ಇನ್ನೂ ಭಾಷಾಂತರದ ಬಗ್ಗೆ ಹೇಳುವುದಾದರೆ ಷೇಕ್ಸ್‌ಪಿಯರ್‌ನ ಪಾತ್ರದಾರಿಗಳನ್ನು ಯಶ್ವಸಿಯಾಗಿ ಕನ್ನಡಕ್ಕೆ ರೂಪಾಂತರಗೊಳಿಸದ್ದು, ಪ್ರತಿ ಪಾತ್ರಕ್ಕೂ ಕನ್ನಡ ಸಂಸ್ಕೃತಿಯ ಹಿನ್ನೆಲೆಯ ನಾಮದೇಯಗಳನ್ನು ನಾಮಕರಣಗೊಳಿಸಿ ಕನ್ನಡದ ಕಂಪನ್ನು ನಾಟಕದ ತುಂಬೆಲ್ಲಾ ಹರಿಸಿದ್ದಾರೆಂದು ಹೇಳಬಹುದು. ನಾಟಕದ ಪ್ರಾರಂಭದಿಂದ ಅಂತ್ಯದವರೆಗೂ ಎಲ್ಲೂ ಇಂಗ್ಲೀಷ್ ಭಾಷಾಸಂಸ್ಕೃತಿಯ ವಾಸನೆ/ರುಚಿ ಕಂಡುಬರದ ರೀತಿಯಲ್ಲಿ ನಾಟಕವನ್ನು ಅನುವಾದಿಸಿದ್ದಾರೆ. ವಿಶೇಷವಾಗಿ ಹಳೆಗನ್ನಡದ ಬಳಕೆ, ಕಂದ ಪದ್ಯಗಳನ್ನು, ವಾಕ್ಯರಚನೆ ಎಲ್ಲವೂ ಉತ್ಕೃರ್ಷ ಮಟ್ಟದಲ್ಲಿದ್ದು, ನೈಜ ಕನ್ನಡದ ನಾಟಕ ಓದಿದ ಹಾಗೆ ಅನಿಸುತ್ತದೆ.

ಇನ್ನು ಪಾತ್ರಗಳ/ಸನ್ನಿವೇಶಗಳ ಹೆಸರಿನ ಬಗ್ಗೆ ವಿಶೇಷವಾಗಿ ಹೇಳುವುದಾದರೆ ಆಂಗ್ಲ ಭಾಷೆಯಲ್ಲಿ (ಮೂಲ ಕೃತಿ) ಶಕ್ತಿಗಳ–ಭೂತ/ಪಿಶಾಚಿಗಳಾಗಿದ್ದು ನಕರಾತ್ಮಕ ಭಾವನೆ ಮೂಡಿಸಿ ಪ್ರಾರಂಭದಲ್ಲಿಯೆ ದುರಂತದ ವಾಸನೆಯನ್ನು ಬಡಿಯುವುದಾದರೆ, ಕನ್ನಡದಲ್ಲಿ ಶಕ್ತಿಗಳು ಎಂದು ಪರಿಚಯಿಸಿ ಆಸಕ್ತಿ ಮೂಡವಂತೆ ಮಾಡಿದ್ದಾರೆ. ನಂತರ ನಾಟಕವನ್ನು ವೇದಿಕೆಯ ಮೇಲೆ ಪ್ರದರ್ಶಿಸಲು ಪ್ರಯತ್ನಮಾಡುವವರಿಗೆ, ರಾಗ ಸಂಯೋಜನೆಯ ಸುಳಿವುಗಳನ್ನು ಪ್ರತಿ ಪುಟಗಳಲ್ಲಿ ಹೆಸರಿಸಿದ್ದಾರೆ. ಪಲ್ಲವಿ ಅನುಪಲ್ಲವಿಗಳ ಮಾರ್ಗದರ್ಶನ, ಆತ್ಮಗತ (ಪ್ರಮುಖ ಪಾತ್ರದಂತೆ) ಮತ್ತು ಲೇಖನಿ ಚಿಹ್ನೆಗಳನ್ನು ಸಮರ್ಪಕ ರೀತಿಯಲ್ಲಿ ಬಳಸಿ ನಾಟಕವನ್ನು ಯಶ್ವಸಿಯಾಗಿ ರೂಪಾಂತಿಸಿದ್ದಾರೆ. ಯಾವೂದೇ ಪುಟಗಳಲ್ಲಿ ಸಂಭಾಷಣೆಗಳನ್ನು, ಸನ್ನಿವೇಶಗಳನ್ನು ಯಾವುದೇ ದಕ್ಕೆಬಾರದ ರೀತಿಯಲ್ಲಿ ರಚಿಸಿ ಮೂಲ ಕೃತಿಯನ್ನು ಓದದವರಿಗೂ ಕೂಡ ಎಲ್ಲೂ ಬೇಸರವಾಗದ ರೀತಿಯಲ್ಲಿ ರಚಿಸಿದ್ದಾರೆಂದು ಹೇಳಬಹುದು. ನಾಟಕದ ನಾಯಕ ಮತ್ತು ಖಳನಾಯಕ–ವೀರಸೇನ ಮತ್ತು ಅವನ ಪತ್ನಿ ಚಂದ್ರವಲ್ಲಿ ಇಂದಿಗೂ ನಮ್ಮೊಳಗೆ, ನಮ್ಮ ಸುತ್ತ–ಮುತ್ತಾ ಇರುವರೆಂಬ ಭಾವ ಪ್ರಾರಂಭದಿಂದ ಅಂತ್ಯದವರೆಗೂ ಕಾಡುತ್ತದೆ. ಮನುಷ್ಯನ ಭಾವನೆಗಳನ್ನು ಷೇಕ್ಸ್‌ಪಿಯರ್‌ನಷ್ಟು ಆಳವಾಗಿ ಅಧ್ಯಯನ ಮಾಡಿ ನಾಟಕಗಳಲ್ಲಿ ಚಿತ್ರಿಸಿದಷ್ಟು ಬೇರೆ ಯಾವ ಭಾಷೆಯ ನಾಟಕಕಾರ ಇಲ್ಲವೇನೊ, ಅವರ ಪ್ರತಿ ನಾಟಕದಲ್ಲೂ ಒಂದೊಂದು ಭಾವನೆಗಳ ಚಿತ್ರಣ ನಮಗೆ ಸಿಗುತ್ತದೆ. ಅದರಲ್ಲೂ ಋಣಾತ್ಮಕ ಭಾವನೆಗಳ ಹರಿವು ಶಕ್ತಿಶಾಲಿಯಾಗಿ ಹೊರಹೊಮ್ಮಿ ನಮ್ಮನ್ನು ಎಚ್ಚೆತ್ತುಕೊಳ್ಳುವಂತೆ ಅವರ ನಾಟಕಗಳು ಪ್ರೇರೆಪಿಸುತ್ತವೆ.

ಶ್ರೀಕಂಠೇಶಗೌಡರು ಷೇಕ್ಸ್‌ಪಿಯರ್‌ನ ದೃಷ್ಟಿಕೋನವನು ಹತ್ತಿರದಿಂದ ಬಲ್ಲವರಂತೆ ತಮ್ಮ ಅನುವಾದಿತ ನಾಟಕಗಳಲ್ಲಿ ಆ ರಸಗಳನ್ನು ಎಲ್ಲೂ ಕೆಡದಂತೆ ತುಂಬಿಸಿದ್ದಾರೆ. ಇನ್ನೂ ಮತ್ತೊಂದು ನಾಟಕವಾದ 'ಪ್ರಮಿಳಾರ್ಜುನೀಯಂ'(ಎ ಮಿಡ್ಸಮ್ಮರ್ ನೈಟ್ ಡ್ರೀಮ್) ಒಂದು ಹಾಸ್ಯಭರಿತ ಪ್ರೇಮ ನಾಟಕವಾಗಿದ್ದು, ತ್ರೀಕೋನ ಪ್ರೇಮಕಥೆಯನ್ನು ಹೊಂದಿದ್ದು, ಮಹಾಭಾರತದ ಪ್ರಾತಗಳನ್ನು ಶ್ರೀಕಂಠೇಶಗೌಡರು ಇಲ್ಲಿ ಪರಿಚಯಿಸಿದ್ದಾರೆ. ಆಂಗ್ಲ ಸಂಸ್ಕೃತಿಯ ನೆರಳು ಕೂಡ ಇಲ್ಲಿ ತಾಕದಂತೆ ನಾಟಕವನ್ನು ರೂಪಾಂತರಗೊಳಿಸಿ. ಓದುಗರನ್ನು, ವೀಕ್ಷಕರನ್ನು ತಮ್ಮ ಹಿಡಿತದಲ್ಲಿರಿಸಿ ಅಂತ್ಯವನ್ನು ನೀಡಿದ್ದಾರೆ.

ಈ ಎರಡು ನಾಟಕಗಳಲ್ಲಿ ಕನ್ನಡ ಸಾಹಿತ್ಯ–ಭಾಷೆ, ಪದಗಳ ಬಳಕೆ, ವ್ಯಾಕರಣದ ಅಂಶಗಳಿಗೆ ಎಲ್ಲೂ ಚ್ಯುತಿ ಬಾರದಂತೆ ರಚಿಸಿದ್ದು, ಭಾಷಾಂತರ ಪ್ರಕ್ರಿಯೆಯಲ್ಲಿ ಕಿರೀಟ ಪ್ರಾಯರಾಗಿ ಈ ಕ್ಷೇತ್ರಕ್ಕೆ ಒಂದು ಹೊಸ ಮುನ್ನಡಿ ಬರೆದಿದ್ದಾರೆಂದು ಹೇಳಬಹುದು.

**ಮನುಲ ಪಿ** ದ್ವಿತೀಯ .ಬಿ.ಇಡಿ.

**ಮಾರ್ಗದರ್ಶಕರು : ಮಹದೇವಸ್ವಾಮಿ ಎಸ್** ಪ್ರಾಧ್ಯಾಪಕರು

ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯ

-THE END-



# ಜಸ್ಟೀಸ್ ಇ.ಎಸ್ ವೆಂಕಟರಾಮಯ್ಯ

**ವೈಯಕ್ತಿಕ ವಿವರಗಳು**

**ಜನನ:** 18 ಡಿಸೆಂಬರ್ 1924

**ಮರಣ :** 24 ಡಿಸೆಂಬರ್ 1997 (ವಯಸ್ಸು 72)

**ಮಕ್ಕಳು** : ಬಿ.ವಿ.ನಾಗರತ್ನ

ಇಂಗಳಗುಪ್ಪೆ ಸೀತಾರಾಮಯ್ಯ ವೆಂಕಟರಾಮಯ್ಯ (18 ಡಿಸೆಂಬರ್ 1924– ಭಾರತದ 19ನೇ ಮುಖ್ಯ ನ್ಯಾಯಮೂರ್ತಿಯಾಗಿದ್ದರು), 19 ಜೂನ್ 1989 ರಿಂದ 17 ಡಿಸೆಂಬರ್ 1989 ರಂದು ನಿವೃತ್ತರಾಗುವವರೆಗೆ ಸೇವೆ ಸಲ್ಲಿಸಿದ್ದರು. ಅವರು 1946 ರಲ್ಲಿ ತಮ್ಮ ವಕೀಲ ವೃತ್ತಿಯನ್ನು ಪ್ರಾರಂಭಿಸಿದರು ಮತ್ತು ನ್ಯಾಯಾಧೀಶರಾಗಿ ನೇಮಕಗೊಂಡರು. ನವೆಂಬರ್ 1970 ರಲ್ಲಿ ಕರ್ನಾಟಕ ಉಚ್ಚನ್ಯಾಯಾಲಯದ ಮಾರ್ಚ್ 1979 ರಲ್ಲಿ, ಅವರು ಭಾರತದ ಸರ್ವೋಚ್ಚನ್ಯಾಯಲಯದ ನ್ಯಾಯಾಧೀಶರಾಗಿ ನೇಮಕಗೊಂಡರು ಮತ್ತು ಅವರು ಜೂನ್ 1989 ರಲ್ಲಿ ಭಾರತದ ಮುಖ್ಯ ನ್ಯಾಯಮೂರ್ತಿಯಾದ ಕರ್ನಾಟಕದಿಂದ ಮೊದಲ ವ್ಯಕ್ತಿಯಾಗಿದ್ದಾರೆ. ಅವರು 24 ಸೆಪ್ಟೆಂಬರ್ 1997 ರಂದು ಹೃದಯಾಘಾತದಿಂದ ನಿಧಾನರಾದರು.

## ಕರ್ನಾಟಕ ಹೈಕೋರ್ಟ್ (IAST)

(ಸಾಮಾನ್ಯವಾಗಿ ಕರ್ನಾಟಕ ಹೈಕೋರ್ಟ್ ಹಿಂದೆ ಮೈಸೂರು ಹೈಕೋರ್ಟ್ ಎಂದು ಕರೆಯಲಾಗುತ್ತಿತ್ತು). ಪ್ರಧಾನ ಫೀಠವು ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿದೆ.

ಹುಬ್ಬಳ್ಳಿ – ಧಾರವಾಡ ಮತ್ತು ಕಲಬುರಗಿಯಲ್ಲಿ ಹೆಚ್ಚುವರಿ ಫೀಠಗಳಿವೆ. ಇದನ್ನು ಹಿಂದೆ ಮೈಸೂರು ಬೆಂಗಳೂರಿನಲ್ಲಿ, ಕರ್ನಾಟಕ ಶಾಸಕಾಂಗದ ಸ್ಥಾನವಾದ ವಿಧಾನಸೌಧದ ಎದುರು ಇರುವ ಅಠಾರ ಕಛೇರಿ ಎಂದು ಕರೆಯಲ್ಪಡುವ ಕೆಂಪು – ಬಣ್ಣದ ಇಟ್ಟಿಗೆ ಕಟ್ಟಡದಿಂದ ನಿರ್ಮಾಣವಾಗಿ ಹೈಕೋರ್ಟ್ ಕಾರ್ಯನಿರ್ವಹಿಸುತ್ತದೆ.

# ಆವರಣ

## ಮುಖ್ಯ ಲೇಖಕರು : ಅಠಾರ ಕಛೇರಿ

### ಅಠಾರ ಕಛೇರಿ, ನ್ಯಾಯಾಲಯದ ಪ್ರಧಾನ ಪೀಠದ ಬೆಂಗಳೂರು ಸ್ಥಾನ

ಹೈಕೋರ್ಟ್‌ನ ಪ್ರಧಾನ ಪೀಠವು ಬೆಂಗಳೂರಿನಲ್ಲಿ ಅಠಾರ ಕಛೇರಿ ಎಂಬ ಕಟ್ಟಡದಲ್ಲಿದೆ. ಇದು ನಿಯೋಕ್ಲಾಸಿಕಲ್ ವಾಸ್ತುಶೈಲಿಯಲ್ಲಿ ಕೆಂಪು ಬಣ್ಣ ಬಳಿಯಲಾದ ಕಲ್ಲು ಮತ್ತು ಇಟ್ಟಿಗೆಯ ವಿಶಾಲವಾದ ಎರಡು ಅಂತಸ್ತಿನ ಕಟ್ಟಡವಾಗಿದೆ. ಇದನ್ನು 1864 ಮತ್ತು 1868 ರ ನಡುವೆ ನಿರ್ಮಿಸಲಾಯಿತು. ಇದು ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿದೆ.

1982 ರಲ್ಲಿ ಈ ಕಟ್ಟಡವನ್ನು ಕೆಡವುವ ಪ್ರಸ್ತಾಪವಿತ್ತು. ನೆಲಸಮವನ್ನು ನಿಲ್ಲಿಸುವಂತೆ ಕೋರಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಶಕ್ತಿ ಅರ್ಜಿ (ಪಿಈಎಲ್) ಸಲ್ಲಿಸಲಾಗಿತ್ತು. ನ್ಯಾಯಾಲಯದಲ್ಲಿ ದಾಳವಾದ ಮೊದಲ PIL ಇದಾಗಿದ್ದು, ಕೆಡವಬೇಕಿದ್ದ ಕಟ್ಟಡದಲ್ಲೇ ಪ್ರಕರಣದ ವಿಚಾರಣೆ ನಡೆದಿದೆ. ಅರ್ಜಿಯನ್ನು ಹೈಕೋರ್ಟ್ ತಳ್ಳಿಹಾಕಿತು, ಆದರೆ ಕಟ್ಟಡವನ್ನು ಕೆಡವುವ ಪ್ರಸ್ತಾಪವನ್ನು 1985ರಲ್ಲಿ ಸುಪ್ರೀಂಕೋರ್ಟ್ ಕೆಡವಲು ಮರು ಪರಿಶೀಲಿಸುವಂತೆ ರಾಜ್ಯ ಸರ್ಕಾರವನ್ನು ಕೇಳಿದಾಗ ಕೈಬಿಡಲಾಯಿತು.

## ಗಮನಾರ್ಹ ನ್ಯಾಯಾಧೀಶರು

ನ್ಯಾಯಾಲಯದ ನ್ಯಾಯಾಧೀಶರಾದ ಇ.ಎಸ್.ವೆಂಕಟರಾಮಯ್ಯ ಎಂ.ಎನ್ ವೆಂಕಟಾಚಲಯ್ಯ, ಎಸ್.ರಾಜೇಂದ್ರ ಬಾಬು ಮತ್ತು ಎಚ್.ಎಲ್ ದತ್ತು ಅವರು ಭಾರತದ ಮುಖ್ಯ ನ್ಯಾಯಮೂರ್ತಿಗಳಾದವರು ಮತ್ತು ಕಲ್ಮಂಜೆ ಜಗನ್ನಾಥ ಶೆಟ್ಟಿ, ಎನ್. ವೆಂಕಟಾಚಲ, ಆರ್.ವಿ.ರವೀಂದ್ರನ್, ಶಿವರಾಜ್ ಪಾಟೀಲ್, ವೆಂಕಟೆಗೋಪಾಲಗೌಡ ಸೇರಿದಂತೆ ಇತರರು., A. S. ಬೋಪಣ್ಣ ಮೋಹನ್ ಶಾಂತರಗೌಡರ್, S. ಅಬ್ದುಲ್ ನಜೀರ್, A. S. ಓಕಾ ಮತ್ತು B. V. ನಾಗರತ್ನ ಅವರು ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ನ್ಯಾಯಾಧೀಶರಾಗಿ ನೇಮಕಗೊಂಡರು.

# ಗಮನಾರ್ಹ ತೀರ್ಪುಗಳು

ಇಂಡಿಯನ್ ಎಕ್ಸ್ಪ್ರೆಸ್ ನ್ಯೂಯಸ್ಪೇಪರ್ಸ್ ವರ್ಸಸ್ ಯೂನಿಯನ್ ಆಫ್ ಇಂಡಿಯಾ (1984) ಪ್ರಕರಣದಲ್ಲಿ, ಅರ್ಜಿದಾರರು ಕಸ್ಟಮ್ಸ್ ಸುಂಕ ಕಾಯ್ದೆ, 1975 ರ ಅಡಿಯಲ್ಲಿ ಪತ್ರಿಕೆಗಳ ಮೇಲೆ ವಿಧಿಸಲಾದ ಆಮದು ಸುಂಕವನ್ನು ಪ್ರಶ್ನಿಸಿದರು. ಪತ್ರಿಕೆಯ ವೆಚ್ಚಗಳ ಹೆಚ್ಚಳವು ಪ್ರಸಾರದಲ್ಲಿ ಕುಸಿತಕ್ಕೆ ಕಾರಣವಾಯಿತು ಮತ್ತು ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಹಾನಿ ಮಾಡುತ್ತದೆ ಎಂದು ಅವರು ವಾದಿಸಿದರು. ಸಿಜೆಐ ವೆಂಕಟರಾಮಯ್ಯ ನೇತೃತ್ವದ ಮೂವರು ನ್ಯಾಯಾಧೀಶರ ಪೀಠವು ಪತ್ರಿಕಾ ಉದ್ಯಮದ ಯಾವುದೇ ತೆರಿಗೆಯು ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಅತಿಕ್ರಮಿಸದಂತೆ ಸಮಂಜಸವಾದ ಮಿತಿಯೊಳಗೆ ಇರಬೇಕು ಎಂದು ತೀರ್ಪು ನೀಡಿತು. ನಂತರ ನ್ಯಾಯಪೀಠವು ಪತ್ರಿಕೆಗಳಿಗೆ ಸಂಬಂಧಿಸಿದ ತೆರಿಗೆ ನೀತಿಯನ್ನು ಪರೀಶೀಲಿಸುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಿತು.

ಎಂ.ಸಿ.ಮೆಹ್ತಾ ವರ್ಸಸ್ ಯೂನಿಯನ್ ಆಫ್ ಇಂಡಿಯಾ (1987) ಪ್ರಕರಣದಲ್ಲಿ ಸಿಜೆಐ ವೆಂಕಟರಾಮಯ್ಯ ನೇತೃತ್ವದ ಪೀಠವು ಕಾನ್ಪುರದ ಚರ್ಮದ ಕಾರ್ಖಾನೆಗಳನ್ನು ಮುಚ್ಚುವಂತೆ ಆದೇಶಿಸಿತು. ಈ ತೀರ್ಪು ಸಂವಿಧಾನದ ಅಡಿಯಲ್ಲಿ ಸ್ವಚ್ಛ ಪರಿಸರದ ಹಕ್ಕನ್ನು ವಿಸ್ತರಿಸಿದ ಮೊದಲನೆಯದಾಗಿದೆ. ಟ್ಯಾನರಿಗಳು ವಿಷಕಾರಿ ತ್ಯಾಜ್ಯವನ್ನು ಗಂಗಾನದಿಗೆ ಬಿಡುತ್ತಿವೆ ಮತ್ತು ಪ್ರಾಥಮಿಕ ಸಮಸ್ಕರಣಾ ಘಟಕವಿಲ್ಲದೆ ಮುಂದುವರಿಯಲು ಅನುಮತಿಸಲಾಗುವುದಿಲ್ಲ ಎಂದು ತೀರ್ಪಿನಲ್ಲಿ ತಿಳಿಸಲಾಗಿದೆ. ಚರ್ಮದ ಕಾರ್ಖಾನೆಗಳು ತಕ್ಷಣವೇ ಇರಬೇಕು ಎಂದು ನ್ಯಾಯಪೀಠ ಆದೇಶಿಸಿದೆ. ನೀತಿಯನ್ನು ಪರಿಶೀಲಿಸುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಿತು.

## ಹುಟ್ಟೂರು ಪರಿಸರಕ್ಕೆ ಇ.ವಿ.ಎಸ್ ಅವರ ಕೊಡುಗೆ:

- ತೊಣ್ಣೂರಿಗೆ ಆಸ್ಪತ್ರೆಮಂಜೂರು
- ಮುರಾರ್ಜಿ ಶಾಲೆಮಂಜೂರು (ಈ ಶಾಲೆಯ ಬಳಿಯ ಕೆರೆಯತಡಿಯಲ್ಲಿಯೇ ಇ.ವಿ.ಎಸ್ ಅವರು ಸಮಾಧಿಯಿದೆ).

**ಇ.ಎಸ್ ವೆಂಕಟರಾಮಯ್ಯ ಮಕ್ಕಳು : ಬಿ.ವಿ.ನಾಗರತ್ನ**



ನ್ಯಾಯಾಮೂರ್ತಿ ಬಿ. ವೆಂಕಟರಾಮಯ್ಯ ನಾಗರತ್ನ ಅವರು ಕರ್ನಾಟಕ ಹೈಕೋರ್ಟ್ ನ್ಯಾಯಾಧೀಶರು. 2009 ರಲ್ಲಿ ಪ್ರತಿಭಟನಾನಿರತ ವಕೀಲರ ಗುಂಪು ಅವರನ್ನು ಕರ್ನಾಟಕ ಹೈಕೋರ್ಟ್ ಆವರಣದಲ್ಲಿ ಬಲವಂತವಾಗಿ ಬಂಧಿತವಾಗಿ ಬಂಧಿಸಿದಾಗ ಅವರ ಗಮನ ಸೆಳೆಯಿತು. ಬಿ.ವಿ.ನಾಗರತ್ನ ಅವರು ಕರ್ನಾಟಕದ ವಾಣಿಜ್ಯ ಮತ್ತು ಧಾನಿಕ ಕಾನೂನಿಗೆ ಸಾಂವಿ ಸಂಬಂಧಿಸಿದ ಹಲವಾರು ಪ್ರಕರಣಗಳ ತೀರ್ಪು ನೀಡಿದ್ದಾರೆ.

## ಬಿ.ವಿ.ನಾಗರತ್ನ ಅವರ ಜೀವನ

ಬಿ.ವಿ.ನಾಗರತ್ನ ಅವರು ಅಕ್ಟೋಬರ್ 30, 1962 ರಂದು ಜನಿಸಿದರು. ಲೆಕ್ಕಚಾರಗಳು ಸರಿಯಾಗಿದ್ದರೆ, ಅವರು ಈಗ 58 ವರ್ಷಕ್ಕಿಂತ ಸ್ವಲ್ಪ ಹೆಚ್ಚು. ಅವರ ತಂದೆ ಇ.ಎಸ್.ವೆಂಕಟರಾಮಯ್ಯ ಅವರು. ಭಾರತದ 19ನೇ ಮುಖ್ಯನ್ಯಾಯಮೂರ್ತಿಯಾಗಿದ್ದರು. ಕೊಲಿಜಿಯಂ ಅವರನ್ನು ಜೂನ್ 19, 1989 ರಂದು ನೇಮಕ ಮಾಡಿತು. ಅವರು ಡಿಸೆಂಬರ್ 17, 1989 ರಂದು ಸೇವೆಯಲ್ಲಿ ನಿವೃತ್ತರಾದರು.

## ನಾಗರತ್ನ ಅವರ ವೃತ್ತಿಜೀವನ

1987 ರಲ್ಲಿ ಅವರು ಕರ್ನಾಟಕದ ಬಾರ್ ಕೌನ್ಸಿಲ್ನಲ್ಲಿ ತಮ್ಮನ್ನು ನೋಂದಾಯಿಸಿಕೊಂಡು ಮತ್ತು ಬೆಂಗಳೂರಿನಲ್ಲಿ ವಾಣಿಜ್ಯ ಮತ್ತು ಸಾಂವಿಧಾನಿಕ ಕಾನೂನು ಅಭ್ಯಾಸ ಮಾಡಿದರು. ನಂತರ 2008 ರಲ್ಲಿ, ಇತರ ನ್ಯಾಯಾಧೀಶರು ಅವರನ್ನು ಕರ್ನಾಟಕ ಹೈಕೋರ್ಟ್ ಹೆಚ್ಚುವರಿ ನ್ಯಾಯಾಧೀಶರಾಗಿ ನೇಮಿಸಿದರು. ಶ್ರೀಘ್ರದಲ್ಲೇ, ಅವರು ಫೆಬ್ರವರಿ 17 2010 ರಂದು ಖಾಯಂ ನ್ಯಾಯಾಧೀಶರಾಗಿ ನೇಮಕಗೊಂಡರು.

ನ್ಯಾಯಮೂರ್ತಿ ಬಿ.ವಿ.ನಾಗರತ್ನ ಅವರು ಭಾರತದ ಮೊದಲ ಮಹಿಳಾ ಮುಖ್ಯ ನ್ಯಾಯಮೂರ್ತಿಯಾಗಿದ್ದಾರೆ. ಮುಖ್ಯ ನ್ಯಾಯಾಮೂರ್ತಿ ಎನ್.ವಿ.ರಮಣ ನೇತೃತ್ವದ ಸುಪ್ರೀಂಕೋರ್ಟ್ 9 ನ್ಯಾಯಾಧೀಶರ ಹೆಸರನ್ನು ಉನ್ನತ ನ್ಯಾಯಾಲಯಕ್ಕೆ ಬಡ್ತಿ ನೀಡಲು ಶಿಫಾರಸ್ಸು ಮಾಡಿದೆ. ನ್ಯಾಯಾಮೂರ್ತಿ ಬಿ.ವಿ.ನಾಗರತ್ನ ಅವರ ಹೆಸರನ್ನು ಸಹ ಅವರು ಶಿಫಾರಸ್ಸು ಮಾಡಿದ್ದಾರೆ. ಕೊಲಿಜಿಯಂ ಇತರ ಇಬ್ಬರು ಮಹಿಳೆಯರೊಂದಿಗೆ ಅವರನ್ನು ಶಿಫಾರಸ್ಸು ಮಾಡಿತು. ನ್ಯಾಯಾಮೂರ್ತಿ ಹಿಮಾ ಕೋಹಿ ಮತ್ತು ನ್ಯಾಯಮೂರ್ತಿ ಬೇಲಾ ತ್ರಿವೇದಿ ಇತರ ಇಬ್ಬರು.



## ಬಿ.ವಿ.ನಾಗರತ್ನ ರವರ ಹೇಳಿಕೆ

"ಭಾರತದ ಪಿತೃಪ್ರಧಾನ ಸಮಾಜಕ್ಕೆ ಸಶಕ್ತ ಮಹಿಳೆಯರನ್ನು ಹೇಗೆ ನಡೆಸಿಕೊಳ್ಳಬೇಕು ಎಂದು ತಿಳಿದಿಲ್ಲ" ಎಂದು ನಾಗರತ್ನ ತಮ್ಮ ನ್ಯಾಯಾಲಯದ ವಿಚಾರಣೆಯೊಂದರಲ್ಲಿ ಹೇಳಿದರು. ಈ ಹೇಳಿಕೆಯು ಶಕ್ತಿಯುತವಾಗಿತ್ತು ಮತ್ತು ಅವರು ಮಾಡಿದ ಪ್ರಮುಖ ಟೀಕೆಗಳಲ್ಲಿ ಒಂದಾಗಿದೆ. ಅದರ ನಂತರ ಮಧ್ಯಾಹ್ನದ ಊಟದ ವಿಷಯದಲ್ಲಿ, 'ಹಸಿದ ಹೊಟ್ಟೆಯಲ್ಲಿ ಯಾರೂ ಅಧ್ಯಯನ ಮಾಡಲು ಸಾಧ್ಯವಿಲ್ಲ' ಎಂದು ಅವರು ಹೇಳಿದರು. ನಂತರ ಅವರು "ಕಾನೂನಬಾಹಿರ ಪೋಷಕರು ಇರಬಹುದು ಆದರೆ ಎಂದಿಗೂ ಕಾನೂನುಬಾಹಿರ ಮಕ್ಕಳು ಇರಲು ಸಾಧ್ಯವಿಲ್ಲ ಎಂದಿದ್ದಾರೆ."

## ಮಹಿಳಾ ಮುಖ್ಯಸ್ಥರನ್ನು ಹೊಂದುವ ಬಗ್ಗೆ ಇತರರು ನೀಡಿದ ಹೇಳಿಕೆಗಳು ಗಮನಾರ್ಹ ತೀರ್ಪುಗಳು ಮತ್ತು ಅಭಿಪ್ರಾಯಗಳು.

ಅಪನಗದೀಕರಣ ತೀರ್ಪಿನಲ್ಲಿ ಭಿನ್ನಾಭಿಪ್ರಾಯ ನ್ಯಾಯಮೂರ್ತಿಗಳಾದ ಎಸ್ ಅಬ್ದುಲ್ ನಜೀರ್, ಬಿ.ಆರ್.ಗವಾಯಿ, ಎ.ಎಸ್.ಬೋಪಣ್ಣ, ವಿ.ರಾಮಸುಬ್ರಮಣಿಯನ್ ಅವರನ್ನೊಳ ಗೊಂಡ ಐದು ನ್ಯಾಯಾಧೀಶರ ಪೀಠದ ಭಾಗವಾಗಿ ನಾಗರತ್ನ ಅವರು 2022ರ ಡಿಸೆಂಬರ್ 7 ರಂದು ತೀರ್ಪನ್ನು ಕಾಯ್ದಿರಿಸಿದ್ದರು. ಜನವರಿ 2 2023 ರಂದು ಇದನ್ನು ಬಹಿರಂಗಪಡಿಸಲಾಯಿತು. 4–1 ಬಹುಮತದ ತೀರ್ಪು ಅಪನಗದೀಕರಣದ ಸಾಂವಿಧಾನಿಕ ಸಿಂಧುತ್ವವನ್ನು ಎತ್ತಿಹಿಡಿದರೆ ಜೆ.ನಾಗರತ್ನ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದರು.

500 ಮತ್ತು 1000 ರೂ.ಗಳ ನೋಟುಗಳು ಸಂಪೂರ್ಣ ಸರಣಿಯ ಅಪನಗದೀಕರಣವು ಗಂಬೀರ ವಿಷಯವಾಗಿದೆ ಮತ್ತು ಗೆಜೆಟ್ ಅಧಿಸೂಚನೆಯನ್ನು ಹೊರಡಿಸುವ ಮೂಲಕ ಕೇಂದ್ರವು ಇದನ್ನು ಮಾಡಲು ಸಾದ್ಯವಿಲ್ಲ ಎಂದು ಅವರು ಅಬಿಪ್ರಾಯಪಟ್ಟರು.

ಗವಾಯಿ ಜೆ ಅವರ ಬಹುಮತದ ತೀರ್ಪಿನಿಂದ ರೂಪಿಸಲಾದ ಪ್ರತಿಯೊಂದು ಪ್ರಶ್ನೆಗಳ ಬಗ್ಗೆ ಅವರ ಅಬಿಪ್ರಾಯಗಳು ಗಮನಾರ್ಹವಾಗಿ ಭಿನ್ನವಾಗಿವೆ ಎಂದು ಅವರು ಹೇಳಿದ್ದಾರೆ.

ಅವರ ತೀರ್ಪಿನ ಪ್ರಕಾರ ಈ ಕ್ರಮವು ಸದುದ್ದೇಶದಿಂದ ಕೂಡಿತ್ತು ಮತ್ತು ಚೆನ್ನಾಗಿ ಯೋಚಿಸಲಾಗಿತ್ತು. ಇದು ಕಪ್ಪುಹಣ, ಭಯೋತ್ಪಾದಕ ಧನಸಹಾಯ ಮತ್ತು ನಕಲಿಯಂತಹ ದುಷ್ಕೃತ್ಯಗಳನ್ನು ಗುರಿಯಾಗಿಸಿಕೊಂಡಿದೆ. ಈ ಕ್ರಮವನ್ನು ಸಂಪೂರ್ಣವಾಗಿ ಕಾನೂನು ಆಧಾರದ ಮೇಲೆ ಕಾನೂನುಬಾಹಿರವೆಂದು ಘೋಷಿಸಲಾಗುತ್ತದೆ ಮತ್ತು ವಸ್ತುಗಳ ಆಧಾರದ ಮೇಲೆ ಅಲ್ಲ.

## ಸಂವೇದನಾಶೀಲ ಸುದ್ದಿ

ನಾನು ವಾಹನ ತೆರಿಗೆ : 2016 ರಲ್ಲಿ ಅವರು ಇನ್ನೊಬ್ಬ ನ್ಯಾಯಾಧೀಶರೊಂದಿಗೆ ತೀರ್ಪು ನೀಡಿ, ಕರ್ನಾಟಕದಲ್ಲಿ ತಮ್ಮ ವಾಹನಗಳನ್ನು ಬಳಸಲು ರಾಜ್ಯದ ಹೊರಗೆ ಖರೀದಿಸಿದ ವಾಹನಗಳ ಮಾಲೀಕರು "ಜೀವಮಾನದ ತೆರಿಗೆ" ಪಾವತಿಸುವಂತೆ ಕರ್ನಾಟಕ ಸರ್ಕಾರ ಒತ್ತಾಯಿಸಲು ಸಾಧ್ಯವಿಲ್ಲ ಎಂದು ತೀರ್ಪುನೀಡಿದರು.

## ದೇವಾಲಯಗಳ ವಾಣಿಜ್ಯೇತರ ಸ್ಥಾನಮಾನ

2019ರಲ್ಲಿ ಇತರ ಇಬ್ಬರು ನ್ಯಾಯಾಧೀಶರೊಂದಿಗೆ ದೇವಾಲಯಗಳು ವಾಣಿಜ್ಯ ಸಂಸ್ಥೆಗಳಲ್ಲಿ ಮತ್ತು ಅದರಂತೆ ಗ್ರಾಚ್ಯುಟಿ ಪಾವತಿಗೆ ಸಂಬಂಧಿಸಿದ ಕಾರ್ಮಿಕ ಕಾನೂನುಗಳ ನಿಬಂಧನೆಗಳು ದೇವಾಲಯದ ಉದ್ಯೋಗಿಗಳಿಗೆ ಅನ್ವಯಿಸುವುದಿಲ್ಲ ಎಂದು ಅವರು ತೀರ್ಪು ನೀಡಿದರು.

## ಖಾಸಗಿ ಸಂಸ್ಥೆಗಳ ಸ್ವಾಯತ್ತತೆ

ಸೆಪ್ಟೆಂಬರ್ 15 2020 ರಂದು ಅವರು ಮತ್ತು ಇನ್ನೊಬ್ಬ ನ್ಯಾಯಾಧೀಶರು ಕರ್ನಾಟಕದ ಸಾರ್ವಜನಿಕ ಮತ್ತು ಖಾಸಗಿ ಕಾಲೇಜುಗಳಲ್ಲಿ ಪ್ರವೇಶದ ಪ್ರಮಾಣೀಕರಣವನ್ನು ಖಚಿತಪಡಿಸಿಕೊಳ್ಳಲು ಸರ್ಕಾರದ ನೀತಿಯನ್ನು ಎತ್ತಿಹಿಡಿದರು. ಭಾರತದಲ್ಲಿ ಕೋವಿಡ್ –19 ಸಾಂಕ್ರಮಿಕ ರೋಗವು ಖಾಸಗಿ ಸಂಸ್ಥೆಗಳ ಸ್ವಾಯತ್ತತೆಯನ್ನು ಮಿತಿಗೊಳಿಸಲು ಕಾರಣವೆಂದು ಉಲ್ಲೇಖಿಸಿದರು.

## ವಕೀಲರಿಂದ ಬಂಧನ

2009 ರಲ್ಲಿ, ಅವರು ಮತ್ತು ಇನ್ನೂಬ್ಬ ನ್ಯಾಯಾಧೀಶ ವೆಂಕಟಗೋಪಾಲಗೌಡ ಅವರನ್ನು ಕರ್ನಾಟಕ ಹೈಕೋರ್ಟ್ ಆಗಿನ ಮುಖ್ಯ ನ್ಯಾಯಮೂರ್ತಿಯೊಂದಿಗೆ ಕಾನೂನು ಬಾಹಿರವಾಗಿ ಬಂಧಿಸಲಾಯಿತು.

## ಕೋವಿಡ್ – 19 ಸಾಂಕ್ರಾಮಿಕ ಸಮಯದಲ್ಲಿ ಶಿಕ್ಷಣದ ಸ್ಥಿತಿ

ಕೋವಿಡ್ ಪೀಡಿತ ಪ್ರದೇಶಗಳಲ್ಲಿ ಮಧ್ಯಾಹ್ನದ ಊಟವನ್ನು ನಿಲ್ಲಿಸುವ ಕರ್ನಾಟಕ ಸರ್ಕಾದರ ಪ್ರಸ್ಥಾಪವನ್ನು ತಿರಸ್ಕರಿಸಿದ ನ್ಯಾಯಪೀಠದ ಭಾಗವಾಗಿ ನಾಗರತ್ನ ಇದ್ದರು. ಡಿಜಿಟಲ್ ವಿಭಜನೆಯನ್ನು ನಿವಾರಿಸಲು ಮತ್ತು ಮಕ್ಕಳಿಗೆ ಆನ್ಲೈನ್ ತರಗತಿಗಳಿಗೆ ಪ್ರವೇಶವನ್ನು ಖಚಿತಪಡಿಸಿಕೊಳ್ಳಲು ನ್ಯಾಯಪೀಠವು ಸರ್ಕಾರವನ್ನು ಮನವೊಲಿಸಿತು. ಇದಲ್ಲದೆ, ಶಿಕ್ಷಕರು ಮತ್ತು ಬೋಧಕೇತರ ಸಿಬ್ಬಂದಿಯನ್ನು ಮುಂಚೂಣಿ ಕಾರ್ಮಿಕರೆಂದು ಪರಿಗಣಿಸುವಂತೆ ನ್ಯಾಯಪೀಠ ನಿರ್ದೇಶನ ನೀಡಿತು.

## ಆಕಾರ:– ಇ.ಎಸ್.ವೆಂಕಟರಾಮಯ್ಯ ಜೀವನ ಅವಲೋಕನ

- **ಅಂತರ್ಜಾಲ ಆದಾರಿತ ಮಾಹಿತಿ**

**ಮಣಿ.ಸಿ.ಎಂ** ಗ್ರಂಥಪಾಲಕರು

ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯ, ಕೃಷ್ಣರಾಜಪೇಟೆ.

-THE END-

# ಸಂಪಾದಕ ಮಂಡಳಿ



**ಪಿ.ಸುರೇಶ**
ಪ್ರಾಂಶುಪಾಲರು



**ಕೆ.ಶಿವಕುಮಾರ್**
ಸಹ ಪ್ರಾಧ್ಯಾಪಕರು



**ಕೆ. ಮಹಾಲಿಂಗು**
ಸಹ ಪ್ರಾಧ್ಯಾಪಕರು



**ಎಸ್.ಮಹದೇವಸ್ವಾಮಿ**
ಸಹ ಪ್ರಾಧ್ಯಾಪಕರು



**ಸತೀಶ್ ಎಂ ವಿ**
ಸಹ ಪ್ರಾಧ್ಯಾಪಕರು



**ಮಣಿ ಸಿ ಎಂ**
ಗ್ರಂಥಪಾಲಕರು



**ದಿನೇಶ್ ಆರಾಧ್ಯ**
ದ್ವಿತೀಯ ಬಿ.ಇಡಿ



**ಲಾವಣ್ಯ ಬಿ ವಿ**
ದ್ವಿತೀಯ ಬಿ.ಇಡಿ



**ಅರ್ಚನ ಎಲ್.ಎನ್**
ದ್ವಿತೀಯ ಬಿ.ಇಡಿ



**ಮನುಲ ಪಿ**
ದ್ವಿತೀಯ ಬಿ.ಇಡಿ



**ಸುಷ್ಮಿತ ಎಸ್**
ದ್ವಿತೀಯ ಬಿ.ಇಡಿ



**ಚಂದ್ರಶೇಖರ ಬಿ.ಕೆ**
ದ್ವಿತೀಯ ಬಿ.ಇಡಿ



**ಸಂತೋಷ ಎನ್ ಪಿ**
ದ್ವಿತೀಯ ಬಿ.ಇಡಿ



**ಅನುಶ್ರೀ ಎಸ್**
ಪ್ರಥಮ ಬಿ.ಇಡಿ



**ಓಂಶ್ರೀ ಹೆಚ್ ಆರ್**
ಪ್ರಥಮ ಬಿ.ಇಡಿ